ಏಪ್ರಿಲ್ 26, 2026
41ನೇ ವರ್ಷದಲ್ಲಿ
http//policenews.news Police News
police_news
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2034
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-

## ಯೋಗೇಶ್‌ಗೌಡ ಹತ್ಯೆ ಪ್ರಕರಣದಲ್ಲಿ

# ವಿನಯ್ ಕುಲಕರ್ಣಿಗೆ ಜೀವಾವಧಿ



## ಗಳಗಳನೆ ಅತ್ತ ಶಾಸಕ



## ಧಾರವಾಡದಲ್ಲಿ ಕಾಂಗ್ರೆಸ್ ಯುವ ಮುಖಂಡನ ಹತ್ಯೆ!

## ಒಡವೆಗಾಗಿ ರುಂಡ-ಮುಂಡ ಬೇರ್ಪಡಿಸಿ ಕ್ರೂರ ಕೊಲೆ!

## ಅಕ್ರಮ ಸಂಬಂಧ–ಹಣದ ವ್ಯಾಮೋಹಕ್ಕೆ ಬಲಿಯಾದ ಶಿಕ್ಷಕಿ!





## ಸೋತಲ್ಲೇ ಗೆಲ್ಲಲು ದಳಪತಿಗಳ ಶಪಥ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

### ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಮಂಗಳೂರು ಪೊಲೀಸ್ ಆಯುಕ್ತರ ವಿರುದ್ಧ ಇದೆಂಥಹ ಆರೋಪ..?

ಕಳೆದ 10 ತಿಂಗಳುಗಳಿಂದ ಮಂಗಳೂರು ನಗರ ಪೊಲೀಸ್ ಆಯುಕ್ತರಾಗಿರುವವರು ಆಂಧ್ರಪ್ರದೇಶ ಮೂಲದ ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿ ಸುಧೀರ್ ಕುಮಾರ್ ರೆಡ್ಡಿ. 2012ರ ಐಪಿಎಸ್ ಬ್ಯಾಚ್‌ನ ಅಧಿಕಾರಿ. 2016ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿಯಾಗಿದ್ದರು. ಆ ಸಂದರ್ಭದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತನಾಗಿದ್ದ ಶರತ್ ಮಡಿವಾಳ ಎಂಬ ಯುವಕನನ್ನು ದುಷ್ಕರ್ಮಿಗಳ ಗುಂಪೊಂದು ಬಿಸಿರೋಡಿನಲ್ಲಿರುವ ಆತನ ಉದಯ ಲಾಂಡ್ರಿ ಎಂಬ ಅಂಗಡಿಯಲ್ಲೇ ಕತ್ತಿಯಿಂದ ಕಡಿದು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಶರತ್ ಮಡಿವಾಳನನ್ನು ಪಕ್ಕದ ಅಂಗಡಿಯ ಮುಸ್ಲಿಂ ಯುವಕನೊಬ್ಬ ಕಾರಿನಲ್ಲಿ ಮಂಗಳೂರಿನ ಎಜೆ ಆಸ್ಪತ್ರೆಗೆ ದಾಖಲಿಸಿದ್ದರು. ಅದೇ ದಿನ ರಾತ್ರಿ ಶರತ್ ಮಡಿವಾಳ ಮೃತಪಟ್ಟಿದ್ದರೂ ಎರಡು ದಿನಗಳ ಬಳಿಕ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಸಿದ್ಧರಾಮಯ್ಯನವರು ಭಾಗವಹಿಸಬೇಕಾಗಿದ್ದ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿ ಗಳ ಸಮ್ಮೇಳನದ ಹಿನ್ನೆಲೆಯಲ್ಲಿ ಮರಣ ವಾರ್ತೆಯನ್ನು ತಡೆ ಹಿಡಿಯಲಾಗಿತ್ತು. ಮುಖ್ಯಮಂತ್ರಿಗಳ ಭೇಟಿ ಕಾರ್ಯಕ್ರಮ ಮುಗಿದ ಬಳಿಕ ಶರತ್ ಮಡಿವಾಳ ಇನ್ನಿಲ್ಲ ಎಂಬ ಸುದ್ದಿ ಹರಡಿತ್ತು. ಮಂಗಳೂರಿನಿಂದ ಸಜಿಪ ಮುನ್ನೂರು ಗ್ರಾಮದ ಕಂದೂರಿನ ಆತನ ಮನೆಗೆ ಮೃತದೇಹವನ್ನು ಭಾರೀ ವಾಹನಗಳ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗಿತ್ತು. ಈ ಸಂದರ್ಭದಲ್ಲಿ ಬಿಸಿ ರೋಡ್ ಕೈಕಂಬದಲ್ಲಿ ಕಲ್ಲು ತೂರಾಟ ನಡೆದಿದ್ದರೂ ಪರಿಸ್ಥಿತಿಯನ್ನು ಪೊಲೀಸರು ನಿಯಂತ್ರಿಸಿದ್ದರು.




ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಪಿಯಾಗಿದ್ದ ಸುಧೀರ್ ಕುಮಾರ್ ರೆಡ್ಡಿಯವರು ವಿಶೇಷ ತಂಡಗಳನ್ನು ರಚಿಸಿ ಆರೋಪಿಗಳ ಪತ್ತೆಗೆ ಶ್ರಮಿಸಿದ್ದರು. ಕೆಲವೇ ದಿನಗಳಲ್ಲಿ ಆರೋಪಿಗಳ ಬಂಧನವೂ ಆಗಿತ್ತು. ಮೇಲ್ನೋಟಕ್ಕೆ ಬೆಂಜನಪದವಿನಲ್ಲಿ ನಡೆದಿದ್ದ ಎಸ್‌ಡಿಪಿಐ ಕಾರ್ಯಕರ್ತನ ಹತ್ಯೆಗೆ ಪ್ರತೀಕಾರವಾಗಿ ಈ ಹತ್ಯೆ ನಡೆದಿದೆ ಎಂದು ಹೇಳಲಾಗುತ್ತಿತ್ತು. ಅದಕ್ಕೆ ಸರಿಯಾಗಿಯೇ ಚಾಮರಾಜನಗರದ ಪಿಎಫ್‌ಐ ಕಾರ್ಯಕರ್ತರನ್ನು ಈ ಹತ್ಯೆಗೆ ಸಂಬಂಧಿಸಿದಂತೆ ಬಂಧಿಸಲಾಗಿತ್ತು. ಅವರ ವಿಚಾರಣೆಯ ಸಂದರ್ಭದಲ್ಲಿ ಕಾರಾಜೆಯ ಕಲಂದರ್ ಎಂಬಾತ ಡೀಲ್ ನೀಡಿರುವುದು ಬೆಳಕಿಗೆ ಬಂದಿತ್ತು. ಆತನನ್ನು ಬಂಧಿಸಲು ಪೊಲೀಸರ ತಂಡ ಮನೆಗೆ ನುಗ್ಗಿದ ಸಂದರ್ಭದಲ್ಲಿ ಪೊಲೀಸರು ಮುಸ್ಲಿಮರ ಪವಿತ್ರ ಗ್ರಂಥಕ್ಕೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಹಂತದಲ್ಲಿ ಸುಧೀರ್ ಕುಮಾರ್ ರೆಡ್ಡಿ ಅವರನ್ನು ಅವಧಿ ಪೂರ್ವವಾಗಿ ವರ್ಗಾವಣೆ ಮಾಡಲಾಗಿತ್ತು. ಈ ಘಟನೆಯಾಗಿ ಹಲವು ವರ್ಷಗಳ ಬಳಿಕ ಮಂಗಳೂರಿನಲ್ಲಿ ಮತ್ತೇ ಕೋಮು ಸಂಘರ್ಷ ಸೃಷ್ಟಿಯಾಗುವ ಸಂದರ್ಭದಲ್ಲಿ ಎರಡೆರಡು ಹತ್ಯಾ ಪ್ರಕರಣಗಳು ನಡೆದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಸುಧೀರ್ ಕುಮಾರ್ ರೆಡ್ಡಿ ಅವರನ್ನು ಮಂಗಳೂರು ನಗರ ಪೊಲೀಸ್ ಆಯುಕ್ತರನ್ನಾಗಿ ನೇಮಿಸಿ ಆದೇಶ ಹೊರಡಿಸಿತ್ತು.

ಸುಧೀರ್ ಕುಮಾರ್ ರೆಡ್ಡಿಯವರು ಪೊಲೀಸ್ ಆಯುಕ್ತರಾಗಿ ಮಂಗಳೂರು ಆಯುಕ್ತಾಲಯದ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಅಕ್ರಮ ಚಟುವಟಿಕೆಗಳಿಗೆ ನಿಯಂತ್ರಣ ಹೇರಿದ್ದಾರೆ. ಕೆಲವು ದಿನಗಳ ಹಿಂದೆ ತೊಕ್ಕೊಟ್ಟುವಿನಲ್ಲಿ ನಡೆದ ಆರೀಫ್ ಹತ್ಯಾ ಪ್ರಕರಣವನ್ನು ಹೊರತುಪಡಿಸಿ ಗಂಭೀರವಾದ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಹ ಘಟನೆಗಳು ನಡೆದಿಲ್ಲ. ಮಂಗಳೂರು ಪರಿಸರದಲ್ಲಿ ವ್ಯಾಪಕವಾಗಿ ಹಬ್ಬಿದ್ದ ಮಾದಕ ವಸ್ತು ಜಾಲವನ್ನು ಬುಡ ಸಮೇತ ಕಿತ್ತು ಹಾಕುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಹಳೆಯ ಪ್ರಕರಣಗಳಲ್ಲಿ ಒಳಗೊಂಡು ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಅಪರಾಧಿ

☞ 3

# ಸಂಪುಟ ಪುನರ್‌ರಚನೆ ಸುತ್ತ ಕಾಂಗ್ರೆಸ್ ಒಳರಾಜಕೀಯ



ಸಂಪಾದಕ
**ಎಂ. ರಾಹುಲ್**

ಕರ್ನಾಟಕ ಕಾಂಗ್ರೆಸ್‌ನಲ್ಲಿ ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆಗಳು ಕೇವಲ ಸಂಪುಟ ಪುನರ್ ರಚನೆಗೆ ಸೀಮಿತವಾದ ಆಡಳಿತಾತ್ಮಕ ಪ್ರಕ್ರಿಯೆಯಲ್ಲ ಎಂಬುದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಿದೆ ಇದು ಪಕ್ಷದ ಒಳಗಿನ ಶಕ್ತಿಸಾಮ್ಯತೆ ಅಸಮಾಧಾನ ಹಾಗೂ ನಾಯಕತ್ವದ ಪ್ರಶ್ನೆಗಳ ಸಮಗ್ರ ಪ್ರತಿಫಲನವಾಗಿದೆ ಕಳೆದ ಕೆಲವು ದಿನಗಳಿಂದ ದೆಹಲಿಯಲ್ಲಿ ಬೀಡುಬಿಟ್ಟಿರುವ ಹಿರಿಯ ಶಾಸಕರ ಚಟುವಟಿಕೆಗಳು ಕೇವಲ ಸ್ಥಾನಗಳ ಹಂಚಿಕೆಗೆ ಒತ್ತಾಯಿಸುವ ಮಟ್ಟದಲ್ಲಿ ನಿಲ್ಲದೆ ಹೈಕಮಾಂಡ್ ಮೇಲೆ ನೇರ ಒತ್ತಡ ಹೇರುವ ರಾಜಕೀಯ ತಂತ್ರವಾಗಿ ರೂಪಾಂತರಗೊಂಡಿವೆ ಈ ಬೆಳವಣಿಗೆಗಳು ರಾಜ್ಯದಲ್ಲಿ ಅಧಿಕಾರದಲ್ಲಿರುವ ಸರ್ಕಾರದ ಒಳಚರಿತ್ರೆಯನ್ನೇ ಬಯಲಿಗೆಳೆಯುತ್ತಿವೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸ್ಥಿರವಾಗಿದೆ ಎಂಬ ಚಿತ್ರಣ ಹೊರಗೆ ಕಾಣಿಸಿಕೊಂಡರೂ ಒಳಗೆ ಅಸಮಾಧಾನಗಳು ಮೌನವಾಗಿ ಕುದಿಯುತ್ತಿವೆ ಎರಡು ಅರ್ಧ ವರ್ಷಗಳ ಬಳಿಕ ಸಂಪುಟದಲ್ಲಿ ಬದಲಾವಣೆ ಮಾಡುವ ಭರವಸೆ ಇದೀಗ ಶಾಸಕರ ಕೈಯಲ್ಲಿ ರಾಜಕೀಯ ಒತ್ತಡದ ಸಾಧನವಾಗಿ ಪರಿಣಮಿಸಿದ್ದು ತಮ್ಮ ಪಾಲಿನ ಅವಕಾಶಕ್ಕಾಗಿ ಅವರು ಗಟ್ಟಿಯಾಗಿ ಧ್ವನಿ ಎತ್ತುತ್ತಿದ್ದಾರೆ ಇದು ಪ್ರಜಾಪ್ರಭುತ್ವದ ಚಟುವಟಿಕೆಯಲ್ಲಿ ಸಹಜವಾದ ಸಂಗತಿಯೇ ಆದರೂ ಇದರ ತೀವ್ರತೆ ಆಡಳಿತದ ದಿಕ್ಕು ಮತ್ತು ವೇಗವನ್ನು ಬದಲಾಯಿಸುವ ಮಟ್ಟಕ್ಕೆ ತಲುಪಿದಾಗ ಅದು ಸರ್ಕಾರದ ಕಾರ್ಯಕ್ಷಮತೆಯ ಮೇಲೆಯೇ ಪರಿಣಾಮ ಬೀರುವ ಸಾಧ್ಯತೆ ಉಂಟಾಗುತ್ತದೆ ಹೀಗಾಗಿ ಈ ಒತ್ತಡವನ್ನು ಕೇವಲ ವೈಯಕ್ತಿಕ ಆಸೆ ಅಥವಾ ಹುದ್ದೆಗಳ ರಾಜಕೀಯವಾಗಿ ನೋಡುವುದಕ್ಕಿಂತ ಪಕ್ಷದ ಒಳಸಂರಚನೆಯ ಸಂಕೇತವಾಗಿ ಪರಿಗಣಿಸಬೇಕಾಗಿದೆ.



ಇದಕ್ಕಿಂತಲೂ ಗಂಭೀರವಾದ ವಿಷಯ ನಾಯಕತ್ವದ ಪ್ರಶ್ನೆ ಆಗಿದೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಳಯವು ಸಂಪುಟ ಪುನರ್ ರಚನೆಗೂ ಮುನ್ನ ನಾಯಕತ್ವದ ಸ್ಪಷ್ಟತೆ ಅಗತ್ಯ ಎಂದು ಒತ್ತಾಯಿಸುತ್ತಿರುವುದು ಪಕ್ಷದ ಒಳಗಿನ ಅಸಮತೋಲನವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ ಸರ್ಕಾರದೊಳಗೆ ಎರಡು ಪ್ರಭಾವ ಕೇಂದ್ರಗಳು ತಮ್ಮ ತಮ್ಮ ಹಿಡಿತ ಸಾಧಿಸಲು ಪ್ರಯತ್ನಿಸಿದಾಗ ಆಡಳಿತದಲ್ಲಿ ಸ್ಥಿರತೆ ಕುಂದುವ ಸಾಧ್ಯತೆ ಹೆಚ್ಚುತ್ತದೆ ಇದೇ ಸಂದರ್ಭದಲ್ಲಿ ಹೈಕಮಾಂಡ್‌ನ ಪಾತ್ರ ಅತ್ಯಂತ ನಿರ್ಣಾಯಕವಾಗುತ್ತದೆ ಮಲ್ಲಿಕಾರ್ಜುನ ಖರ್ಗೆ ಅವರ ಪ್ರತಿಕ್ರಿಯೆಗಳು ಹಾಗೂ ಸಿದ್ದರಾಮಯ್ಯ ಅವರ ಆಡಳಿತ ಶೈಲಿಯ ಬಗ್ಗೆ ವ್ಯಕ್ತವಾಗುತ್ತಿರುವ ಅಸಮಾಧಾನ ಪಕ್ಷದ ಒಳಗಿನ ವಿಶ್ವಾಸದ ಮಟ್ಟವನ್ನು ಪ್ರಶ್ನಿಸುವಂತಾಗಿದೆ ಹೈಕಮಾಂಡ್ ಮಧ್ಯಸ್ಥಿಕೆ ಮಾಡುವ ಪ್ರಯತ್ನಗಳು ನಡೆಯುತ್ತಿದ್ದರೂ ಮೂಲಭೂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ಇನ್ನೂ ಸ್ಪಷ್ಟತೆ ಕಾಣಿಸುತ್ತಿಲ್ಲ ನಾಯಕತ್ವದ ಪ್ರಶ್ನೆಯನ್ನು ಮುಂದೂಡುವ ತಂತ್ರ ಕೆಲಕಾಲ ರಾಜಕೀಯವಾಗಿ ಅನುಕೂಲಕರವಾಗಬಹುದು ಆದರೆ ದೀರ್ಘಾವಧಿಯಲ್ಲಿ ಅದು ಒಳಜಗಳವನ್ನು ಮತ್ತಷ್ಟು ಗಾಢಗೊಳಿಸುವ ಅಪಾಯವನ್ನುಂಟುಮಾಡುತ್ತದೆ ಹೀಗಾಗಿ ಈ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡುವುದು ಅನಿವಾರ್ಯವಾಗಿದೆ ಇಲ್ಲದಿದ್ದರೆ ಪಕ್ಷದ ಒಳಗಿನ ಶಕ್ತಿಸಾಮ್ಯತೆ ನಿರಂತರವಾಗಿ ಅಸ್ಥಿರವಾಗುತ್ತಲೇ ಇರುತ್ತದೆ



ಇನ್ನೊಂದೆಡೆ ದಾವಣಗೆರೆ ದಕ್ಷಿಣ ಉಪಚುನಾವಣೆಯ ಸುತ್ತ ಉಂಟಾದ ವಿವಾದಗಳು ಕಾಂಗ್ರೆಸ್ ಎದುರಿಸುತ್ತಿರುವ ಸಾಮಾಜಿಕ ಸಮತೋಲನದ ಸವಾಲನ್ನು ಬಯಲಿಗೆಳೆಯುತ್ತಿವೆ ಮುಸ್ಲಿಂ ನಾಯಕರಿಗೆ ಟಿಕೆಟ್ ಕೈ ತಪ್ಪಿದ ವಿಚಾರ ಹಾಗೂ ನಂತರ ಕೈಗೊಂಡ ಶಿಸ್ತು ಕ್ರಮಗಳು ಪಕ್ಷದೊಳಗಿನ ಅಸಮಾಧಾನವನ್ನು ಹೆಚ್ಚಿಸಿವೆ ಎಂಎಲ್ಸಿ ಅಬ್ದುಲ್ ಜಬ್ಬಾರ್ ಅಮಾನತು ಮತ್ತು ನಸೀರ್ ಅಹ್ಮದ್ ರಾಜೀನಾಮೆ ವಿಷಯಗಳು ಕೇವಲ ವೈಯಕ್ತಿಕ ಘಟನೆಗಳಲ್ಲ ಅವು ಸಮುದಾಯದ ಮಟ್ಟದಲ್ಲಿ ಪ್ರತಿಫಲಿಸುವ ರಾಜಕೀಯ ಸಂದೇಶಗಳಾಗಿವೆ ಸಚಿವ ಸಂಪುಟ ಸಭೆಯಲ್ಲೇ ಈ ವಿಷಯದ ಬಗ್ಗೆ ತೀವ್ರ ಚರ್ಚೆ ನಡೆದಿರುವುದು ಸರ್ಕಾರದ ಒಳಗಿನ ಭಿನ್ನಾಭಿಪ್ರಾಯಗಳನ್ನು ಬಯಲಿಗೆಳೆದಿದೆ ಪ್ರಿಯಾಂಕ್ ಖರ್ಗೆ ಮತ್ತು ಸತೀಶ್ ಜಾರಕಿಹೊಳಿ ಮುಂತಾದ ನಾಯಕರು ವ್ಯಕ್ತಪಡಿಸಿದ ಆತಂಕಗಳು ಪಕ್ಷದ ಸಮಾವೇಶಾತ್ಮಕ ರಾಜಕೀಯದ ಮೂಲಭೂತ ತತ್ವಗಳನ್ನು ನೆನಪಿಸುತ್ತವೆ ಯಾವುದೇ ಸಮುದಾಯವನ್ನು ದೂರ ಮಾಡುವ ಭಾವನೆ ಮೂಡಿದರೆ ಅದು ಚುನಾವಣಾ ಮಟ್ಟದಲ್ಲಿ ದೊಡ್ಡ ಪರಿಣಾಮ ಬೀರುತ್ತದೆ ಎಂಬ ಎಚ್ಚರಿಕೆಯನ್ನು ಅವರು ನೀಡಿದ್ದಾರೆ ಇದರ ವಿರುದ್ಧವಾಗಿ ತಪ್ಪು ಮಾಡಿದವರಿಗೆ ಕ್ರಮ ಅನಿವಾರ್ಯ ಎಂಬ ವಾದವೂ ಕೇಳಿಬರುತ್ತಿದ್ದು ಪಕ್ಷದೊಳಗಿನ ದೃಷ್ಟಿಕೋನಗಳ ವ್ಯತ್ಯಾಸ ಇನ್ನಷ್ಟು ಸ್ಪಷ್ಟವಾಗುತ್ತಿದೆ ಈ ರೀತಿಯ ವಾದ ಪ್ರತಿವಾದಗಳು ಪ್ರಜಾಪ್ರಭುತ್ವದ ಭಾಗವೇ ಆಗಿದ್ದರೂ ಅವು ನಿಯಂತ್ರಣ ತಪ್ಪಿದಾಗ ಸಂಘಟನೆಯ ಏಕತೆಯ ಮೇಲೆ ಪರಿಣಾಮ ಬೀರುತ್ತವೆ



ಈ ಸಂದರ್ಭದಲ್ಲಿ ಸಂಪುಟ ಸಭೆಯಲ್ಲಿ ಉಂಟಾದ ಉದ್ವಿಗ್ನ ವಾತಾವರಣ ಮತ್ತು ಕೆಲ ಸಚಿವರು ಸಭೆಯಿಂದ ಹೊರನಡೆದ ಘಟನೆಗಳು ಪಕ್ಷದ ಒಳಗಿನ ಒತ್ತಡ ಎಷ್ಟರ ಮಟ್ಟಿಗೆ ಏರಿದೆ ಎಂಬುದಕ್ಕೆ ಉದಾಹರಣೆಯಾಗಿವೆ ಅಂತಿಮವಾಗಿ ಮುಖ್ಯಮಂತ್ರಿ ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ಶಮನಗೊಳಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಆಡಳಿತದ ಒಳಗಿರುವ ಗೊಂದಲವನ್ನು ಸೂಚಿಸುತ್ತದೆ ಇದು ಕೇವಲ ಒಂದು ಸಭೆಯ ಘಟನೆ ಅಲ್ಲ ಮುಂದಿನ ದಿನಗಳಲ್ಲಿ ಇದೇ ರೀತಿಯ ಸಂಘರ್ಷಗಳು ಮರುಕಳಿಸುವ ಸಾಧ್ಯತೆಯನ್ನು ಸೂಚಿಸುತ್ತದೆ ಪಕ್ಷದೊಳಗಿನ ಅಸಮಾಧಾನಗಳನ್ನು ಸರಿಯಾಗಿ ನಿರ್ವಹಿಸದಿದ್ದರೆ ಅವು ಕ್ರಮೇಣ ಸಾರ್ವಜನಿಕವಾಗಿ ವ್ಯಕ್ತವಾಗಿ ಸರ್ಕಾರದ ವಿಶ್ವಾಸಾರ್ಹತೆಯನ್ನು ಕುಗ್ಗಿಸುವ ಅಪಾಯವಿದೆ ಹೀಗಾಗಿ ಸಂಘಟನಾ ಮಟ್ಟದಲ್ಲಿ ಸಮನ್ವಯ ಸಾಧಿಸುವುದು ಮತ್ತು ಎಲ್ಲ ವಲಯಗಳಿಗೂ ನ್ಯಾಯ ದೊರಕುವಂತೆ ಕ್ರಮ ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ

ಒಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ಈಗ ನಿರ್ಣಾಯಕ ಘಟ್ಟವನ್ನು ಎದುರಿಸುತ್ತಿದೆ ಒಂದೆಡೆ ಅಧಿ ಕಾರ ಹಂಚಿಕೆ ಮತ್ತು ನಾಯಕತ್ವದ ಸಮತೋಲನವನ್ನು ಕಾಪಾಡಬೇಕಾದ ಸವಾಲು ಮತ್ತೊಂದೆಡೆ ಸಾಮಾಜಿಕ ಸಮೀಕರಣಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕಾದ ಜವಾಬ್ದಾರಿ ಎರಡನ್ನೂ ಸಮನಾಗಿ ನಿಭಾಯಿಸುವಲ್ಲಿ ವಿಫಲವಾದರೆ ಅದರ ಪರಿಣಾಮ ಕೇವಲ ಒಳರಾಜಕೀಯಕ್ಕೆ ಸೀಮಿತವಾಗದೆ ರಾಜ್ಯದ ರಾಜಕೀಯ ಭವಿಷ್ಯದ ಮೇಲೆಯೂ ಬೀಳಬಹುದು ಹೈಕಮಾಂಡ್ ಈ ಹಂತದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಮುಂದಿನ ರಾಜಕೀಯ ದಿಕ್ಕನ್ನು ನಿರ್ಧರಿಸುವ ಪ್ರಮುಖ ಅಂಶವಾಗಲಿದೆ ಸಂಪುಟ ಪುನರ್ ರಚನೆ ಕೇವಲ ಸ್ಥಾನಗಳ ಹಂಚಿಕೆಯ ಪ್ರಕ್ರಿಯೆಯಾಗದೆ ಆಡಳಿತದ ಗುಣಮಟ್ಟವನ್ನು ಹೆಚ್ಚಿಸುವ ಸಾಧನವಾಗಬೇಕು ಹಾಗೆಯೇ ನಾಯಕತ್ವದ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡುವುದರಿಂದ ಪಕ್ಷದೊಳಗಿನ ಗೊಂದಲವನ್ನು ನಿವಾರಿಸಬಹುದು ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ಸಹಜವಾದರೂ ಅವುಗಳನ್ನು ಸಮನ್ವಯಗೊಳಿಸುವ ಸಾಮರ್ಥ್ಯವೇ ಯಶಸ್ವಿ ನಾಯಕತ್ವದ ಗುರುತು ಈಗ ಕರ್ನಾಟಕ ಕಾಂಗ್ರೆಸ್ ಅದೇ ಪರೀಕ್ಷೆಯನ್ನು ಎದುರಿಸುತ್ತಿದ್ದು ಈ ಪರೀಕ್ಷೆಯನ್ನು ಅದು ಹೇಗೆ ನಿಭಾಯಿಸುತ್ತದೆ ಎಂಬುದೇ ಅದರ ಭವಿಷ್ಯವನ್ನು ನಿರ್ಧರಿಸಲಿದೆ.

-ಸಂ.

2 ☜

ಗಳು ಜೈಲು ಸೇರುತ್ತಿದ್ದಾರೆ. ಯಾರನ್ನೂ ಸಹ ಓಲೈಸದೆ ಕಾನೂನು ಬದ್ಧವಾಗಿ ಕರ್ತವ್ಯ ನಿರ್ವಹಿಸುತ್ತಾ ತನ್ನ ಅಧೀನ ಅಧಿಕಾರಿಗಳಿಗೂ ಶಿಸ್ತಿನ ಪಾಠ ಹೇಳಿ ಕೊಡುತ್ತಿರುವಂತಹ ಸುಧೀರ್ ಕುಮಾರ್ ರೆಡ್ಡಿಯವರ ವಿರುದ್ಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂಎ ಸಲೀಂ ಅವರಿಗೆ ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಸ್‌ಪಿ ಎಸ್ ಕಾಶೀನಾಥ್ ಅವರು ಬರೆದಿರುವಂತಹ ಪತ್ರ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸಂಚಲನ ಸೃಷ್ಟಿಸಿದೆ. ಈ ಪತ್ರದ ಮೂಲ ಪ್ರತಿ ಹೀಗಿದೆ.

ಎಪ್ರಿಲ್ ತಿಂಗಳ ಕೊನೆಯಲ್ಲಿ ಸೇವಾ ನಿವೃತ್ತಿ ಹೊಂದುತ್ತಿರುವ ಇವರು ಮಾನ್ಯ ಪೊಲೀಸ್ ಮಹಾನಿರ್ದೇಶಕರಿಗೆ ಬರೆದಿರುವ ಈ ಪತ್ರದಲ್ಲಿ 30 ನಿಮಿಷ ಸಮಯ ನೀಡಿದರೆ ಐಪಿಎಸ್ ಅಧಿಕಾರಿಯ ಕರ್ಮಕಾಂಡವನ್ನು ಸಂಪೂರ್ಣವಾಗಿ ಬಯಲು ಮಾಡುತ್ತೇನೆ ಎಂದು ಎಸ್ಪಿ ಕಾಶಿನಾಥ್ ಸ್ಪಷ್ಟವಾಗಿ ತಿಳಿಸಿದ್ದಾರೆ. ಈಎಕ ಅವರಿಗೆ ಬರೆದಿರುವ ಪತ್ರದಲ್ಲಿ ಮಾನಸಿಕ ಕಿರುಕುಳ ಮತ್ತು ತಾರತಮ್ಯ ಆರೋಪಗಳನ್ನು ಉಲ್ಲೇಖಿಸಿರುವ ಅವರು, ತನ್ನ ಮೇಲೆ ಅನ್ಯಾಯವಾಗುತ್ತಿರುವುದಾಗಿ ದೂರಿದ್ದಾರೆ.


ಎಸ್ಪಿ ಕಾಶಿನಾಥ್

ಎಸ್ಪಿ ಅವರ ಪ್ರಕಾರ, ಅವರು ಹೇಳಿದಂತೆ ಕೆಲಸ ಮಾಡದಿದ್ದರೆ ಮೆಮೊ ನೀಡುವ ಮೂಲಕ ಮಾನಸಿಕ ಹಿಂಸೆ ನೀಡಲಾಗುತ್ತಿದೆ. ವಿಶೇಷವಾಗಿ ಕರ್ನಾಟಕದ ಅಧಿಕಾರಿಗಳನ್ನು ಟಾರ್ಗೆಟ್ ಮಾಡಿ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಈ ಕುರಿತು ಈಗಾಗಲೇ ಹಲವು ಬಾರಿ ಲಿಖಿತ ದೂರು ನೀಡಿದ್ದರೂ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅವರು ತಿಳಿಸಿದ್ದಾರೆ. ಅಲ್ಲದೇ, ಈ ವಿಷಯವನ್ನು ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರ ಗಮನಕ್ಕೂ ತರಬೇಕು ಎಂದು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಇದೇ ಹಿನ್ನಲೆಯಲ್ಲಿ, ಒಂದು ವಾರದೊಳಗೆ ತಮ್ಮನ್ನು ಭೇಟಿ ಮಾಡಲು ಅವಕಾಶ ಕಲ್ಪಿಸುವಂತೆ ಈಎಕ ಅವರನ್ನು ವಿನಂತಿಸಿರುವ ಎಸ್ಪಿ, ಮುಕ್ತವಾಗಿ ಮಾತನಾಡಿ ಸತ್ಯಾಂಶವನ್ನು ಬಯಲು ಮಾಡುವ ಉದ್ದೇಶ ಹೊಂದಿದ್ದಾರೆ. ಈ ಘಟನೆ ರಾಜ್ಯ ಪೊಲೀಸ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಮುಂದಿನ ಬೆಳವಣಿಗೆಗಳತ್ತ ಎಲ್ಲರ ಗಮನ ಹರಿದಿದೆ.

ಪತ್ರ ಬರೆದಿರುವ ಎಸ್ಪಿ ಕಾಶೀನಾಥ್ ಅವರು ನಾನ್ ಐಪಿಎಸ್ ಎಸ್ಪಿ ಶ್ರೇಣಿಯ ಅಧಿಕಾರಿ. ಸುಮಾರು 30 ವರ್ಷಗಳಷ್ಟು ಸೇವಾ ಅನುಭವ ಹೊಂದಿದವರು. ಪ್ರಸ್ತುತ ಇರುವಂತಹ ಹುದ್ದೆಯಲ್ಲಿ ದಲಿತ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ದಾಖಲಾಗುವಂತಹ ಪ್ರಕರಣದ ತನಿಖೆಯ ಮೇಲುಸ್ತುವಾರಿಯನ್ನು ವಹಿಸಿಕೊಂಡವರು. ಅವರಿಗೂ ಮಂಗಳೂರು ಪೊಲೀಸ್ ಆಯುಕ್ತರಾದಂತಹ ಸುಧೀರ್ ಕುಮಾರ್ ರೆಡ್ಡಿಯವರಿಗೂ ನೇರಾನೇರಾ ಸಂಬಂಧವಿಲ್ಲ. ಹಾಗಿದ್ದರೂ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದೇಕೆ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ.

-ಮೋಹನ್ ಬೋಳಂಗಡಿ

# ಮುಂಡಗೋಡಿನಲ್ಲಿ ಒಡವೆಗಾಗಿ ಕ್ರೂರ ಹತ್ಯೆ: ರುಂಡಮುಂಡ ಬೇರ್ಪಡಿಸಿದ ಅಮಾನುಷ ಕೃತ್ಯ!


ಆರೋಪಿ ಕೃಷ್ಣ


ಉತ್ತರ ಕನ್ನಡ

✍ ಸಂತೋಷಕುಮಾರ

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನ ಮಳಗಿ ಗ್ರಾಮದ ಅರಣ್ಯ ಪ್ರದೇಶದಲ್ಲಿ ಬೆಳಕಿಗೆ ಬಂದ ಭೀಕರ ಹತ್ಯೆ ಪ್ರಕರಣವು ರಾಜ್ಯದ ಜನರನ್ನು ನಡುಗಿಸುವಂತಾಗಿದೆ. ಸಾಮಾನ್ಯವಾಗಿ ಶಾಂತವಾಗಿರುವ ಈ ಗ್ರಾಮದಲ್ಲಿ ನಡೆದ ಈ ಕ್ರೂರ ಕೃತ್ಯ ಮಾನವೀಯತೆ ಮೀರಿದದ್ದು ಎಂದು ಎಲ್ಲರೂ


ಶಿವಕ್ಕಳ ಶವ

ಬೆಚ್ಚಿಬಿದ್ದಿದ್ದಾರೆ. ಅರಣ್ಯ ಇಲಾಖೆಯ ನೌಕರ ಅಭಿಷೇಕ ಪಾಂಡುರಂಗ ಜಾಧವ ಅವರು ತಮ್ಮ ಕರ್ತವ್ಯದ ಅಂಗವಾಗಿ ಅರಣ್ಯ ಪ್ರದೇಶದಲ್ಲಿ ಪೆಟ್ರೋಲಿಂಗ್ ನಡೆಸುತ್ತಿದ್ದ ವೇಳೆ ಈ ಘಟನೆ ಬೆಳಕಿಗೆ ಬಂದಿದೆ. ಅರಣ್ಯ ಸವೆ9 ನಂ. 7 ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದಾಗ ಅವರಿಗೆ ಏನೋ ಅನುಮಾನಾಸ್ಪದವಾಗಿ ಕಂಡು


ಹೆಚ್ಚುವರಿ ಎಸ್ಪಿ ಎಮ್. ಜಗದೀಶ್


ಹೆಚ್ಚುವರಿ ಎಸ್ಪಿ ಕೃಷ್ಣಮೂರ್ತಿ


ಡಿವೈಎಸ್ಪಿ ಗೀತಾ ಪಾಟೀಲ್

ಬಂದಿದ್ದು, ಮೊದಲಿಗೆ ಅದು ಕಾಡುಪ್ರಾಣಿಯ ಶವವಿರಬಹುದೆಂದು ಭಾವಿಸಿ ಮುಂದೆ ಸಾಗಿದ್ದಾರೆ. ಆದರೆ ಸ್ವಲ್ಪ ದೂರ ಹೋಗುತ್ತಿದ್ದಂತೆ ತೀವ್ರ ದುರ್ವಾಸನೆ ಹೊಮ್ಮಿದ್ದು, ಅದನ್ನು ಗಮನಿಸಿದ ಅವರು ನಿಧಾನವಾಗಿ ಆ ಸ್ಥಳವನ್ನು ಪರಿಶೀಲಿಸಲು ಮುಂದಾದರು. ಅಲ್ಲಿ ಕಂಡ ದೃಶ್ಯ ಅವರನ್ನೇ ಬೆಚ್ಚಿಬೀಳುವಂತೆ ಮಾಡಿತು. ಅದು ಪ್ರಾಣಿಯ ಶವವಲ್ಲ, ಬದಲಾಗಿ ರುಂಡವಿಲ್ಲದ ಮಹಿಳೆಯೊಬ್ಬಳ ಬೆತ್ತಲೆ ದೇಹವಾಗಿತ್ತು. ಈ ಭೀಕರ ದೃಶ್ಯವನ್ನು ಕಂಡ ಅಭಿಷೇಕ ಅವರು ಗಾಬರಿಗೊಂಡು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಮಾಹಿತಿ ತಿಳಿದ ಮುಂಡಗೋಡ ಪೊಲೀಸ್ ಠಾಣೆಯ ಪಿಐ ರಂಗನಾಥ್ ತಮ್ಮ ಸಿಬ್ಬಂದಿಗಳೊಂದಿಗೆ ತಕ್ಷಣವೇ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಪ್ರಕರಣದ ಗಂಭೀರತೆಯನ್ನು ಅರಿತು ಕಾರವಾರದಿಂದ ಶ್ವಾನದಳವನ್ನು ಕರೆಸಲಾಯಿತು. ಜೊತೆಗೆ ಜಿಲ್ಲಾ ಎಸ್ಪಿ ದೀಪನ್, ಹೆಚ್ಚುವರಿ ಎಸ್ಪಿಗಳಾದ ಕೃಷ್ಣಮೂರ್ತಿ ಹಾಗೂ ಜಗದೀಶ್ ಎಂ. ನಾಯ್ಕ್, ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶವದ ತಲೆ ಕಾಣೆಯಾಗಿರುವುದು ಪ್ರಕರಣವನ್ನು ಇನ್ನಷ್ಟು ಗೊಂದಲಮಯವಾಗಿಸಿದ್ದು, ಪೊಲೀಸರಿಗೆ ಇದು ದೊಡ್ಡ ಸವಾಲಾಗಿ ಪರಿಣಮಿಸಿತು. ಆದರೂ ತಮ್ಮ ಅನುಭವ ಮತ್ತು ಚಾಣಾಕ್ಷತನದಿಂದ ಪೊಲೀಸರು ತಕ್ಷಣವೇ ತನಿಖೆಯನ್ನು ಚುರುಕುಗೊಳಿಸಿದರು.


ಎಸ್ಪಿ ದೀಪನ್

ಮೃತ ಮಹಿಳೆಯ ಗುರುತು ಪತ್ತೆ ಹಚ್ಚುವುದು ಮೊದಲ ಹಂತವಾಗಿತ್ತು. ಮಳಗಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಹಿಳೆಯರು ಕಾಣೆಯಾಗಿರುವ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ಹಲವಾರು ಮನೆಗಳಿಗೆ ಭೇಟಿ ನೀಡಿ ವಿಚಾರಣೆ ನಡೆಸಿದ ನಂತರ, ಮೃತಳನ್ನು ಶಿವಕ್ಕ ಎಂದು ಗುರುತಿಸಲಾಯಿತು. ಶಿವಕ್ಕಳ ಜೀವನಶೈಲಿ, ಕುಟುಂಬ ಪರಿಸ್ಥಿತಿ ಹಾಗೂ ದಿನನಿತ್ಯದ ಚಟುವಟಿಕೆಗಳ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕಲು ಮುಂದಾದರು. ಈ ವೇಳೆ ಶಿವಕ್ಕಳ ಮನೆ ಸಮೀಪ ಇತ್ತೀಚೆಗೆ ಕೃಷ್ಣ ಎಂಬ ವ್ಯಕ್ತಿ ಹೆಚ್ಚಾಗಿ ಓಡಾಡುತ್ತಿದ್ದ ಹಾಗೂ ಆಕೆಯೊಂದಿಗೆ ಹೆಚ್ಚು ಆತ್ಮೀಯತೆ ಬೆಳೆಸಿದ್ದ ವಿಷಯ ಪೊಲೀಸರಿಗೆ ತಿಳಿದುಬಂದಿತು. ಈ ಮಾಹಿತಿ ತನಿಖೆಗೆ ಮಹತ್ವದ ತಿರುವು ನೀಡಿತು.

ಪೊಲೀಸರು ತಕ್ಷಣವೇ ಕೃಷ್ಣನನ್ನು ಹುಡುಕಾಟ ಆರಂಭಿಸಿದರು. ಈ ನಡುವೆ ಆತ ತಲೆಮರೆಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂಬ ಸುಳಿವು ಸಿಕ್ಕಿತು. ಎಲ್ಲಾ ದಿಕ್ಕುಗಳಲ್ಲಿ ಜಾಲ ಬೀಸಿ ಕೊನೆಗೂ ಆರೋಪಿಯನ್ನು ಬಂಧಿಸಲಾಯಿತು. ಬಂಧನದ ಬಳಿಕ ವಿಚಾರಣೆ ನಡೆಸಿದಾಗ ಆತ ನೀಡಿದ ಮಾಹಿತಿಗಳು ಪ್ರಕರಣದ ಭೀಕರತೆಯನ್ನು ಇನ್ನಷ್ಟು ಸ್ಪಷ್ಟಪಡಿಸಿತು. ಕೃಷ್ಣ ಮೂಲತಃ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನವನು. ಈ ಹಿಂದೆ ಕೂಡ ಆತ ಕೊಲೆ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸಿದ್ದನು. ಜಾಮೀನಿನ ಮೇಲೆ ಬಿಡುಗಡೆಯಾದ ನಂತರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಆತ ತನ್ನ ಅತ್ತೆ ಮನೆಯ ಕಡೆಗೆ ಬಂದು ವಾಸಿಸುತ್ತಿದ್ದನು. ಆದರೆ ಕೈಯಲ್ಲಿ ಹಣವಿಲ್ಲದೇ ಜೀವನ ನಡೆಸುವುದು ಕಷ್ಟವಾಗಿದ್ದರಿಂದ, ಸುಲಭವಾಗಿ ಹಣ ಗಳಿಸುವ ಮಾರ್ಗ ಹುಡುಕುತ್ತಿದ್ದನು.

ಈ ಸಂದರ್ಭದಲ್ಲೇ ಶಿವಕ್ಕಳ ಮೈಮೇಲೆ ಇರುವ ಬಂಗಾರದ ಒಡವೆಗಳು ಅವನ ಕಣ್ಣಿಗೆ ಬಿದ್ದವು. ಅವನ್ನು ದೋಚಿಕೊಳ್ಳುವ ಉದ್ದೇಶದಿಂದ ಆತ ಶಿವಕ್ಕಳೊಂದಿಗೆ ಸ್ನೇಹ ಬೆಳೆಸಲು ಆರಂಭಿಸಿದನು. ದಿನನಿತ್ಯ ಆಕೆಯ ಮನೆಗೆ ಹೋಗಿ ಮಾತುಕತೆ ನಡೆಸುವುದು, ಅಂಗಡಿ ಬಳಿ ಸಮಯ ಕಳೆಯುವುದು ಇತ್ಯಾದಿ ಮೂಲಕ ಆಕೆಯ ವಿಶ್ವಾಸವನ್ನು ಗಳಿಸಿದನು. ಶಿವಕ್ಕಳೂ ಅವನನ್ನು ಪರಿಚಿತನಾಗಿ ಕಂಡು ಹೆಚ್ಚು ಸಂಶಯ ವ್ಯಕ್ತಪಡಿಸಲಿಲ್ಲ. ಈ ಆತ್ಮೀಯತೆಯನ್ನು ದುರುಪಯೋಗಪಡಿಸಿಕೊಂಡ ಕೃಷ್ಣ ತನ್ನ ಕುತಂತ್ರವನ್ನು ರೂಪಿಸಿದ್ದನು.

ಘಟನೆಯ ದಿನ ಶಿವಕ್ಕ ಆಸ್ಪತ್ರೆಗೆ ಹೋಗಬೇಕೆಂದು ಹೇಳಿದಾಗ, ಕೃಷ್ಣ ತನ್ನ ಬೈಕ್‌ನಲ್ಲಿ ಕರೆದುಕೊಂಡು ಹೋಗುವುದಾಗಿ ಹೇಳಿ ಆಕೆಯನ್ನು ತನ್ನ ಜೊತೆ ಕರೆದೊಯ್ದನು. ಆದರೆ ಆಸ್ಪತ್ರೆಗೆ ಹೋಗುವ ಬದಲು, ಜನರ ಓಡಾಟ ಕಡಿಮೆ ಇರುವ ಅರಣ್ಯ ಪ್ರದೇಶದೊಳಗೆ ಆಕೆಯನ್ನು ಕರೆದುಕೊಂಡು ಹೋದನು. ಅಲ್ಲಿ ತಲುಪಿದ ನಂತರ, ಶಿವಕ್ಕಳಿಂದ ಬಂಗಾರದ ಒಡವೆಗಳನ್ನು ತೆಗೆದುಕೊಳ್ಳಲು ಒತ್ತಾಯಿಸಿದನು. ಆದರೆ ಶಿವಕ್ಕ ತನ್ನ ಒಡವೆಗಳನ್ನು ಕೊಡಲು ನಿರಾಕರಿಸಿ ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಳು. ವಯಸ್ಸಾದ ಕಾರಣದಿಂದ ಆಕೆಗೆ ಓಡಲು ಸಾಧ್ಯವಾಗದೆ, ಆ ದುಷ್ಟನ ಕೈಯಲ್ಲಿ ಸಿಲುಕಿಕೊಂಡಳು.

ಈ ವೇಳೆ ಕ್ರೂರತೆಯ ಮಿತಿ ಮೀರಿ ವರ್ತಿಸಿದ ಕೃಷ್ಣ, ತನ್ನ ಬಳಿ ಇಟ್ಟುಕೊಂಡಿದ್ದ ಹರಿತವಾದ ಆಯುಧದಿಂದ ಶಿವಕ್ಕಳ ಮೇಲೆ ದಾಳಿ ನಡೆಸಿದನು. ಆಕೆಯನ್ನು ಅಮಾನುಷವಾಗಿ ಹತ್ಯೆ ಮಾಡಿ, ಗುರುತು ಸಿಗದಂತೆ ರುಂಡಮುಂಡ ಬೇರ್ಪಡಿಸಿದನು. ಈ ಕೃತ್ಯ ಅವನ ಕ್ರೌರ್ಯಕ್ಕೆ ಸಾಕ್ಷಿಯಾಗಿದೆ. ಕೊಲೆ ಬಳಿಕ ಶವದ ಮೇಲಿದ್ದ ಬಟ್ಟೆಗಳನ್ನು ತೆಗೆದುಹಾಕಿ, ಗುರುತು ಪತ್ತೆಯಾಗದಂತೆ ಮಾಡಲು ಯತ್ನಿಸಿದನು. ನಂತರ ತಲೆಯನ್ನು ತೆಗೆದುಕೊಂಡು ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಅರಣ್ಯ ಪ್ರದೇಶದಲ್ಲಿ ಬಿಸಾಡಿದನು.


ಪಿಐ ರಂಗನಾಥ್

ಈ ಎಲ್ಲಾ ಕೃತ್ಯಗಳನ್ನು ಮಾಡಿದ ನಂತರ ಆತ ಯಾರಿಗೂ ಗೊತ್ತಾಗದಂತೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರೂ, ಪೊಲೀಸರ ಚುರುಕಿನ ಕಾರ್ಯಾಚರಣೆಯಿಂದ ಕೊನೆಗೂ ಸಿಕ್ಕಿಬಿದ್ದನು. ತನಿಖೆಯ ವೇಳೆ ಎಲ್ಲಾ ಸಂಗತಿಗಳನ್ನು ಬಾಯ್ಬಿಟ್ಟ ಆತ ತನ್ನ ದೋಷವನ್ನು ಒಪ್ಪಿಕೊಂಡನು. ಪ್ರಸ್ತುತ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು, ಪ್ರಕರಣದ ಮುಂದಿನ ತನಿಖೆ ಮುಂದುವರಿದಿದೆ.

ಈ ಘಟನೆ ಸಮಾಜದಲ್ಲಿ ಭೀತಿ ಹಾಗೂ ಆಕ್ರೋಶವನ್ನುಂಟುಮಾಡಿದೆ. ಹಣ ಮತ್ತು ಲಾಭದ ಆಸೆ ಎಷ್ಟರ ಮಟ್ಟಿಗೆ ಮಾನವನನ್ನು ಕ್ರೂರನನ್ನಾಗಿ ಮಾಡುತ್ತದೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ. ವಿಶ್ವಾಸವನ್ನು ದುರುಪಯೋಗಪಡಿಸಿಕೊಂಡು, ಒಬ್ಬ ವಯೋವೃದ್ಧ ಮಹಿಳೆಯನ್ನು ಇಂತಹ ಅಮಾನುಷವಾಗಿ ಹತ್ಯೆ ಮಾಡಿರುವುದು ಖಂಡನೀಯ. ಇಂತಹ ಘಟನೆಗಳು ಮರುಕಳಿಸದಂತೆ ಕಾನೂನು ಕಠಿಣ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಎಲ್ಲೆಡೆ ಕೇಳಿಬರುತ್ತಿದೆ.

ಈ ಪ್ರಕರಣದ ಬೆನ್ನಲ್ಲೇ ಸ್ಥಳೀಯ ಗ್ರಾಮಸ್ಥರಲ್ಲಿ ಭಾರೀ ಆತಂಕ ಮತ್ತು ಆಕ್ರೋಶ ವ್ಯಕ್ತವಾಗಿದೆ. ಮಳಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಹಿಳೆಯರು ಮತ್ತು ವೃದ್ಧರು ತಮ್ಮ ಸುರಕ್ಷತೆ ಬಗ್ಗೆ ಭಯಪಡುವಂತಾಗಿದೆ. 'ಪರಿಚಿತ ವ್ಯಕ್ತಿಯೇ ಇಷ್ಟು ಕ್ರೂರ ಕೃತ್ಯಕ್ಕೆ ಮುಂದಾಗಿದ್ದಾನೆ ಅಂದರೆ, ಇನ್ನು ಯಾರನ್ನು ನಂಬಬೇಕು?' ಎಂಬ ಪ್ರಶ್ನೆ ಗ್ರಾಮಸ್ಥರ ಮನಸ್ಸಿನಲ್ಲಿ ಮೂಡಿದೆ. ಪೊಲೀಸರು ಗ್ರಾಮಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯ ಆರಂಭಿಸಿ, ಅಪರಿಚಿತರ ಮೇಲೆ ಹೆಚ್ಚು ವಿಶ್ವಾಸ ಇಡಬಾರದು ಹಾಗೂ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ತಕ್ಷಣ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಜೊತೆಗೆ, ಮಹಿಳೆಯರು ಒಬ್ಬರೇ ಅರಣ್ಯ ಪ್ರದೇಶಗಳಿಗೆ ಅಥವಾ ನಿರ್ಜನ ಸ್ಥಳಗಳಿಗೆ ತೆರಳುವುದನ್ನು ತಪ್ಪಿಸಬೇಕು ಎಂಬ ಸೂಚನೆಗಳನ್ನು ನೀಡಿದ್ದಾರೆ. ಈ ಘಟನೆ ಕೇವಲ ಒಂದು ಕೊಲೆ ಪ್ರಕರಣವಷ್ಟೇ ಅಲ್ಲ, ಸಮಾಜದ ಸುರಕ್ಷತಾ ವ್ಯವಸ್ಥೆಗಳ ಬಗ್ಗೆ ಮರುಪರಿಶೀಲನೆ ಮಾಡುವ ಅಗತ್ಯವನ್ನೂ ಉಂಟುಮಾಡಿದೆ.

ಇದೇ ವೇಳೆ ಕಾನೂನು ತಜ್ಞರು ಮತ್ತು ಸಾಮಾಜಿಕ ಕಾರ್ಯಕರ್ತರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ್ದಾರೆ. ಹಿಂದೆಯೇ ಕೊಲೆ ಪ್ರಕರಣದಲ್ಲಿ ಶಿಕ್ಷೆ ಅನುಭವಿಸಿದ್ದ ವ್ಯಕ್ತಿ ಮತ್ತೆ ಇದೇ ರೀತಿಯ ಅಪರಾಧಕ್ಕೆ ಕೈಹಾಕಿರುವುದು ನ್ಯಾಯಾಂಗ ವ್ಯವಸ್ಥೆಯಲ್ಲಿನ ಕೆಲವು ದೌರ್ಬಲ್ಯಗಳತ್ತ ಕೂಡ ಬೆರಳು ತೋರಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಜಾಮೀನಿನ ನಂತರ ಅಪರಾಧಿಗಳ ಮೇಲಿನ ನಿಗಾವ್ಯವಸ್ಥೆಯನ್ನು ಮತ್ತಷ್ಟು ಕಟ್ಟುನಿಟ್ಟಾಗಿಸಬೇಕು ಎಂಬ ಮಾತುಗಳು ಕೇಳಿಬರುತ್ತಿವೆ. ಇಂತಹ ಕ್ರೂರ ಕೃತ್ಯಗಳಿಗೆ ತಕ್ಷಣ ಮತ್ತು ಕಠಿಣ ಶಿಕ್ಷೆ ನೀಡುವುದರಿಂದ ಮಾತ್ರ ಇತರರಿಗೆ ತಡೆಯಾಗಬಹುದು ಎಂಬುದು ಸಾಮಾನ್ಯ ಅಭಿಪ್ರಾಯವಾಗಿದೆ. ಈ ದಾರುಣ ಘಟನೆ ಮಾನವೀಯ ಮೌಲ್ಯಗಳ ಕುಸಿತದ ಸಂಕೇತವಾಗಿ ಉಳಿದಿದ್ದು, ಸಮಾಜದ ಪ್ರತಿಯೊಬ್ಬರಿಗೂ ಎಚ್ಚರಿಕೆಯ ಗಂಟೆ ಎಂದು ಹೇಳಬಹುದು.

# ಧಾರವಾಡದಲ್ಲಿ ಕಾಂಗ್ರೆಸ್ ಯುವ ಮುಖಂಡನ ಹತ್ಯೆ!

## 24 ಗಂಟೆಯೊಳಗೆ ಹಂತಕರ ಬಂಧನ; ಪೊಲೀಸ್ ತನಿಖೆಯಲ್ಲಿ ಬಯಲಾದ ಬೆಚ್ಚಿಬೀಳಿಸುವ ಸತ್ಯಗಳು


**ಧಾರವಾಡ ನಗರವನ್ನು ನಡುಗಿಸಿದ ಕಾಂಗ್ರೆಸ್ ಯುವ ಮುಖಂಡ ಫೈರೋಜ್ ಪಠಾಣ್ ಹತ್ಯೆ ಪ್ರಕರಣವು ರಾಜ್ಯಾದ್ಯಂತ ಸಂಚಲನ ಮೂಡಿಸಿದೆ. ದಿನದ ಬೆಳಕಿನಲ್ಲಿ, ಮನೆಯ ಮುಂಭಾಗದಲ್ಲೇ ನಡೆದ ಈ ಕ್ರೂರ ಕೊಲೆ ಜನರಲ್ಲಿ ಆತಂಕ ಹಾಗೂ ಅಚ್ಚರಿ ಹುಟ್ಟಿಸಿದೆ. ಇನ್ನೂ ಕೆಲವೇ ದಿನಗಳಲ್ಲಿ ಮದುವೆ ವೇದಿಕೆಗೆ ಏರಬೇಕಿದ್ದ ಯುವ ನಾಯಕನ ಜೀವವನ್ನು ಆತ್ಮೀಯರೇ ಕಸಿದುಕೊಂಡಿರುವುದು ಪ್ರಕರಣವನ್ನು ಇನ್ನಷ್ಟು ಗಂಭೀರಗೊಳಿಸಿದೆ. ಘಟನೆ ನಡೆದ ಕೆಲವೇ ಗಂಟೆಗಳಲ್ಲೇ ಪೊಲೀಸರು ಚುರುಕಾಗಿ ಕಾರ್ಯಾಚರಣೆ ನಡೆಸಿ, 24 ಗಂಟೆಯೊಳಗೆ ಪ್ರಮುಖ ಆರೋಪಿಗಳನ್ನು ಬಂಧಿಸಿರುವುದು ಗಮನಾರ್ಹವಾಗಿದೆ. ಈ ಹತ್ಯೆಯ ಹಿಂದೆ ಅಡಗಿದ್ದ ವೈಯಕ್ತಿಕ ದ್ವೇಷ, ವ್ಯವಹಾರಿಕ ಭಿನ್ನಾಭಿಪ್ರಾಯಗಳು ಮತ್ತು ಪೂರ್ವಯೋಜಿತ ಸಂಚು ಇದೀಗ ಪೊಲೀಸ್ ತನಿಖೆಯಿಂದ ಬಯಲಾಗುತ್ತಿದ್ದು, ಪ್ರಕರಣದ ಪ್ರತಿಯೊಂದು ಅಂಶವೂ ಬೆಚ್ಚಿಬೀಳಿಸುವಂತಿದೆ.**


ಬಂಧಿತ ಆರೋಪಿಗಳು

ಧಾರವಾಡ ನಗರವನ್ನು ಬೆಚ್ಚಿಬೀಳಿಸಿದ ಕಾಂಗ್ರೆಸ್ ಯುವ ಮುಖಂಡ ಫೈರೋಜ್ ಪಠಾಣ್ ಹತ್ಯೆ ಪ್ರಕರಣದಲ್ಲಿ ಪೊಲೀಸರು ತ್ವರಿತ ಕಾರ್ಯಾಚರಣೆ ನಡೆಸಿ ಕೇವಲ 24 ಗಂಟೆಗಳೊಳಗೆ ಪ್ರಕರಣವನ್ನು ಭೇದಿಸಿರುವುದು ಗಮನಾರ್ಹ ಸಾಧನೆ. ಸಾಮಾನ್ಯವಾಗಿ ಇಂತಹ ದಾರುಣ ಕೊಲೆ ಪ್ರಕರಣಗಳು ದಿನಗಟ್ಟಲೆ, ತಿಂಗಳಗಟ್ಟಲೆ ತನಿಖೆ ನಡೆಯುವ ಸಂದರ್ಭದಲ್ಲಿ, ಈ ಪ್ರಕರಣದಲ್ಲಿ ಪೊಲೀಸರು ತೋರಿದ ಚುರುಕುತನ ಹಾಗೂ ತಂತ್ರಜ್ಞಾನ ಬಳಕೆ ವಿಶೇಷವಾಗಿದೆ. ಘಟನೆ ನಡೆದ ತಕ್ಷಣವೇ ತನಿಖೆಗೆ ಇಳಿದ ಹುಬ್ಬಳ್ಳಿಧಾರವಾಡ ಪೊಲೀಸರು, ಸಿಸಿಟಿವಿ ದೃಶ್ಯಗಳು, ಮೊಬೈಲ್ ಲೊಕೇಷನ್ ಹಾಗೂ ಗುಪ್ತ ಮಾಹಿತಿ ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಅತ್ಯಂತ ಆಘಾತಕಾರಿ ಸಂಗತಿ ಎಂದರೆ, ಮೃತ ಫೈರೋಜ್ ಪಠಾಣ್ ಅವರೇ ನಂಬಿದ್ದ ಆತ್ಮೀಯರೇ ಅವರ ಜೀವಕ್ಕೆ ಸಂಚು ರೂಪಿಸಿ ಕೊಲೆಗೈದಿರುವುದು.


ಕೊಲೆಯಾದ ಫೈರೋಜ್ ಪಠಾಣ್

ಫೈರೋಜ್ ಪಠಾಣ್ ಅವರು ಯುವ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದ ನಾಯಕನಾಗಿದ್ದು, ಸ್ಥಳೀಯವಾಗಿ ಉತ್ತಮ ಸಂಪರ್ಕ ಹೊಂದಿದ್ದ ವ್ಯಕ್ತಿ. ಅವರ ಜೀವನದಲ್ಲಿ ಇನ್ನೇನು ಕೆಲವೇ ದಿನಗಳಲ್ಲಿ ಮಹತ್ವದ ಘಟ್ಟವಾದ ಮದುವೆ ನಡೆಯಬೇಕಿತ್ತು. ಆದರೆ ಅದಕ್ಕೂ ಮುನ್ನವೇ ಅವರ ಮೇಲೆ ಕತ್ತಿ ಬೀಸಿದವರೇ ಅವರ ಆತ್ಮೀಯರು ಎಂಬ ಸಂಗತಿ ಕುಟುಂಬಸ್ಥರು ಹಾಗೂ ಸಾರ್ವಜನಿಕರನ್ನು ಇನ್ನಷ್ಟು ದುಃಖಕ್ಕೀಡಾಗುವಂತೆ ಮಾಡಿದೆ. ತನಿಖೆಯಲ್ಲಿ ತಿಳಿದುಬಂದಂತೆ, ಪ್ರಮುಖ ಆರೋಪಿ ಮಹಮ್ಮದ್ ಶಾ ಹಾಗೂ ಫೈರೋಜ್ ನಡುವೆ ಕೆಲ ತಿಂಗಳ ಹಿಂದೆ ವೈಯಕ್ತಿಕ ವಿಷಯವಾಗಿ ಗಂಭೀರ ಜಗಳ ನಡೆದಿದೆ. ಆ ಸಂದರ್ಭದಲ್ಲಿ ಫೈರೋಜ್ ತನ್ನ ಸ್ನೇಹಿತರೊಂದಿಗೆ ಮಹಮ್ಮದ್ ಶಾ ಮನೆಗೆ ತೆರಳಿ ಗಲಾಟೆ ಮಾಡಿದ್ದನು. ನಂತರ ಈ ಘಟನೆಯನ್ನು ಹಲವರ ಬಳಿ ಹೇಳಿಕೊಂಡು ತಮಾಷೆ ಮಾಡುತ್ತಿದ್ದನು ಎಂಬ ಆರೋಪ ಕೇಳಿಬಂದಿದ್ದು, ಇದು ಮಹಮ್ಮದ್ ಶಾ ಮನಸ್ಸಿನಲ್ಲಿ ತೀವ್ರ ಅಸಮಾಧಾನ ಮತ್ತು ದ್ವೇಷಕ್ಕೆ ಕಾರಣವಾಗಿದೆ.


ಫೈರೋಜ್‌ನ ಶವ


ಈ ವೈಯಕ್ತಿಕ ದ್ವೇಷಕ್ಕೆ ಜೊತೆಯಾಗಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿನ ಭಿನ್ನಾಭಿಪ್ರಾಯಗಳು ಕೂಡ ಸೇರ್ಪಡೆಯಾಗಿ, ಸಂಬಂಧಗಳು ಸಂಪೂರ್ಣವಾಗಿ ಹಾಳಾಗುವಂತೆ ಮಾಡಿವೆ. ಇಂತಹ ಪರಿಸ್ಥಿತಿಯಲ್ಲಿ ದೂರವಾದ ಸ್ನೇಹಿತರು ಮತ್ತೆ ಒಟ್ಟುಗೂಡಿ ಪ್ರತೀಕಾರದ ದಾರಿ ಹಿಡಿದಿದ್ದಾರೆ. ಕೊಲೆ ನಡೆದ ದಿನ ಮಧ್ಯಾಹ್ನವೇ ಆರೋಪಿಗಳು ಸಭೆ ನಡೆಸಿ, ಫೈರೋಜ್ ಅವರನ್ನು ಅದೇ ದಿನ ಕೊಲ್ಲಬೇಕೆಂದು ಅಂತಿಮ ನಿರ್ಧಾರಕ್ಕೆ ಬಂದಿದ್ದಾರೆ. ಇದು ಪೂರ್ವಯೋಜಿತ ಸಂಚು ಎಂಬುದನ್ನು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ನಂತರ ಅವರು ಫೈರೋಜ್ ಅವರ ಪ್ರತಿಯೊಂದು ಚಲನವಲನದ ಮೇಲೂ ಕಣ್ಣಿಟ್ಟಿದ್ದು, ಮನೆಗೆ ಯಾವ ಸಮಯದಲ್ಲಿ ಬರುತ್ತಾರೆ ಎಂಬುದನ್ನು ಖಚಿತಪಡಿಸಿಕೊಂಡಿದ್ದಾರೆ.

ಸಾಮಾನ್ಯವಾಗಿ ತಡವಾಗಿ ಮನೆಗೆ ಬರುವ ಅಭ್ಯಾಸ ಹೊಂದಿದ್ದ ಫೈರೋಜ್, ಮದುವೆ ಸಮೀಪಿಸುತ್ತಿದ್ದ ಕಾರಣ ಇತ್ತೀಚಿನ ದಿನಗಳಲ್ಲಿ ಬೇಗ ಮನೆಗೆ ಬರುತ್ತಿದ್ದರು. ಇದೇ ವಿಚಾರವನ್ನು ಗಮನಿಸಿದ ಆರೋಪಿಗಳು ತಮ್ಮ ಯೋಜನೆಯನ್ನು ಅದಕ್ಕೆ ಅನುಗುಣವಾಗಿ ರೂಪಿಸಿಕೊಂಡಿದ್ದರು. ಘಟನೆ ನಡೆದ ದಿನ ಸಂಜೆ ಸುಮಾರು 8 ಗಂಟೆ ಸುಮಾರಿಗೆ ಫೈರೋಜ್ ಮನೆಗೆ ಬಂದು ಹೊರಗಡೆ ಕುಳಿತು ಫೋನ್‌ನಲ್ಲಿ ಮಾತನಾಡುತ್ತಿದ್ದರು. ಈ ಸಮಯದಲ್ಲೇ ಮಹಮ್ಮದ್ ಶಾ ಮನೆಗೆ ಬಂದು ಗೇಟ್ ಬಳಿ ಕುಳಿತುಕೊಂಡಿದ್ದನು. ಫೈರೋಜ್ ಅವರಿಗೆ ಯಾವುದೇ ಅನುಮಾನವಿಲ್ಲದೇ ಅವರ ಬಳಿಗೆ ಬಂದಾಗ, ಆಕಸ್ಮಿಕವಾಗಿ ಮಹಮ್ಮದ್ ಶಾ ತನ್ನ ಬಳಿ ಇದ್ದ ಚಾಕುವನ್ನು ತೆಗೆದು ಫೈರೋಜ್ ಅವರ ಮೇಲೆ ದಾಳಿ ನಡೆಸಿದ್ದಾನೆ.

ಆಘಾತದಿಂದ ಗಾಬರಿಗೊಂಡ ಫೈರೋಜ್ ತಕ್ಷಣ ಮನೆ ಒಳಗೆ ಓಡಲು ಪ್ರಯತ್ನಿಸಿದರೂ, ಆರೋಪಿಗಳು ಅವರನ್ನು ಬಿಡಲಿಲ್ಲ. ಹೊರಗಡೆ ಕಾಯುತ್ತಿದ್ದ ಇತರ ಆರೋಪಿಗಳು ಕೂಡ ಮನೆಯೊಳಗೆ ನುಗ್ಗಿ ಫೈರೋಜ್ ಅವರನ್ನು ನಿರ್ದಯವಾಗಿ ಇರಿದು ಕೊಂದಿದ್ದಾರೆ. ಈ ಸಂಪೂರ್ಣ ಘಟನೆ ಕೇವಲ 40 ಸೆಕೆಂಡುಗಳೊಳಗೆ ನಡೆದಿದ್ದು, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಘಟನೆಯ ತೀವ್ರತೆ ಮತ್ತು ವೇಗವೇ ಈ ದಾಳಿಯ ಪೂರ್ವಯೋಜಿತ ಸ್ವರೂಪವನ್ನು ತೋರಿಸುತ್ತದೆ. ಕೊಲೆ ಮಾಡಿದ ಬಳಿಕ ಆರೋಪಿಗಳು ಫೈರೋಜ್ ಅವರ ಮೊಬೈಲ್ ಫೋನ್ ಅನ್ನು ತೆಗೆದುಕೊಂಡು ಸ್ಥಳದಿಂದ ಪರಾರಿಯಾಗಿದ್ದಾರೆ.



ಪರಾರಿಯಾದ ಆರೋಪಿಗಳು ಕಾರಿನಲ್ಲಿ ಬೆಳಗಾವಿ ದಿಕ್ಕಿಗೆ ತೆರಳುವಾಗ ಧಾರವಾಡ ತಾಲೂಕಿನ ವೆಂಕಟಾಪುರ ಗ್ರಾಮದ ಬಳಿ ಮೊಬೈಲ್ ಅನ್ನು ಎಸೆದಿದ್ದಾರೆ. ಈ ಮೊಬೈಲ್ ಲೊಕೇಷನ್ ಪೊಲೀಸರು ಪತ್ತೆ ಹಚ್ಚಿದ್ದು, ತನಿಖೆಗೆ ಪ್ರಮುಖ ಸುಳಿವಾಗಿದೆ. ಮೊಬೈಲ್ ಟ್ರ್ಯಾಕಿಂಗ್ ಆಧರಿಸಿ ಪೊಲೀಸರು ಆರೋಪಿಗಳ ಹಾದಿ ಪತ್ತೆ ಹಚ್ಚಿ, ಉಪ್ಪಿನ ಬೆಟಗೇರಿ ಭಾಗದಲ್ಲಿ ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಒಟ್ಟು 9 ಜನ ಆರೋಪಿಗಳ ಪೈಕಿ 8 ಜನರನ್ನು ಬಂಧಿಸಲಾಗಿದ್ದು, ಮತ್ತೊಬ್ಬ ಆರೋಪಿ ಕೈಫ್ ಇನ್ನೂ ಪರಾರಿಯಾಗಿದ್ದಾನೆ. ಆತನಿಗಾಗಿ ಪೊಲೀಸರು ಶೋಧ ಮುಂದುವರೆಸಿದ್ದಾರೆ.




ಈ ಪ್ರಕರಣದಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ, ಫೈರೋಜ್ ಪಠಾಣ್ ಹಾಗೂ ಅವರ ಸ್ನೇಹಿತ ಅಬ್ದುಲ್ ದೇಸಾಯಿ ಕೆಲ ತಿಂಗಳ ಹಿಂದೆ ತಮಗೆ ಜೀವ ಬೆದರಿಕೆ ಇದೆ ಎಂದು ಪೊಲೀಸರಿಗೆ ದೂರು ನೀಡಿದ್ದರು ಎಂಬುದು. ಇದರಿಂದ ಈ ಕೊಲೆ ಏಕಾಏಕಿ ನಡೆದ ಘಟನೆ ಅಲ್ಲ, ಬಹಳ ಹಿಂದಿನಿಂದಲೇ ಬೆಳೆದು ಬಂದ ದ್ವೇಷದ ಫಲಿತಾಂಶ ಎಂಬುದು ಸ್ಪಷ್ಟವಾಗುತ್ತದೆ. ಇಂತಹ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದರೆ ಈ ದುರ್ಘಟನೆ ತಪ್ಪಿಸಬಹುದಿತ್ತೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ.

ಹುಬ್ಬಳ್ಳಿಧಾರವಾಡ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಅವರ ನೇತೃತ್ವದಲ್ಲಿ ಮೂರು ವಿಶೇಷ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಲಾಗಿತ್ತು. ಸಿಸಿಟಿವಿ ದೃಶ್ಯಗಳು, ತಾಂತ್ರಿಕ ಮಾಹಿತಿಗಳು ಮತ್ತು ಗುಪ್ತಚರ ಜಾಲದ ಸಹಾಯದಿಂದ ಆರೋಪಿಗಳನ್ನು ತ್ವರಿತವಾಗಿ ಪತ್ತೆ ಹಚ್ಚಲಾಗಿದೆ. ಈ ಕಾರ್ಯಾಚರಣೆ ಪೊಲೀಸರು ಹೊಂದಿರುವ ಸಾಮರ್ಥ್ಯ ಮತ್ತು ತಂತ್ರಜ್ಞಾನ ಬಳಕೆಯ ಪರಿಣಾಮಕಾರಿತ್ವವನ್ನು ತೋರಿಸುತ್ತದೆ.

ಒಟ್ಟಿನಲ್ಲಿ, ಫೈರೋಜ್ ಪಠಾಣ್ ಹತ್ಯೆ ಪ್ರಕರಣವು ಸಮಾಜಕ್ಕೆ ಮಹತ್ವದ ಸಂದೇಶ ನೀಡುತ್ತದೆ. ವೈಯಕ್ತಿಕ ಅಹಂಕಾರ, ಸಣ್ಣಸಣ್ಣ ಗಲಾಟೆಗಳು ಮತ್ತು ವ್ಯವಹಾರ ಸಂಬಂಧಿತ ಭಿನ್ನಾಭಿಪ್ರಾಯಗಳು ಹೇಗೆ ಭೀಕರ ಅಂತ್ಯಕ್ಕೆ ದಾರಿ ಮಾಡಿಕೊಡುತ್ತವೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ. ಆತ್ಮೀಯರ ಮಧ್ಯೆ ಬೆಳೆದ ದ್ವೇಷವೇ ಕೊನೆಗೆ ಜೀವಹಾನಿಗೆ ಕಾರಣವಾದ ಈ ಘಟನೆ, ಮಾನವ ಸಂಬಂಧಗಳ ನಾಜೂಕು ಮತ್ತು ಅದರ ಅಪಾಯಗಳನ್ನು ಮತ್ತೆ ಒತ್ತಿ ಹೇಳುತ್ತದೆ. ಮದುವೆ ಸಂಭ್ರಮದಿಂದ ಕಂಗೊಳಿಸಬೇಕಿದ್ದ ಮನೆಯಲ್ಲೇ ಅಂತಿಮ ವಿಧಿಗಳು ನಡೆಯುವಂತಾಗಿದ್ದು, ಕುಟುಂಬದ ದುಃಖವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಪೊಲೀಸರ ತ್ವರಿತ ಕಾರ್ಯಾಚರಣೆ ಶ್ಲಾಘನೀಯವಾದರೂ, ಇಂತಹ ಘಟನೆಗಳು ಮರುಕಳಿಸದಂತೆ ಸಮಾಜದಲ್ಲೇ ಜಾಗೃತಿ ಮೂಡಬೇಕಾಗಿದೆ.

# ಅಕ್ರಮ ಸಂಬಂಧ, ಹಣದ ವ್ಯಾಮೋಹಕ್ಕೆ ಬಲಿಯಾದ ಶಿಕ್ಷಕಿ! ಕಲಬುರಗಿಯಲ್ಲಿ 24 ಗಂಟೆಯಲ್ಲಿ ಬಯಲಾದ ಭೀಕರ ಹತ್ಯೆ ರಹಸ್ಯ!!

**ಕಲಬುರಗಿ ಜಿಲ್ಲೆಯಲ್ಲಿ ಸುಟ್ಟು ಕರಕಲಾಗಿದ್ದ ಸ್ಥಿತಿಯಲ್ಲಿ ಪತ್ತೆಯಾದ ಸರ್ಕಾರಿ ಶಾಲಾ ಶಿಕ್ಷಕಿ ಜ್ಯೋತಿ ಕಪಾಳೆ ಹತ್ಯೆ ಪ್ರಕರಣ ರಾಜ್ಯದಾದ್ಯಂತ ಸಂಚಲನ ಮೂಡಿಸಿತ್ತು. ಆರಂಭದಲ್ಲಿ ನಿಗೂಢವಾಗಿ ಕಂಡ ಈ ಪ್ರಕರಣವನ್ನು ಪೊಲೀಸರು ಕೇವಲ 24 ಗಂಟೆಯೊಳಗೆ ಭೇದಿಸಿ, ಅದರ ಹಿಂದಿರುವ ಅಕ್ರಮ ಸಂಬಂಧ ಮತ್ತು ಲಕ್ಷಾಂತರ ರೂಪಾಯಿ ಹಣದ ವ್ಯವಹಾರದ ಬೆಚ್ಚಿಬೀಳಿಸುವ ಸತ್ಯವನ್ನು ಹೊರತೆಗೆದಿದ್ದಾರೆ. ನಂಬಿಕೆ, ಪ್ರೀತಿ ಮತ್ತು ಹಣದ ನಡುವೆ ಹುಟ್ಟಿದ ವೈಮನಸ್ಸು ಕೊನೆಗೆ ಬರ್ಬರ ಕೊಲೆಗೆ ಕಾರಣವಾದ ಈ ಘಟನೆ ಸಮಾಜಕ್ಕೆ ಎಚ್ಚರಿಕೆಯ ಘಂಟೆಯಾಗಿ ಪರಿಣಮಿಸಿದೆ.**


ಕೊಲೆಯಾದ ಜ್ಯೋತಿ ಕಪಾಳೆ

ಕಲಬುರಗಿ ಜಿಲ್ಲೆಯ ಕಮಲಾಪುರ ತಾಲೂಕಿನ ಕಲಮೂಡ ಗ್ರಾಮದ ಸಮೀಪದ ನಿರ್ಜನ ಪ್ರದೇಶದಲ್ಲಿ ಸುಟ್ಟು ಕರಕಲಾಗಿದ್ದ ಮಹಿಳೆಯ ಶವ ಪತ್ತೆಯಾದ ಘಟನೆ ರಾಜ್ಯದ ಗಮನ ಸೆಳೆದಿತ್ತು. ಮೊದಲ ನೋಟಕ್ಕೆ ಇದು ಸಾಮಾನ್ಯ ಅಪಘಾತವೇ ಅಥವಾ ಆತ್ಮಹತ್ಯೆಯೇ ಎಂಬ ಅನುಮಾನಗಳು ಮೂಡಿದ್ದರೂ, ಶವದ ಸ್ಥಿತಿ ಹಾಗೂ ಸುತ್ತಮುತ್ತಲಿನ ಪರಿಸ್ಥಿತಿಗಳನ್ನು ಗಮನಿಸಿದ ಪೊಲೀಸರು ಇದು ನಿಗೂಢ ಹತ್ಯೆ ಎಂಬ ಅನುಮಾನ ವ್ಯಕ್ತಪಡಿಸಿ ತನಿಖೆ ಆರಂಭಿಸಿದ್ದರು. ಸಂಪೂರ್ಣವಾಗಿ ಸುಟ್ಟು ಹೋಗಿದ್ದ ಶವದಿಂದ ಗುರುತು ಪತ್ತೆ ಹಚ್ಚುವುದು ದೊಡ್ಡ ಸವಾಲಾಗಿದ್ದರೂ, ಪೊಲೀಸ್ ತಂಡ ತಾಂತ್ರಿಕ ಮಾಹಿತಿ, ಸ್ಥಳೀಯ ಮಾಹಿತಿ ಸಂಗ್ರಹ ಹಾಗೂ ಸೂಕ್ಷ್ಮ ಪರಿಶೀಲನೆಯ ಮೂಲಕ ಶವವು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ವಾಂಜರಖೇಡ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದ ಜ್ಯೋತಿ ಕಪಾಳೆ (57) ಅವರದ್ದೆಂದು ದೃಢಪಡಿಸಿದರು. ಈ ಪತ್ತೆ ಪ್ರಕರಣಕ್ಕೆ ಹೊಸ ತಿರುವು ನೀಡಿತು.

ಜ್ಯೋತಿ ಕಪಾಳೆ ಅವರು ಅವಿವಾಹಿತೆಯಾಗಿದ್ದು, ತಮ್ಮ ಸೇವಾ ಸ್ಥಳ ಭಾಲ್ಕಿಯಲ್ಲಿ ವಾಸವಿದ್ದು, ರಜೆ ದಿನಗಳಲ್ಲಿ ಕಲಬುರಗಿಯ ಆನಂದ ನಗರದಲ್ಲಿರುವ ತಮ್ಮ ತಾಯಿ ಮನೆಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಇದೇ ಸಂದರ್ಭದಲ್ಲಿ ಅವರ ನೆರೆಯ ನಿವಾಸಿಯಾದ ಚಿಂಚೋಳಿ ತಾಲೂಕಿನ ಭುಂಯರ್ ಗ್ರಾಮದ ಮೂಲದ ಅಮರ್ ಕುಡ್ದಳ್ಳಿ (27) ಎಂಬ ಯುವಕನೊಂದಿಗೆ ಪರಿಚಯ ಬೆಳೆದಿತ್ತು. ಮೊದಲಿಗೆ ಸಾಮಾನ್ಯ ಪರಿಚಯವಾಗಿದ್ದ ಇದು ನಂತರ ಆಪ್ತತೆಯಾಗಿ, ಬಳಿಕ ಅಕ್ರಮ ಸಂಬಂಧವಾಗಿ ಮಾರ್ಪಟ್ಟಿತ್ತು. ವಯಸ್ಸಿನಲ್ಲಿ ದೊಡ್ಡ ಅಂತರವಿದ್ದರೂ, ಹಣದ ಆಮಿಷ ಮತ್ತು ಭಾವನಾತ್ಮಕ ಅವಲಂಬನೆಯ ನಡುವೆ ಈ ಸಂಬಂಧ ಐದು ವರ್ಷಗಳ ಕಾಲ ಮುಂದುವರಿದಿತ್ತು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ.

ಪೊಲೀಸರ ತನಿಖೆಯಲ್ಲಿ ಬಹಿರಂಗವಾದ ಮತ್ತೊಂದು ಪ್ರಮುಖ ಅಂಶವೆಂದರೆ ಹಣಕಾಸಿನ ವ್ಯವಹಾರ. ಜ್ಯೋತಿ ಅವರು ಅಮರ್‌ಗೆ ಅಪಾರ ಪ್ರಮಾಣದಲ್ಲಿ ಹಣ ಸಹಾಯ ಮಾಡುತ್ತಿದ್ದರು. ಸುಮಾರು 15ರಿಂದ 20 ಲಕ್ಷ ರೂಪಾಯಿವರೆಗೆ ಹಣವನ್ನು ವಿವಿಧ ಸಂದರ್ಭಗಳಲ್ಲಿ ನೀಡಿದ್ದರೆಂದು ತಿಳಿದುಬಂದಿದೆ. ಆ ಹಣವನ್ನು ಬಳಸಿಕೊಂಡು ಅಮರ್ 'ನಂದಿನಿ ಪಾರ್ಲರ್' ಆರಂಭಿಸಿದ್ದಲ್ಲದೆ, ಐಷಾರಾಮಿ ಜೀವನ ನಡೆಸಲು ಮುಂದಾಗಿದ್ದ. ದುಬಾರಿ 'ಥಾರ್' ಕಾರು ಖರೀದಿಸುವ ಮಟ್ಟಕ್ಕೆ ಹಣವನ್ನು ಬಳಸಿಕೊಂಡಿದ್ದಾನೆ. ಆದರೆ ಸಮಯ ಕಳೆದಂತೆ ಜ್ಯೋತಿ ಅವರು ನೀಡಿದ್ದ ಹಣವನ್ನು ವಾಪಸ್ ಪಡೆಯಲು ಒತ್ತಾಯಿಸಲು


ಎಸ್ಪಿ ಅಡ್ಡೂರು ಶ್ರೀನಿವಾಸಲು


ಅ|| ಎಸ್ಪಿ ಮಹೇಶ್ ಮೇಘಣ್ಣನವರ್



ಸಿಪಿಐ ಶಿವಶಂಕರ್ ಸಾಹು

ಆರಂಭಿಸಿದಾಗ ಇಬ್ಬರ ನಡುವೆ ಅಂತರ ಮತ್ತು ಮನಸ್ತಾಪ ಹೆಚ್ಚಾಗಿತ್ತು.

ಈ ಹಣದ ವ್ಯವಹಾರವೇ ಕೊನೆಗೆ ಭೀಕರ ಕೊಲೆಗೆ ಕಾರಣವಾಯಿತು. ಐದು ದಿನಗಳ ಹಿಂದೆ ಜ್ಯೋತಿ ಅವರಿಗೆ ಹಣ ಹಿಂತಿರುಗಿಸುವ ನೆಪದಲ್ಲಿ ಅಮರ್ ಅವರನ್ನು ತನ್ನ ಕಾರಿನಲ್ಲಿ ಕರೆದುಕೊಂಡು ಹೊರಟಿದ್ದಾನೆ. ರಾತ್ರಿ ಹೊತ್ತು ಸುತ್ತಾಡಿಸಿಕೊಂಡು ಹೋಗಿ, ಮಧ್ಯರಾತ್ರಿ ಸುಮಾರು 1 ಗಂಟೆ ವೇಳೆಗೆ ಹೆದ್ದಾರಿಯ ಬಳಿ ನಿರ್ಜನ ಪ್ರದೇಶದಲ್ಲಿ ಕಾರು ನಿಲ್ಲಿಸಿದ್ದಾನೆ. ಅಲ್ಲಿ ಜ್ಯೋತಿ ಅವರೊಂದಿಗೆ ವಾಗ್ವಾದಕ್ಕಿಳಿದ ಅಮರ್, ಕೋಪೋದ್ರಿಕ್ತನಾಗಿ ಚಾಕುವಿನಿಂದ ಹಲ್ಲೆ ನಡೆಸಿದ್ದಾನೆ. ಗಂಭೀರವಾಗಿ ಗಾಯಗೊಂಡ ಜ್ಯೋತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂದರ್ಭದಲ್ಲಿ ಆತಂಕಗೊಂಡ ಆರೋಪಿ ತನ್ನ ಅಪರಾಧವನ್ನು ಮುಚ್ಚಿಹಾಕಲು ಕ್ರೂರ ಕ್ರಮಕ್ಕೆ ಮುಂದಾಗಿದ್ದಾನೆ.

ಕೊಲೆ ಮಾಡಿದ ಬಳಿಕ ಸಾಕ್ಷ್ಯಗಳನ್ನು ನಾಶ ಪಡಿಸಲು ಮೃತದೇಹವನ್ನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾನೆ. ಸಂಪೂರ್ಣವಾಗಿ ಸುಟ್ಟುಹೋಗುವಂತೆ ಮಾಡಿದ ನಂತರ ಸ್ಥಳವನ್ನು ತೊರೆದು ಪರಾರಿಯಾಗಿದ್ದಾನೆ. ಈ ರೀತಿ ಸುಟ್ಟುಹಾಕಿದ ಕಾರಣ ಶವ ಗುರುತಿಸಲು ಕಷ್ಟವಾಗುವಂತೆ ಮಾಡಲು ಯತ್ನಿಸಿದ್ದಾನೆ. ಆದರೆ ಪೊಲೀಸರ ತನಿಖಾ ಚಾತುರ್ಯ ಮತ್ತು ತಾಂತ್ರಿಕ ಸಾಕ್ಷ್ಯಗಳ ಸಹಾಯದಿಂದ ಈ ಪ್ರಯತ್ನ ವಿಫಲವಾಯಿತು.

ಘಟನೆ ಬೆಳಕಿಗೆ ಬಂದ ತಕ್ಷಣವೇ ಕಮಲಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಅವರ ಮಾರ್ಗದರ್ಶನದಲ್ಲಿ ತನಿಖೆ ಚುರುಕುಗೊಂಡಿತು. ಹೆಚ್ಚುವರಿ ಎಸ್ಪಿ ಮಹೇಶ್ ಮೇಘಣ್ಣನವರ್ ಅವರ ನೇತೃತ್ವದಲ್ಲಿ ಸಿಪಿಐ ಶಿವಶಂಕರ್ ಸಾಹು, ಪಿಎಸ್ಐ ಸುಖಾನಂದ ಸಿಂಗೆ ಹಾಗೂ ಉಪೇಂದ್ರ, ಹುಸೇನ್ ಪಟೇಲ್, ರಾಕೇಶ್ ಸೇರಿದಂತೆ ಸಿಬ್ಬಂದಿಗಳ ವಿಶೇಷ ತಂಡವನ್ನು ರಚಿಸಲಾಗಿತ್ತು. ಸ್ಥಳ ಪರಿಶೀಲನೆ, ಮೊಬೈಲ್ ಕಾಲ್ ಡೇಟಾ ವಿಶ್ಲೇಷಣೆ, ಸಿಸಿಟಿವಿ ದೃಶ್ಯಗಳ ಪರಿಶೀಲನೆ ಮತ್ತು ಮೃತೆಯ ಸಂಪರ್ಕ ವಲಯವನ್ನು ಆಳವಾಗಿ ಅಧ್ಯಯನ ಮಾಡಿದ ಪೊಲೀಸರು ಶೀಘ್ರದಲ್ಲೇ ಅಮರ್ ಕುಡ್ದಳ್ಳಿಯ ಮೇಲೆ ಅನುಮಾನ ಕೇಂದ್ರೀಕರಿಸಿದರು.


ಕೊಲೆಯಾದ ಜ್ಯೋತಿ ಕಪಾಳೆಯ ಮೃತದೇಹವನ್ನು ಪರಿಶೀಲಿಸುತ್ತಿರುವ ಪೊಲೀಸರು

ಆರೋಪಿಯ ಚಲನವಲನಗಳನ್ನು ಹತ್ತಿಕ್ಕಿದ ಪೊಲೀಸರು ಅವನನ್ನು ಬಂಧಿಸಿ


ಆರೋಪಿ ಅಮರ್ ಕುಡ್ದಳ್ಳಿ

ವಿಚಾರಣೆ ನಡೆಸಿದಾಗ, ಆತ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಹಣ ವಾಪಸ್ ಕೇಳಿದ್ದರಿಂದ ಉಂಟಾದ ಕೋಪ ಮತ್ತು ಒತ್ತಡದ ನಡುವೆ ಈ ಕೃತ್ಯ ಎಸಗಿರುವುದಾಗಿ ಹೇಳಿದ್ದಾನೆ ಎನ್ನಲಾಗಿದೆ. ಈ ಮೂಲಕ ಕೇವಲ 24 ಗಂಟೆಯೊಳಗೆ ನಿಗೂಢ ಹತ್ಯೆ ಪ್ರಕರಣವನ್ನು ಭೇದಿಸಿದ ಪೊಲೀಸ್ ತಂಡದ ಕಾರ್ಯಕ್ಷಮತೆಗೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಈ ಘಟನೆ ಕೇವಲ ಒಂದು ಹತ್ಯೆ ಪ್ರಕರಣವಷ್ಟೇ ಅಲ್ಲ, ಸಮಾಜದಲ್ಲಿ ಬೆಳೆಯುತ್ತಿರುವ ಅಕ್ರಮ ಸಂಬಂಧಗಳು ಮತ್ತು ಹಣದ ವ್ಯಾಮೋಹದ ದುಷ್ಪರಿಣಾಮಗಳನ್ನು ಎತ್ತಿ ಹಿಡಿಯುವ ಕಠಿಣ ಉದಾಹರಣೆಯಾಗಿದೆ. ವಯಸ್ಸಿನ ಅಂತರವನ್ನೂ ಲೆಕ್ಕಿಸದೆ ಬೆಳೆದ ಸಂಬಂಧ, ಹಣದ ಮೇಲೆ ನಿರ್ಮಿತವಾದ ನಂಬಿಕೆ, ಮತ್ತು ನಂತರ ಉಂಟಾದ ದ್ರೋಹ ಇವೆಲ್ಲವೂ ಸೇರಿ ಒಂದು ಜೀವವನ್ನು ಬಲಿಯಾಗಿಸಿವೆ. 'ಪ್ರೀತಿ' ಎಂಬ ಹೆಸರಿನಲ್ಲಿ ಆರಂಭವಾದ ಸಂಬಂಧ, ಹಣದ ವ್ಯವಹಾರದಲ್ಲಿ ಸಿಲುಕಿ ಕೊನೆಗೆ ರಕ್ತಪಾತದ ಅಂತ್ಯ ಕಂಡಿದೆ.

ಜ್ಯೋತಿ ಕಪಾಳೆ ಅವರು ಶಿಕ್ಷಕಿಯಾಗಿ ಅನೇಕ ಮಕ್ಕಳಿಗೆ ವಿದ್ಯೆ ನೀಡಿದವರಾಗಿದ್ದು, ಸಮಾಜದಲ್ಲಿ ಗೌರವಾನ್ವಿತ ಸ್ಥಾನ ಹೊಂದಿದ್ದರು. ಆದರೆ ವೈಯಕ್ತಿಕ ಬದುಕಿನ ನಿರ್ಧಾರಗಳು ಅವರ ಜೀವವನ್ನೇ ಕಸಿದುಕೊಂಡವು ಎಂಬುದು ಈ ಪ್ರಕರಣದ ದುಃಖಕರ ಸಂಗತಿ. ಇನ್ನೊಂದೆಡೆ, ಯುವಕ ಅಮರ್ ಕುಡ್ದಳ್ಳಿ ತನ್ನ ಲಾಭಕ್ಕಾಗಿ ಸಂಬಂಧವನ್ನು ಬಳಸಿಕೊಂಡು, ಕೊನೆಗೆ ಅದೇ ಸಂಬಂಧವನ್ನು ಕೊಲೆಯ ಮಟ್ಟಕ್ಕೆ ತೆಗೆದುಕೊಂಡಿರುವುದು ಮಾನವೀಯ ಮೌಲ್ಯಗಳ ಕುಸಿತವನ್ನು ತೋರಿಸುತ್ತದೆ.

ಈ ಪ್ರಕರಣವು ಸಮಾಜಕ್ಕೆ ಮಹತ್ವದ ಪಾಠವನ್ನೂ ನೀಡುತ್ತದೆ. ಹಣಕಾಸಿನ ವ್ಯವಹಾರಗಳು ಮತ್ತು ವೈಯಕ್ತಿಕ ಸಂಬಂಧಗಳು ಬೆರೆತಾಗ ಉಂಟಾಗುವ ಅಪಾಯಗಳನ್ನು ನಿರ್ಲಕ್ಷಿಸಬಾರದು. ನಂಬಿಕೆ ಮತ್ತು ಪ್ರೀತಿ ಎಂಬ ಹೆಸರಿನಲ್ಲಿ ನಡೆಯುವ ಸಂಬಂಧಗಳು ಎಷ್ಟೇ ಆಪ್ತವಾಗಿದ್ದರೂ, ಅವುಗಳಲ್ಲಿ ಜಾಗರೂಕತೆ ಅಗತ್ಯವಿದೆ. ಇಲ್ಲವಾದರೆ, ಅಲ್ಪ ಕಾರಣಗಳೇ ದೊಡ್ಡ ಅನಾಹುತಗಳಿಗೆ ಕಾರಣವಾಗಬಹುದು ಎಂಬುದನ್ನು ಈ ದುರಂತ ಘಟನೆ ಮತ್ತೊಮ್ಮೆ ಸಾಬೀತುಪಡಿಸಿದೆ.

# ತವರಿನಿಂದ ಪತ್ನಿ ಬಲವಂತವಾಗಿ ಕರೆದೊಯ್ಯುವಾಗ ಅಡ್ಡ ಬಂದ ಅತ್ತೆಯನ್ನು ಭೀಕರವಾಗಿ ಕೊಂದ!

ಬೆಂಗಳೂರು ನಗರದಲ್ಲಿ ನಡೆದ ಒಂದು ಕೌಟುಂಬಿಕ ಕಲಹವು ಭೀಕರ ಕೊಲೆಯಲ್ಲಿ ಅಂತ್ಯಗೊಂಡಿರುವ ಘಟನೆ ಸಮಾಜದ ಮನಸ್ಸನ್ನು ನಡುಗಿಸುವಂತಿದೆ. ಸಾಮಾನ್ಯವಾಗಿ ಗಂಡ ಹೆಂಡತಿಯ ನಡುವೆ ಉಂಟಾಗುವ ಭಿನ್ನಾಭಿಪ್ರಾಯಗಳು ಮಾತುಕತೆ ಅಥವಾ ಸಮಾಧಾನದ ಮೂಲಕ ಅಂತ್ಯಗೊಳ್ಳಬೇಕಾದರೆ, ಇಲ್ಲಿ ಅದೇ ಕಲಹವು ಹಿಂಸೆಗೆ ತಿರುಗಿ ನಿರಪರಾಧಿಯೊಬ್ಬಳ ಜೀವ ಬಲಿಯಾಗಿರುವುದು ದುಃಖಕರ ಸಂಗತಿಯಾಗಿದೆ. ಈ ಘಟನೆ ಕುಟುಂಬದ ಒಳಜಗಳಗಳು ಯಾವ ಮಟ್ಟಿಗೆ ಅಪಾಯಕಾರಿ ಆಗಬಹುದು ಎಂಬುದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.


ಕೊಲೆಯಾದ ಮಾಗೇಶ್ವರಿ

ಮಣಿಕಿರಣ್ ಮತ್ತು ಅವನ ಪತ್ನಿ ಚಾರುಲತಾ ನಡುವೆ ಉಂಟಾದ ವೈಮನಸ್ಸಿನ ಪರಿಣಾಮವಾಗಿ ಚಾರುಲತಾ ತನ್ನ ತವರು ಮನೆಗೆ ಬಂದು ವಾಸವಾಗಿದ್ದಳು. ಆಡುಗೋಡಿಯಲ್ಲಿರುವ ತನ್ನ ಅಜ್ಜಿ ಮತ್ತು ಚಿಕ್ಕಮ್ಮ ಮಾಗೇಶ್ವರಿ ಅವರ ಜೊತೆಗೇ ಅವಳು ಜೀವನ ಸಾಗಿಸುತ್ತಿದ್ದಳು. ಗಂಡನೊಂದಿಗೆ ಉಂಟಾದ ಕಲಹದಿಂದ ದೂರ ಉಳಿಯಲು ಮತ್ತು ಮಾನಸಿಕ ಶಾಂತಿ ಪಡೆಯಲು ಆಕೆ ತವರು ಮನೆಗೆ ಬಂದಿದ್ದಳು ಎನ್ನಲಾಗಿದೆ. ಆದರೆ ಮಣಿಕಿರಣ್ ತನ್ನ ಪತ್ನಿಯನ್ನು ಮರಳಿ ಮನೆಗೆ ಕರೆದುಕೊಂಡು ಹೋಗಲು ಹಲವಾರು ಬಾರಿ ಪ್ರಯತ್ನಿಸಿದ್ದ. ಅವನು ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿದ್ದರೂ, ಚಾರುಲತಾ ಅದಕ್ಕೆ ಒಪ್ಪಿರಲಿಲ್ಲ. ಇದು ಮಣಿಕಿರಣ್‌ನ ಮನಸ್ಸಿನಲ್ಲಿ ಆಕ್ರೋಶ ಮತ್ತು ಅಸಹನೆಯನ್ನು ಹೆಚ್ಚಿಸಿತ್ತು.

ಕೊನೆಗೆ, ತನ್ನ ಉದ್ದೇಶ ಸಾಧಿಸಲು ಮಣಿಕಿರಣ್ ಮತ್ತೊಂದು ನಿರ್ಧಾರ ಕೈಗೊಂಡನು. ತನ್ನ ತಂದೆ ಮಣಿವಣ್ಣನ್ ಮತ್ತು ಸ್ನೇಹಿತರಾದ ಮಣಿರಾಜ್ ಅಲಿಯಾಸ್ ಸ್ಟೀಫನ್ ಹಾಗೂ ಅಭಿಷೇಕ್ ಅವರನ್ನು ಜೊತೆಗಿಟ್ಟುಕೊಂಡು ಚಾರುಲತಾಳ ತವರು ಮನೆಗೆ ತೆರಳಿದನು. ಅಲ್ಲಿ ಮತ್ತೆ ಪತ್ನಿಯನ್ನು ಬಲವಂತವಾಗಿ ಕರೆದುಕೊಂಡು ಹೋಗಲು ಯತ್ನಿಸಿದನು. ಈ ವೇಳೆ ಮನೆಯಲ್ಲಿ ಇದ್ದ ಚಿಕ್ಕಮ್ಮ ಮಾಗೇಶ್ವರಿ ಮಧ್ಯಪ್ರವೇಶಿಸಿ, ಈ ರೀತಿಯ ಬಲವಂತಕ್ಕೆ ವಿರೋಧ ವ್ಯಕ್ತಪಡಿಸಿದರು. ಪತ್ನಿಯ ಮನಸ್ಸಿಗೆ ವಿರುದ್ಧವಾಗಿ ಅವಳನ್ನು ಕರೆದುಕೊಂಡು ಹೋಗುವುದು ಸರಿಯಲ್ಲ ಎಂದು ಅವರು ಹೇಳಿದ್ದಾಗಿ ತಿಳಿದು ಬಂದಿದೆ.

ಆದರೆ ಈ ಮಧ್ಯಪ್ರವೇಶವೇ ಘಟನೆಗೆ ತಿರುವು ನೀಡಿತು. ಈಗಾಗಲೇ ಕೋಪದಿಂದ ಕಂಗಾಲಾಗಿದ್ದ ಮಣಿಕಿರಣ್, ಮಾಗೇಶ್ವರಿ ಅವರ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದನು. ಕಬ್ಬಿಣದ ರಾಡ್ ಬಳಸಿ ಅವರ ಮೇಲೆ ಹೊಡೆದು ಗಂಭೀರ ಗಾಯಗೊಳಿಸಿದನು. ಇದರಿಂದಲೂ ತೃಪ್ತಿ ಪಡದೆ, ನಂತರ ಚೂರಿಯಿಂದ ಹಲವು ಬಾರಿ ಇರಿದನು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಈ ದಾಳಿಯಿಂದ ಮಾಗೇಶ್ವರಿ ರಕ್ತದ ಮಡುವಿನಲ್ಲಿ ಬಿದ್ದು ತೀವ್ರವಾಗಿ ಗಾಯಗೊಂಡರು. ಮನೆಯವರಲ್ಲಿ ಭೀತಿ ಮತ್ತು ಆತಂಕ ಉಂಟಾಯಿತು.

ಗಂಭೀರ ಗಾಯಗೊಂಡ ಮಾಗೇಶ್ವರಿ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತು. ಮೊದಲಿಗೆ ಅವರನ್ನು ಸೇಂಟ್ ಜಾನ್ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅಲ್ಲಿ ವೈದ್ಯರು ಚಿಕಿತ್ಸೆ ಆರಂಭಿಸಿದರು. ಆರಂಭದಲ್ಲಿ ಅವರ ಪ್ರಾಣಾಪಾಯ ಕಡಿಮೆಯಾಗಿದೆ ಎಂಬ ನಿರೀಕ್ಷೆ ಮೂಡಿಸಿದ್ದರೂ, ನಂತರ ಅವರ ಆರೋಗ್ಯದಲ್ಲಿ ತೀವ್ರ ಹದಗೆಟ್ಟಿತು. ಕುಟುಂಬದ ಆರ್ಥಿಕ ಸಂಕಷ್ಟದಿಂದಾಗಿ ಅವರನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಬೇಕಾದ ಪರಿಸ್ಥಿತಿ ಎದುರಾಯಿತು. ಚಿಕಿತ್ಸೆ ಮುಂದುವರಿದರೂ, ಅವರ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಭಾನುವಾರ ಮುಂಜಾನೆ 45 ವರ್ಷದ ಮಾಗೇಶ್ವರಿ ಕೊನೆಯುಸಿರೆಳೆದರು.

ಈ ಘಟನೆ ಮೊದಲಿಗೆ ಹಲ್ಲೆ ಪ್ರಕರಣವಾಗಿ ದಾಖಲಾಗಿತ್ತು. ಆದರೆ ಮಾಗೇಶ್ವರಿ ಮೃತಪಟ್ಟ ನಂತರ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಪರಿವರ್ತಿಸಲಾಯಿತು. ಪೊಲೀಸರು ತಕ್ಷಣ ಕ್ರಮ ಕೈಗೊಂಡು ಮಣಿಕಿರಣ್ ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ. ಆರೋಪಿಗಳು ಕೂಲಿ ಕಾರ್ಮಿಕರಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ತನಿಖೆ ಮುಂದುವರಿದಿದ್ದು, ಘಟನೆಯ ಸಂಪೂರ್ಣ ವಿವರಗಳನ್ನು ಪೊಲೀಸರು ಸಂಗ್ರಹಿಸುತ್ತಿದ್ದಾರೆ.


ಆರೋಪಿಗಳಾದ ಮಣಿವಣ್ಣನ್ ಹಾಗೂ ಮಣಿಕಿರಣ್

ಈ ಘಟನೆ ಕೇವಲ ಒಂದು ಕುಟುಂಬದ ದುರಂತ ಮಾತ್ರವಲ್ಲ, ಇಡೀ ಸಮಾಜಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ಕೋಪ ಮತ್ತು ಅಸಹನೆ ಎಷ್ಟೊಂದು ಭೀಕರ ಪರಿಣಾಮಗಳನ್ನು ಉಂಟುಮಾಡಬಹುದು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಗಂಡಹೆಂಡತಿ ನಡುವಿನ ಕಲಹಗಳು ಸಾಮಾನ್ಯವಾಗಿದ್ದರೂ, ಅವುಗಳನ್ನು ಹಿಂಸೆಯ ಮೂಲಕ ಪರಿಹರಿಸಲು ಯತ್ನಿಸುವುದು ಜೀವಹಾನಿಗೆ ಕಾರಣವಾಗಬಹುದು. ಸಂವಾದ, ಸಹನೆ ಮತ್ತು ಪರಸ್ಪರ ಗೌರವವೇ ಕುಟುಂಬ ಜೀವನದ ಮೂಲಭೂತ ಅಂಶಗಳಾಗಿವೆ ಎಂಬುದನ್ನು ಈ ಘಟನೆ ಮತ್ತೆ ನೆನಪಿಸುತ್ತದೆ.

ಮಹಿಳೆಯೊಬ್ಬಳು ಕೇವಲ ಮಧ್ಯಪ್ರವೇಶ ಮಾಡಿದ ಕಾರಣಕ್ಕೆ ತನ್ನ ಜೀವ ಕಳೆದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಸಮಾಜದ ನೈತಿಕ ಮೌಲ್ಯಗಳ ಮೇಲೆ ಪ್ರಶ್ನೆ ಎತ್ತುತ್ತದೆ. ಇಂತಹ ಘಟನೆಗಳು ಮರುಕಳಿಸದಂತೆ ಕಾನೂನು ಕ್ರಮಗಳ ಜೊತೆಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಕುಟುಂಬದ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸುವ ಮನೋಭಾವ ಬೆಳೆಸುವುದು ಮಾತ್ರವೇ ಇಂತಹ ದುರಂತಗಳನ್ನು ತಪ್ಪಿಸಲು ಸಹಾಯಕವಾಗಬಹುದು.

# ನಕಲಿ ಐಎಎಸ್ ಅಧಿಕಾರಿಯ ವೇಷದಲ್ಲಿ ಕೋಟ್ಯಾಂತರ ವಂಚನೆ: ಮಿಥುನ್ ಬಂಧನದಿಂದ ಬಹಿರಂಗವಾದ ಮೋಸದ ಜಾಲ

ಐಎಎಸ್ ಅಧಿಕಾರಿ ಎಂಬ ಹೆಸರಿನಲ್ಲಿ ಜನರ ವಿಶ್ವಾಸವನ್ನು ದುರುಪಯೋಗಪಡಿಸಿಕೊಂಡು ಕೋಟ್ಯಾಂತರ ರೂಪಾಯಿ ವಂಚನೆ ನಡೆಸಿದ ಪ್ರಕರಣವು ಸಮಾಜದಲ್ಲಿ ಹೆಚ್ಚುತ್ತಿರುವ ಮೋಸದ ಹೊಸ ಮುಖವನ್ನು ಮತ್ತೊಮ್ಮೆ ಬೆಳಕಿಗೆ ತಂದಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ಮೂಲದ ಮಿಥುನ್ ಎಂಬಾತ ತನ್ನನ್ನು 2023ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಎಂದು ಸುಳ್ಳು ಪರಿಚಯ ಮಾಡಿಕೊಂಡು ವೈದ್ಯರು, ಸರ್ಕಾರಿ ಅಧಿಕಾರಿಗಳು ಹಾಗೂ ಮೆಡಿಕಲ್ ಉದ್ಯಮಿಗಳನ್ನು ಗುರಿಯಾಗಿಸಿಕೊಂಡು ದೊಡ್ಡ ಮಟ್ಟದ ವಂಚನೆ ನಡೆಸಿದ್ದಾನೆ. ಅಧಿಕಾರದ ಹೆಸರಿನಲ್ಲಿ ಜನರು ಸುಲಭವಾಗಿ ನಂಬುವ ಮನಸ್ಥಿತಿಯನ್ನು ಬಳಸಿಕೊಂಡು ಈತ ತನ್ನ ಮೋಸದ ಜಾಲವನ್ನು ಬಿಚ್ಚಿಟ್ಟಿದ್ದಾನೆ. ವಿಶೇಷವಾಗಿ ಆರೋಗ್ಯ ಕ್ಷೇತ್ರವನ್ನು ಗುರಿಯಾಗಿಸಿಕೊಂಡು, ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್ಎಚ್ಎಂ) ವಿಭಾಗದ ಉನ್ನತಾಧಿಕಾರಿ ಎಂದು ತಾನು ಕಾರ್ಯನಿರ್ವಹಿಸುತ್ತಿದ್ದೇನೆ ಎಂದು ಹೇಳಿಕೊಂಡು ಹಲವರ ವಿಶ್ವಾಸ ಗಳಿಸಿದ್ದಾನೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಭೆಗಳನ್ನು ನಡೆಸುವ ಮಟ್ಟಕ್ಕೆ ಹೋಗಿ, ವೈದ್ಯರು ಹಾಗೂ ನರ್ಸ್‌ಗಳ ಮುಂದೆ ತನ್ನ ಪ್ರಭಾವವನ್ನು ಪ್ರದರ್ಶಿಸಿದ್ದರಿಂದ, ಯಾರಿಗೂ ಈತನ ಬಗ್ಗೆ ಅನುಮಾನ ಬಾರದಂತಾಗಿತ್ತು. ಈ ಮೂಲಕ ಅಧಿಕಾರದ ನಾಟಕವನ್ನೇ ತನ್ನ ಪ್ರಮುಖ ಆಯುಧವನ್ನಾಗಿ ಮಾಡಿಕೊಂಡಿದ್ದಾನೆ.


ಆಸ್ಪತ್ರೆಯಲ್ಲೇ ವೈದ್ಯರು ಮತ್ತು ನರ್ಸ್‌ಗಳ ಸಭೆ ನಡೆಸಿದ್ದ ಆರೋಪಿ ಮಿಥುನ್

ಚಿಕ್ಕಮಗಳೂರಿನ ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಯ ಜಿಲ್ಲಾ ಸರ್ಜನ್ ಡಾ. ಚಂದ್ರಶೇಖರ್ ಅವರನ್ನು ನಂಬಿಸುವಲ್ಲಿ ಮಿಥುನ್ ಯಶಸ್ವಿಯಾಗಿದ್ದು, ಅವರ ಮೂಲಕ ಇನ್ನಷ್ಟು ಜನರಿಗೆ ತನ್ನನ್ನು ಪರಿಚಯಿಸಿಕೊಂಡಿದ್ದಾನೆ. ಇದರಿಂದ ವೈದ್ಯಕೀಯ ಕ್ಷೇತ್ರದ ಹಲವರು ಈತನ ಮಾತುಗಳಿಗೆ ಒಳಗಾಗಿದ್ದಾರೆ. ವಿಶೇಷವಾಗಿ ಟೆಂಡರ್ ನೀಡುವ ಆಮಿಷವೊಡ್ಡಿ, ಔಷಧ ಸರಬರಾಜು ಒಪ್ಪಂದಗಳನ್ನು ಪಡೆಯಲು ಅವಕಾಶ ಕಲ್ಪಿಸುವುದಾಗಿ ಹೇಳಿ ಉದ್ಯಮಿಗಳಿಂದ ಹಣ ವಸೂಲಿಸಿದ್ದಾನೆ.


ಆರೋಪಿ ಮಿಥುನ್

ಶ್ರೇಯಸ್ ಮೆಡಿಕಲ್ ಮಾಲೀಕ ಸತೀಶ್ ಅವರಿಗೆ ಸುಮಾರು 1.8 ಕೋಟಿ ರೂಪಾಯಿ ಮೌಲ್ಯದ ಟೆಂಡರ್ ಕೊಡಿಸುವುದಾಗಿ ಹೇಳಿ, ಅದರ ಕಮಿಷನ್ ಹೆಸರಿನಲ್ಲಿ ಒಟ್ಟು 41 ಲಕ್ಷ ರೂಪಾಯಿಗಳನ್ನು ಪಡೆದು ಮೋಸ ಮಾಡಿದ್ದಾನೆ. ಇಂತಹ ರೀತಿಯಲ್ಲಿ ಹಲವರನ್ನು

☞ 14


ಯೋಗೇಶ್ ಗೌಡ

**ಧಾರವಾಡ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಯೋಗೇಶ್ ಗೌಡ ಅವರ ಹತ್ಯೆ ಪ್ರಕರಣವು ಕರ್ನಾಟಕದ ಇತ್ತೀಚಿನ ರಾಜಕೀಯ ಮತ್ತು ಅಪರಾಧ ಇತಿಹಾಸದಲ್ಲಿ ಅತ್ಯಂತ ಚರ್ಚಿತ ಮತ್ತು ಸಂವೇದನಾಶೀಲ ಪ್ರಕರಣಗಳಲ್ಲಿ ಒಂದಾಗಿದೆ. ಹತ್ತು ವರ್ಷಗಳ ದೀರ್ಘಕಾಲದ ತನಿಖೆ, ನ್ಯಾಯಾಲಯದ ವಿಚಾರಣೆ, ಸಾಕ್ಷಿಗಳ ಹೇಳಿಕೆಗಳು, ರಾಜಕೀಯ ಆರೋಪಗಳು ಮತ್ತು ಕಾನೂನು ಹೋರಾಟಗಳ ನಂತರ ಕೊನೆಗೂ ಈ ಪ್ರಕರಣಕ್ಕೆ ನ್ಯಾಯಾಂಗ ಅಂತಿಮ ತೀರ್ಪು ನೀಡಿದೆ. ಈ ತೀರ್ಪು ಕೇವಲ ಒಂದು ಕೊಲೆ ಪ್ರಕರಣದ ಅಂತ್ಯವಲ್ಲ, ಇದು ನಮ್ಮ ನ್ಯಾಯಾಂಗ ವ್ಯವಸ್ಥೆಯ ಸಹನೆ, ಪರಿಶೀಲನೆ ಮತ್ತು ನಿಖರತೆಯ ಸಂಕೇತವಾಗಿದೆ.**


ಹಂತಕ ವಿನಯ್ ಕುಲಕರ್ಣಿ

# ಯೋಗೇಶ್‌ಗೌಡ ಹತ್ಯೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ

2016ರ ಜೂನ್ 15ರಂದು ಧಾರವಾಡದ ಸಪ್ತಾಪುರ ಪ್ರದೇಶದಲ್ಲಿ ನಡೆದ ಈ ಘಟನೆ ರಾಜ್ಯವನ್ನು ಬೆಚ್ಚಿಬೀಳುವಂತೆ ಮಾಡಿತ್ತು. ಬೆಳಗಿನ ಜಾವ ತಮ್ಮದೇ ಜಿಮ್‌ನಲ್ಲಿ ದಿನಪತ್ರಿಕೆ ಓದುತ್ತಿದ್ದ ಯೋಗೇಶ್ ಗೌಡ ಅವರ ಮೇಲೆ ದುಷ್ಕರ್ಮಿಗಳ ಗುಂಪೊಂದು ದಾಳಿ ನಡೆಸಿತು. ಕಣ್ಣಿಗೆ ಖಾರದ ಪುಡಿ ಎರಚಿ, ನಂತರ ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಕೊಲೆಗೈದು ಸ್ಥಳದಿಂದ ಪರಾರಿಯಾದರು. ಈ ದಾಳಿ ಅತ್ಯಂತ ಯೋಜಿತವಾಗಿದ್ದು, ಇದು ಸಾಮಾನ್ಯ ವೈಯಕ್ತಿಕ ವೈಮನಸ್ಯಕ್ಕಿಂತ ಹೆಚ್ಚು ಗಂಭೀರ ಕಾರಣಗಳನ್ನು ಒಳಗೊಂಡಿದೆ ಎಂಬ ಅನುಮಾನ ಮೊದಲಿನಿಂದಲೇ ವ್ಯಕ್ತವಾಗಿತ್ತು.

ಪ್ರಾರಂಭಿಕ ತನಿಖೆಯಲ್ಲಿ ಪೊಲೀಸರು ಈ ಪ್ರಕರಣವನ್ನು ಆಸ್ತಿ ವಿವಾದದ ಹಿನ್ನೆಲೆಯಲ್ಲಿ ನಡೆದ ಕೊಲೆ ಎಂದು ಪರಿಗಣಿಸಿ ಕೆಲವರನ್ನು ಬಂಧಿಸಿದ್ದರು. ಆದರೆ ಮೃತರ ಕುಟುಂಬಸ್ಥರು ಮತ್ತು ಕೆಲವು ರಾಜಕೀಯ ನಾಯಕರು ಇದೊಂದು ರಾಜಕೀಯ ಪ್ರೇರಿತ ಹತ್ಯೆ ಎಂದು ಗಂಭೀರ ಆರೋಪ ಮಾಡಿದರು. ವಿಶೇಷವಾಗಿ ಜಿಲ್ಲಾ ಪಂಚಾಯತ್ ಚುನಾವಣೆಯ ನಂತರ ಉಂಟಾದ ರಾಜಕೀಯ ವೈಷಮ್ಯವೇ ಈ ಹತ್ಯೆಗೆ ಕಾರಣ ಎಂದು ಹೇಳಲಾಯಿತು. ಈ ಆರೋಪಗಳು ಪ್ರಕರಣದ ದಿಕ್ಕೇ ಬದಲಿಸಿತು. ಸಾರ್ವಜನಿಕ ಒತ್ತಡ ಮತ್ತು ಪ್ರಕರಣದ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು 2019ರಲ್ಲಿ ಪ್ರಕರಣವನ್ನು ಕೇಂದ್ರ ತನಿಖಾ ದಳ (CBI)ಗೆ ಹಸ್ತಾಂತರಿಸಲಾಯಿತು.

ಸಿಬಿಐ ತನಿಖೆಯು ಪ್ರಕರಣಕ್ಕೆ ಹೊಸ ಆಯಾಮ ನೀಡಿತು. ಸಂಸ್ಥೆಯು ಸಾಕ್ಷ್ಯಗಳನ್ನು ಸಂಗ್ರಹಿಸಿ, ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿ, ತಾಂತ್ರಿಕ ಮಾಹಿತಿಗಳನ್ನು ವಿಶ್ಲೇಷಿಸಿ ಪ್ರಕರಣದ ಸಂಪೂರ್ಣ ಚಿತ್ರಣವನ್ನು ರೂಪಿಸಿತು. ಈ ತನಿಖೆಯಲ್ಲಿ ಇದು ಪೂರ್ವನಿಯೋಜಿತ ಕೊಲೆ ಮತ್ತು ಪಿತೂರಿಯ ಫಲಿತಾಂಶ ಎಂಬುದು ಬಹಿರಂಗವಾಯಿತು. ಈ ಹಿನ್ನೆಲೆಯಲ್ಲಿ ಮಾಜಿ ಸಚಿವ ಮತ್ತು ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರನ್ನು 2020ರ ನವೆಂಬರ್‌ನಲ್ಲಿ ಬಂಧಿಸಲಾಯಿತು. ಅವರ ಬಂಧನವು ಪ್ರಕರಣಕ್ಕೆ ದೊಡ್ಡ ತಿರುವು ನೀಡಿತು ಮತ್ತು ರಾಜ್ಯ ರಾಜಕೀಯದಲ್ಲಿ ಭಾರಿ ಚರ್ಚೆಗೆ ಕಾರಣವಾಯಿತು.

ಈ ಪ್ರಕರಣದಲ್ಲಿ ಒಟ್ಟು 21 ಮಂದಿಯನ್ನು ಆರೋಪಿಗಳಾಗಿ ಗುರುತಿಸಲಾಗಿದ್ದು, ಪ್ರಮುಖ ಆರೋಪಿಗಳ ಪಟ್ಟಿಯಲ್ಲಿ ಬಸವರಾಜ ಮುತ್ತಗಿ (ಎ1, ಮಾಫಿ ಸಾಕ್ಷಿ) ವಿಕ್ರಂ ಬಳ್ಳಾರಿ (ಎ2), ಕೀರ್ತಿಕುಮಾರ್ ಕುರಹಟ್ಟಿ (ಎ3), ಸಂದೀಪ್ ಸವದತ್ತಿ (ಎ4), ವಿನಾಯಕ ಕಟಗಿ (ಎ5), ಮಹಾಬಲೇಶ್ವರ ಹೊಂಗಲ್ (ಎ6), ಸಂತೋಷ್ ಸವದತ್ತಿ (ಎ7), ದಿನೇಶ್ (ಎ8), ಅಶ್ವತ್ಥ (ಎ9), ಸುನೀಲ್ (ಎ10), ನಜೀರ್ ಅಹಮದ್ (ಎ11), ಶಹನವಾಜ್ (ಎ12), ನೂತನ್ (ಎ13), ಹರ್ಷಿತ್ (ಎ14), ಮಾಜಿ ಸಚಿವ ಹಾಗೂ ಶಾಸಕ ವಿನಯ್ ಕುಲಕರ್ಣಿ (ಎ15), ಚಂದ್ರಶೇಖರ್ ಇಂಡಿ (ಎ16), ಶಿವಾನಂದ ಬಿರಾದಾರ್ (ಎ17 ಮಾಫಿ ಸಾಕ್ಷಿ), ವಿಕಾಸ್ ಕಲ್ಬುರ್ಗಿ (ಎ18), ಚೆನ್ನಕೇಶವ ಟಿಂಗರಿಕರ್ (ಎ19), ವಾಸುದೇವ ನಿಲೇಕಣಿ (ಎ20), ಸೋಮಶೇಖರ್ ನ್ಯಾಮಗೌಡ (ಎ21) ಸೇರಿದ್ದಾರೆ. ಈ ಪೈಕಿ ಕೆಲವರು ಮಾಫಿ ಸಾಕ್ಷಿಗಳಾಗಿ ಪರಿವರ್ತನೆಗೊಂಡಿದ್ದು, ಕೆಲವರಿಗೆ ಖುಲಾಸೆ ನೀಡಲಾಗಿದೆ.

ಒಟ್ಟು 21 ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಲಾಗಿದ್ದು, ನ್ಯಾಯಾಲಯದಲ್ಲಿ ದೀರ್ಘ ವಿಚಾರಣೆ ನಡೆಯಿತು. 100ಕ್ಕೂ ಹೆಚ್ಚು ಸಾಕ್ಷಿಗಳನ್ನು ವಿಚಾರಣೆ ನಡೆಸಲಾಗಿದ್ದು, ಅನೇಕ ದಾಖಲೆಗಳನ್ನು ಪರಿಶೀಲಿಸಲಾಯಿತು. ಕೆಲವರು ಮಾಫಿ ಸಾಕ್ಷಿಗಳಾಗಿ ಪರಿಣಮಿಸಿದರೆ, ಕೆಲವು ಆರೋಪಿಗಳು ಖುಲಾಸೆಯಾಗಿದ್ದಾರೆ. ಆದರೆ ಪ್ರಮುಖ ಆರೋಪಿಗಳ ವಿರುದ್ಧದ ಸಾಕ್ಷ್ಯಗಳು ದೃಢವಾಗಿರುವುದಾಗಿ ನ್ಯಾಯಾಲಯ ಕಂಡುಹಿಡಿದಿದೆ.

ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರ ನೇತೃತ್ವದಲ್ಲಿ ನಡೆದ ವಿಚಾರಣೆಯ ಅಂತ್ಯದಲ್ಲಿ 17 ಮಂದಿಯನ್ನು ಅಪರಾಧಿ ಗಳೆಂದು ಘೋಷಿಸಲಾಯಿತು. ನಂತರ ಶಿಕ್ಷೆಯ ಪ್ರಮಾಣ ಪ್ರಕಟಿಸುವ ವೇಳೆ ನ್ಯಾಯಾಲಯದಲ್ಲಿ ಭಾವುಕ ವಾತಾವರಣ ನಿರ್ಮಾಣವಾಯಿತು. ಜೀವಾವಧಿ ಶಿಕ್ಷೆ ಘೋಷಣೆ ಆಗುತ್ತಿದ್ದಂತೆ ವಿನಯ್ ಕುಲಕರ್ಣಿ ಸೇರಿದಂತೆ ಆರೋಪಿಗಳು ಕಣ್ಣೀರಿಟ್ಟರು. ನ್ಯಾಯಾಂಗದ ತೀರ್ಪು ಎದುರು ಅವರು ಮೌನವಾಗಿ ನಿಂತರು. ನಂತರ ಅವರನ್ನು ಬಿಗಿ ಪೊಲೀಸ್ ಭದ್ರತೆಯಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಯಿತು.


ನ್ಯಾಯಾಲಯವು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಶಿಕ್ಷೆ ವಿಧಿಸಿದೆ. ಸೆಕ್ಷನ್ 302 (ಕೊಲೆ), 120ಬಿ (ಪಿತೂರಿ), 147 ಮತ್ತು 148 (ಗಲಭೆ), 201 (ಸಾಕ್ಷ್ಯ ನಾಶ) ಸೇರಿದಂತೆ ಹಲವಾರು ಗಂಭೀರ ಆರೋಪಗಳು ಸಾಬೀತಾಗಿವೆ. ಇದರ ಆಧಾರದ ಮೇಲೆ 16

15

## ಶಾಸಕ ಸ್ಥಾನದಿಂದ ಅನರ್ಹತೆ ನಿಶ್ಚಿತ

ಯಾವುದೇ ವಿಧಾನಸಭಾ ಸದಸ್ಯರು ಎರಡು ವರ್ಷಕ್ಕಿಂತ ಹೆಚ್ಚು ಅವಧಿಯ ಜೈಲು ಶಿಕ್ಷೆಗೆ ಗುರಿಯಾದಲ್ಲಿ, ಕಾನೂನು ಪ್ರಕಾರ ಅವರ ಸದಸ್ಯತ್ವವು ತಕ್ಷಣವೇ ಅನರ್ಹವಾಗುತ್ತದೆ. ಈ ನಿಯಮವು ಜನಪ್ರತಿನಿಧಿ ಗಳ ಸ್ವಚ್ಛತೆ ಮತ್ತು ಸಾರ್ವಜನಿಕ ನಂಬಿಕೆಯನ್ನು ಕಾಪಾಡುವ ಉದ್ದೇಶದಿಂದ ಜಾರಿಗೆ ಬಂದಿದೆ. ಇದೀಗ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿರುವ ಹಿನ್ನೆಲೆ, ಅವರು ತಮ್ಮ ಶಾಸಕ ಸ್ಥಾನವನ್ನು ಕಳೆದುಕೊಳ್ಳುವುದು ಬಹುತೇಕ ನಿಶ್ಚಿತವಾಗಿದೆ. ನ್ಯಾಯಾಲಯದ ತೀರ್ಪಿನ ಪ್ರತಿ ವಿಧಾನಸಭಾ ಸ್ಪೀಕರ್ ಅವರಿಗೆ ಅಧಿಕೃತವಾಗಿ ತಲುಪಿದ ಕೂಡಲೇ, ಸ್ಪೀಕರ್ ಅವರು ಅನರ್ಹತಾ ಅಧಿಸೂಚನೆಯನ್ನು ಹೊರಡಿಸುವ ಪ್ರಕ್ರಿಯೆ ಆರಂಭಿಸಲಿದ್ದಾರೆ. ಸಂವಿಧಾನ ಮತ್ತು ಜನಪ್ರತಿನಿಧಿ ಗಳ ಕಾಯ್ದೆಯ ಪ್ರಕಾರ, ಇಂತಹ ಸಂದರ್ಭಗಳಲ್ಲಿ ಯಾವುದೇ ಹೆಚ್ಚುವರಿ ತೀರ್ಮಾನವಿಲ್ಲದೆ ಸದಸ್ಯತ್ವ ರದ್ದು ಆಗುವುದು ಸಾಮಾನ್ಯ ಪ್ರಕ್ರಿಯೆಯಾಗಿದೆ. ಇದರಿಂದ ಸಂಬಂಧಿತ ಕ್ಷೇತ್ರದಲ್ಲಿ ಉಪಚುನಾವಣೆಯ ಸಾಧ್ಯತೆಗಳೂ ಎದುರಾಗುತ್ತವೆ.


ಹಂತಕರಾದ ವಿಕ್ರಂ ಬಳ್ಳಾರಿ, ಸಂದೀಪ ಸವದತ್ತಿ, ವಿನಾಯಕ ಕಟಗಿ, ಮಹಾಬಳೇಶ್ವರ ಹೊಂಗಲ, ಸಂತೋಷ ಸವದತ್ತಿ, ದಿನೇಶ


ಹಂತಕರಾದ ಅಶ್ವತ್ಥ, ನಜೀರ್ ಅಹಮದ್, ಚಂದ್ರಶೇಖರ ಇಂಡಿ, ವಿಕಾಸ ಕಲ್ಬುರ್ಗಿ ಹಾಗೂ ಚನ್ನಕೇಶವ ಟಿಂಗರಿಕರ



## ವಿನಯ್ ಕುಲಕರ್ಣಿ ಪ್ರಕರಣಗಳ ಸಂಪೂರ್ಣ ಚಿತ್ರಣ

ವಿನಯ್ ಕುಲಕರ್ಣಿ ಅವರು ಧಾರವಾಡ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ನಾಯಕನಾಗಿ ಗುರುತಿಸಿಕೊಂಡಿದ್ದರೂ, ಕಳೆದ ಕೆಲವು ವರ್ಷಗಳಿಂದ ವಿವಿಧ ಕಾನೂನು ವಿವಾದಗಳು ಮತ್ತು ಆರೋಪಗಳಿಂದಾಗಿ ನಿರಂತರವಾಗಿ ಸುದ್ದಿಯಲ್ಲಿದ್ದಾರೆ. ವಿಶೇಷವಾಗಿ 2016ರಲ್ಲಿ ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದ ಯೋಗೇಶ್ ಗೌಡ ಅವರ ಹತ್ಯೆ ಪ್ರಕರಣವು ಅವರ ರಾಜಕೀಯ ಜೀವನದಲ್ಲಿ ದೊಡ್ಡ ತಿರುವು ತಂದ ಘಟನೆಯಾಗಿದೆ. ಈ ಪ್ರಕರಣದಲ್ಲಿ ಸಂಚು ರೂಪಿಸಿದ ಆರೋಪದಡಿ ವಿನಯ್ ಕುಲಕರ್ಣಿ ಹೆಸರು ಕೇಳಿಬಂದಿದ್ದು, ನಂತರ ಪ್ರಕರಣವನ್ನು ಕೇಂದ್ರ ತನಿಖಾ ದಳಕ್ಕೆ ವಹಿಸಲಾಯಿತು. ತನಿಖೆ ವೇಳೆ ಹಲವರನ್ನು ಬಂಧಿಸಿ ಚಾರ್ಜ್‌ಶೀಟ್ ಸಲ್ಲಿಸಲಾಗಿದ್ದು, ವಿನಯ್ ಕುಲಕರ್ಣಿಯನ್ನೂ ಬಂಧಿಸಿ ವಿಚಾರಣೆ ನಡೆಸಲಾಯಿತು. ನಂತರ ಅವರಿಗೆ ಜಾಮೀನು ದೊರೆತರೂ, ನ್ಯಾಯಾಲಯದ ಷರತ್ತುಗಳ ಪ್ರಕಾರ ತಮ್ಮ ಕ್ಷೇತ್ರದಿಂದ ದೂರವಿರುವಂತೆ ಸೂಚನೆ ನೀಡಲಾಗಿತ್ತು. ಈ ಪ್ರಕರಣದ ಸಂದರ್ಭದಲ್ಲಿ ಸಾಕ್ಷಿಗಳಿಗೆ ಬೆದರಿಕೆ ಹಾಕಲಾಗಿದೆ ಎಂಬ ಆರೋಪಗಳೂ ಕೇಳಿಬಂದಿದ್ದು, ಇದರಿಂದಾಗಿ ಅವರ ವಿರುದ್ಧ ಮತ್ತಷ್ಟು ಕಾನೂನು ಸಮಸ್ಯೆಗಳು ಎದುರಾದವು

ಈ ಘಟನೆ ರಾಜ್ಯ ರಾಜಕೀಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದ್ದು, ವಿರೋಧ ಪಕ್ಷಗಳು ಇದನ್ನು ಪ್ರಮುಖ ವಿಚಾರವಾಗಿ ಮುಂದಿಟ್ಟರೆ, ಬೆಂಬಲಿಗರು ಇದನ್ನು ರಾಜಕೀಯ ಪ್ರೇರಿತ ಪ್ರಕರಣವೆಂದು ವಾದಿಸಿದರು. ದೀರ್ಘಕಾಲದ ವಿಚಾರಣೆಯ ನಂತರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಪ್ರಕರಣದಲ್ಲಿ ತೀರ್ಪು ನೀಡಿದ್ದು, ಹಲವು ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆ. ಈ ತೀರ್ಪು ರಾಜ್ಯ ರಾಜಕೀಯದಲ್ಲಿ ಮಹತ್ವದ ಪರಿಣಾಮ ಬೀರಿದ್ದು, ವಿನಯ್ ಕುಲಕರ್ಣಿ ಅವರ ರಾಜಕೀಯ ಭವಿಷ್ಯದ ಮೇಲೂ ಪರಿಣಾಮ ಬೀರಿದೆ. ಒಟ್ಟಿನಲ್ಲಿ, ಯೋಗೇಶ್ ಗೌಡ ಹತ್ಯೆ ಪ್ರಕರಣ ಸೇರಿದಂತೆ ವಿವಿಧ ಕಾನೂನು ವಿವಾದಗಳು ಅವರ ಸಾರ್ವಜನಿಕ ಜೀವನದ ಪ್ರಮುಖ ಭಾಗವಾಗಿ ಉಳಿದಿದ್ದು, ರಾಜಕೀಯ ಮತ್ತು ನ್ಯಾಯಾಂಗದ ನಡುವಿನ ಸಂಕೀರ್ಣ ಸಂಬಂಧವನ್ನು ಪ್ರತಿಬಿಂಬಿಸುತ್ತವೆ.

## ಬೇರೆ ಬಟ್ಟೆ ಧರಿಸಲು ಅವಕಾಶಕ್ಕೆ ಮನವಿ

ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿದ ನಂತರ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರ ಮುಂದೆ ಅಪರಾಧಿಗಳ ಪರ ವಕೀಲರು ಮಹತ್ವದ ಮನವಿಯನ್ನು ಮುಂದಿಟ್ಟರು. ಕಳೆದ ಮೂರು ದಿನಗಳಿಂದ ಅಪರಾಧಿಗಳು ಒಂದೇ ಬಟ್ಟೆಯಲ್ಲಿ ಇದ್ದು, ಅವರಿಗೆ ಬೇರೆ ಬಟ್ಟೆ ಧರಿಸಲು ಅವಕಾಶ ಕಲ್ಪಿಸಬೇಕು ಎಂದು ವಕೀಲರು ನ್ಯಾಯಾಲಯವನ್ನು ಕೋರಿದರು. ಈ ಮನವಿಗೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಜೈಲು ನಿಯಮಾವಳಿಗಳ ಪ್ರಕಾರವೇ ಕ್ರಮ ಕೈಗೊಳ್ಳಬೇಕು ಎಂದು ಸ್ಪಷ್ಟವಾಗಿ ಸೂಚಿಸಿದರು. ಅಂದರೆ, ಜೈಲು ಮ್ಯಾನುವಲ್‌ನಲ್ಲಿ ಇರುವ ನಿಯಮಗಳ ಅನುಸಾರವಾಗಿ ಅಧಿಕಾರಿಗಳು ಅಗತ್ಯ ವ್ಯವಸ್ಥೆಗಳನ್ನು ಮಾಡುವಂತೆ ನಿರ್ದೇಶನ ನೀಡಲಾಗಿದೆ. ಇದರಿಂದ, ಅಪರಾಧಿಗಳಿಗೆ ವಿಶೇಷ ಸಡಿಲಿಕೆ ನೀಡದೇ, ಕಾನೂನು ಮತ್ತು ಜೈಲು ನಿಯಮಾವಳಿಗಳ ವ್ಯಾಪ್ತಿಯಲ್ಲಿಯೇ ಸೌಲಭ್ಯಗಳನ್ನು ಒದಗಿಸುವುದು ಎಂಬುದನ್ನು ನ್ಯಾಯಾಲಯ ಮತ್ತೊಮ್ಮೆ ದೃಢಪಡಿಸಿದೆ.

## ಎರಡು ಪ್ರಕರಣಗಳಲ್ಲಿ ಜೀವಾವಧಿ ಶಿಕ್ಷೆ

ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಇತ್ತೀಚಿನ ಅವಧಿಯಲ್ಲಿ ನೀಡಿರುವ ಎರಡನೇ ಮಹತ್ವದ ತೀರ್ಪು ಇದಾಗಿದೆ. ಕಾನೂನು ಮತ್ತು ನ್ಯಾಯ ವ್ಯವಸ್ಥೆಯ ದೃಷ್ಟಿಯಿಂದ ಈ ತೀರ್ಪುಗಳು ಸಾಕಷ್ಟು ಗಮನ ಸೆಳೆದಿವೆ. ಇದಕ್ಕೂ ಮುನ್ನ, ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜೀವಿತಾವಧಿ ಜೈಲು ಶಿಕ್ಷೆಯನ್ನು ವಿಧಿಸಿ ನ್ಯಾಯಾಧೀಶರು ಕಠಿಣ ಸಂದೇಶವನ್ನು ನೀಡಿದ್ದಾರೆ. ಆ ತೀರ್ಪು ರಾಜ್ಯದಾದ್ಯಂತ ಚರ್ಚೆಗೆ ಗ್ರಾಸವಾಗಿತ್ತು. ಇದೀಗ, ಮತ್ತೊಂದು ಗಂಭೀರವಾದ ಕೊಲೆ ಪ್ರಕರಣದಲ್ಲಿ ಹಾಲಿ ಶಾಸಕ ವಿನಯ್ ಕುಲಕರ್ಣಿ ಸೇರಿ ಒಟ್ಟು 16 ಮಂದಿ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸುವ ಮೂಲಕ, ಅಪರಾಧಗಳ ವಿರುದ್ಧ ಕಠಿಣ ನಿಲುವನ್ನು ನ್ಯಾಯಾಲಯ ಮತ್ತೊಮ್ಮೆ ವ್ಯಕ್ತಪಡಿಸಿದೆ. ಈ ಎರಡು ತೀರ್ಪುಗಳು ಕೂಡ ನ್ಯಾಯಾಂಗವು ಗಂಭೀರ ಅಪರಾಧಗಳ ಬಗ್ಗೆ ಶೂನ್ಯ ಸಹಿಷ್ಣುತೆ ತೋರಿಸುತ್ತಿದೆ ಎಂಬುದಕ್ಕೆ ಸ್ಪಷ್ಟ ಉದಾಹರಣೆಯಾಗಿ ಕಾಣುತ್ತಿವೆ.

# ಅನ್ಯಕೋಮಿನ ಯುವಕನನ್ನು ಪ್ರೀತಿಸುತ್ತಿದ್ದ ಯುವತಿ ಆತ್ಮಹತ್ಯೆ! ಲವ್ ಜಿಹಾದ್ ಆರೋಪ!

**ಬಾಗಲಕೋಟೆ**

✍ ಮಂಜುನಾಥ ಈ. ಕರೋಳಿ



ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಅಂತರ್ಧರ್ಮ ಪ್ರೇಮ ಪ್ರಕರಣಗಳು ಹೆಚ್ಚು ಚರ್ಚೆಗೆ ಗ್ರಾಸವಾಗುತ್ತಿರುವ ಸಂದರ್ಭದಲ್ಲಿ, ಬಾಗಲಕೋಟೆ ನಗರದಲ್ಲಿ ಸಂಭವಿಸಿದ ಯುವತಿಯ ಆತ್ಮಹತ್ಯೆ ಪ್ರಕರಣ ಮತ್ತೊಮ್ಮೆ ಸಮಾಜದಲ್ಲಿ ಸಂವೇದನಾಶೀಲ ವಾತಾವರಣವನ್ನು ಉಂಟುಮಾಡಿದೆ. ಕೊಪ್ಪಳ ಹಾಗೂ ಹುಬ್ಬಳ್ಳಿ ಭಾಗಗಳಲ್ಲಿ ಹಿಂದೂ ಮುಸ್ಲಿಂ ಯುವಕ ಯುವತಿಯರ ಪ್ರೇಮ ಸಂಬಂಧಗಳಿಗೆ ಸಂಬಂಧಿಸಿದಂತೆ ಹಲವು ಘಟನೆಗಳು ವರದಿಯಾಗುತ್ತಿದ್ದು, ಕೆಲವು ಸಂಘಟನೆಗಳು ಇದನ್ನು ‘ಲವ್ ಜಿಹಾದ್’ ಎಂದು ಕರೆಯುತ್ತಿರುವ ಹಿನ್ನೆಲೆ, ಇಂತಹ ಪ್ರಕರಣಗಳು ಹೆಚ್ಚು ರಾಜಕೀಯ ಹಾಗೂ ಸಾಮಾಜಿಕ ತೀವ್ರತೆ ಪಡೆದುಕೊಳ್ಳುತ್ತಿವೆ. ಈ ಮಧ್ಯೆ ಬಾಗಲಕೋಟೆಯಲ್ಲಿ ನಡೆದಿರುವ ಈ ದುರಂತ ಘಟನೆ ಸಾರ್ವಜನಿಕರ ಗಮನ ಸೆಳೆದಿದ್ದು, ಅನೇಕ ಅನುಮಾನಗಳು ಹಾಗೂ ಆರೋಪಪ್ರತ್ಯಾರೋಪಗಳಿಗೆ ಕಾರಣವಾಗಿದೆ.

ಬಾಗಲಕೋಟೆ ನಗರದ ಸೆಕ್ಟರ್ ನಂಬರ್ 48ರಲ್ಲಿ ವಾಸವಾಗಿದ್ದ ಭೂಮಿಕಾ ತಿಪ್ಪಣ್ಣವರ್ (19) ಎಂಬ ಯುವತಿ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಪ್ರಕರಣದ ಕೇಂದ್ರಬಿಂದುವಾಗಿದೆ. ಟೈರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಭೂಮಿಕಾ ಕಳೆದ ಎರಡು ವರ್ಷಗಳಿಂದ ಟಾಂಟಾಂ ವಾಹನ ಚಾಲಕನಾದ ಡೊಂಗ್ರಿಸಾಬ್ ನದಾಫ್ ಎಂಬ ಯುವಕನೊಂದಿಗೆ ಪ್ರೇಮ ಸಂಬಂಧ ಹೊಂದಿದ್ದಳು ಎಂದು ತಿಳಿದುಬಂದಿದೆ. ಪ್ರಾರಂಭದಲ್ಲಿ ಸಾಮಾನ್ಯ ಸ್ನೇಹವಾಗಿದ್ದ ಈ ಸಂಬಂಧ ನಂತರ ಪ್ರೀತಿಯಾಗಿ ಬೆಳೆದಿದ್ದು, ಇಬ್ಬರೂ ನಿರಂತರವಾಗಿ ಸಂಪರ್ಕದಲ್ಲಿದ್ದರು ಎನ್ನಲಾಗುತ್ತಿದೆ. ಆದರೆ, ಈ ಸಂಬಂಧದಲ್ಲಿ ನಂತರ ಏನೋ ಬದಲಾವಣೆ ಉಂಟಾಗಿ, ಅದು ಯುವತಿಯ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಏಪ್ರಿಲ್ 15ರಂದು ಆಕೆಯ ಆತ್ಮಹತ್ಯೆ ನಡೆದಿದ್ದು, ಘಟನೆ ಬೆಳಕಿಗೆ ಬಂದ ತಕ್ಷಣವೇ ಸ್ಥಳೀಯರಲ್ಲಿ ಆತಂಕ ಹಾಗೂ ಆಕ್ರೋಶ ಉಂಟಾಯಿತು.


ಎಸ್ಪಿ ಸಿದ್ದಾರ್ಥ್ ಗೋಯಲ್

ಯುವತಿಯ ಕುಟುಂಬಸ್ಥರು ಮತ್ತು ಸಂಬಂಧಿಕರು ಈ ಘಟನೆಗೆ ಡೊಂಗ್ರಿಸಾಬ್ ನದಾಫ್ನ ಕಿರುಕುಳವೇ ಕಾರಣ ಎಂದು ಗಂಭೀರ ಆರೋಪ ಮಾಡಿದ್ದಾರೆ. ಅವರ ಪ್ರಕಾರ, ಆತನಿಂದ ನಿರಂತರವಾಗಿ ಫೋನ್ ಕರೆಗಳು, ಸಂದೇಶಗಳು ಬರುತ್ತಿದ್ದವು. ಆಕೆಯನ್ನು ತನ್ನೊಂದಿಗೆ ಹೊರಗೆ ಬರಲು, ಓಡಾಡಲು ಒತ್ತಾಯಿಸುತ್ತಿದ್ದನು. ರಾತ್ರಿ ಹೊತ್ತು ಕೂಡ ಆಕೆಯನ್ನು ಕರೆ ಮಾಡಿ ಮಾತನಾಡಲು ಒತ್ತಾಯಿಸುತ್ತಿದ್ದನು. ಮದುವೆಯಾಗದಿದ್ದರೂ ತನ್ನೊಂದಿಗೆ ಇರುವಂತೆ ಒತ್ತಡ ಹೇರುತ್ತಿದ್ದನು ಎಂದು ಆರೋಪಿಸಲಾಗಿದೆ. ಈ ರೀತಿಯ ಮಾನಸಿಕ ಒತ್ತಡದಿಂದ ಬೇಸತ್ತ ಭೂಮಿಕಾ ಕೊನೆಗೆ ಆತ್ಮಹತ್ಯೆ ಮಾಡುವಂತಹ ಕಠಿಣ ನಿರ್ಧಾರಕ್ಕೆ ಬಂದಿದ್ದಾಳೆ ಎಂದು ಕುಟುಂಬಸ್ಥರು ಹೇಳಿಕೊಂಡಿದ್ದಾರೆ. ‘ನಮಗೆ ನ್ಯಾಯ ಬೇಕು, ನಮ್ಮ ಮಗಳಿಗೆ ಆಗಿರುವ ಅನ್ಯಾಯಕ್ಕೆ ಕಾರಣರಾದವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ಇನ್ನೊಂದೆಡೆ, ಈ ಪ್ರಕರಣವು ಕೇವಲ ವೈಯಕ್ತಿಕ ಸಂಬಂಧದ ಸಮಸ್ಯೆಯಷ್ಟೇ ಅಲ್ಲದೆ, ದೊಡ್ಡ ಮಟ್ಟದ ಸಾಮಾಜಿಕ ಮತ್ತು ಧಾರ್ಮಿಕ ವಿವಾದಕ್ಕೂ ಕಾರಣವಾಗಿದೆ. ಕೆಲವು ಹಿಂದೂಪರ ಸಂಘಟನೆಗಳು ಇದನ್ನು ‘ಲವ್ ಜಿಹಾದ್’ ಪ್ರಕರಣ ಎಂದು ಆರೋಪಿಸಿ ತೀವ್ರವಾಗಿ ಪ್ರತಿಕ್ರಿಯಿಸಿವೆ. ಅವರ ಪ್ರಕಾರ, ಯುವತಿಗೆ ಧರ್ಮಾಂತರಗೊಳ್ಳಲು ಒತ್ತಡ ಹಾಕಲಾಗಿತ್ತು, ಹಿಜಾಬ್ ಧರಿಸುವಂತೆ ಪ್ರೇರೇಪಿಸಲಾಗಿತ್ತು, ಹಾಗೂ ಆಕೆಯನ್ನು ನಿಯಂತ್ರಿಸಲು ಪ್ರಯತ್ನಿಸಲಾಗಿತ್ತು ಎಂಬ ಆರೋಪಗಳು ಕೇಳಿಬಂದಿವೆ. ಈ ಆರೋಪಗಳು ಪ್ರಕರಣವನ್ನು ಇನ್ನಷ್ಟು ಸಂಕೀರ್ಣಗೊಳಿಸಿದ್ದು, ಸ್ಥಳೀಯವಾಗಿ ಉದ್ವಿಗ್ನ ಪರಿಸ್ಥಿತಿಯನ್ನು ಉಂಟುಮಾಡಿವೆ. ಈ ಹಿನ್ನೆಲೆ ಸಂಘಟನೆಗಳು ಪ್ರತಿಭಟನೆಗಳ ಸೂಚನೆ ನೀಡಿರುವುದು ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಆತಂಕದ ವಿಷಯವಾಗಿದೆ.

ಘಟನೆ ತಿಳಿದ ತಕ್ಷಣವೇ ಜಿಲ್ಲಾ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಾಗಲಕೋಟೆ ನವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ. ಪೊಲೀಸ್ ಇಲಾಖೆ ಎಲ್ಲಾ ಆಯಾಮಗಳಿಂದ ವಿಚಾರಣೆ ನಡೆಸುತ್ತಿದ್ದು, ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಿದೆ. ಡೆತ್ ನೋಟ್ ಬರೆದಿರುವ ಬಗ್ಗೆ ಕೆಲವು ಮಾಹಿತಿ ಹರಿದಾಡುತ್ತಿದ್ದರೂ, ಅದರ ಬಗ್ಗೆ ಸ್ಪಷ್ಟ ಮಾಹಿತಿ ಇನ್ನೂ ಲಭ್ಯವಾಗಿಲ್ಲ. ಇದರಿಂದ ಪ್ರಕರಣದ ಬಗ್ಗೆ ಇನ್ನಷ್ಟು ಕುತೂಹಲ ಹಾಗೂ ಅನುಮಾನಗಳು ಮೂಡಿವೆ.



ಒಟ್ಟಿನಲ್ಲಿ, ಭೂಮಿಕಾ ಆತ್ಮಹತ್ಯೆ ಪ್ರಕರಣವು ಕೇವಲ ಒಂದು ಕುಟುಂಬದ ದುಃಖಕ್ಕೆ ಸೀಮಿತವಾಗದೇ, ಸಮಾಜದ ವಿವಿಧ ವಲಯಗಳಲ್ಲಿ ಚರ್ಚೆಗೆ ಕಾರಣವಾಗಿದೆ. ಪ್ರೇಮ, ಧರ್ಮ, ಸಾಮಾಜಿಕ ಒತ್ತಡ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳ ನಡುವಿನ ಸಂಕೀರ್ಣ ಸಂಬಂಧಗಳನ್ನು ಈ ಘಟನೆ ಮತ್ತೆ ಎತ್ತಿ ತೋರಿಸಿದೆ. ಸತ್ಯಾಂಶಗಳು ಸಂಪೂರ್ಣವಾಗಿ ಹೊರಬರುವವರೆಗೆ ಯಾವುದೇ ನಿರ್ಧಾರಕ್ಕೆ ಬರುವುದು ಸೂಕ್ತವಲ್ಲ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ. ಅಂತಿಮವಾಗಿ, ಪೊಲೀಸರು ನಡೆಸುತ್ತಿರುವ ತನಿಖೆಯ ಫಲಿತಾಂಶವೇ ಈ ಪ್ರಕರಣದ ನಿಜಸ್ವರೂಪವನ್ನು ಬಹಿರಂಗಪಡಿಸಲಿದೆ ಎಂಬ ನಿರೀಕ್ಷೆ ಎಲ್ಲರಲ್ಲೂ ಇದೆ.

# ಸ್ನೇಹಿತರ ಕೆಟ್ಟ ಸಹವಾಸ-ಶ್ರಮಜೀವಿ ಉಮೇಶ್ ದುರಂತ ಅಂತ್ಯ

ದೊಡ್ಡಬಳ್ಳಾಪುರ ತಾಲೂಕಿನ ಸಾಧುಮಠ ಗ್ರಾಮದಲ್ಲಿ ನಡೆದಿರುವ ಉಮೇಶ್ ಆತ್ಮಹತ್ಯೆ ಪ್ರಕರಣವು ಸಮಾಜಕ್ಕೆ ಎಚ್ಚರಿಕೆಯ ಘಂಟೆಯಾಗಿದೆ. ಶ್ರಮಪಟ್ಟು ಬದುಕು ಕಟ್ಟಿಕೊಂಡ ವ್ಯಕ್ತಿ, ದುಷ್ಪ್ರೇರಿತ ಸ್ನೇಹಿತರ ಸಹವಾಸದಿಂದ ಹೇಗೆ ದಾರಿ ತಪ್ಪಿ ಕೊನೆಗೆ ದುರಂತ ಅಂತ್ಯ ಕಂಡುಕೊಳ್ಳಬಹುದು ಎಂಬುದಕ್ಕೆ ಈ ಘಟನೆ ಸ್ಪಷ್ಟ ನಿದರ್ಶನವಾಗಿದೆ. ಉಮೇಶ್ (39) ಮೂಲತಃ ಬೆಂಗಳೂರಿನ ಉತ್ತನಹಳ್ಳಿ ಪ್ರದೇಶದ ನಿವಾಸಿಯಾಗಿದ್ದು, ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಸಾಧುಮಠ ಗ್ರಾಮದಲ್ಲಿ ವಾಸವಾಗಿದ್ದನು. ಪ್ರೀತಿಸಿ ಮದುವೆಯಾದ ಪತ್ನಿ ಹಾಗೂ ಇಬ್ಬರು ಮುದ್ದಾದ ಮಕ್ಕಳೊಂದಿಗೆ ಸುಖಕರ ಕುಟುಂಬ ಜೀವನ ನಡೆಸುತ್ತಿದ್ದ ಉಮೇಶ್, ಲಾರಿ ಚಾಲಕರಾಗಿ ತನ್ನ ಜೀವನ ಆರಂಭಿಸಿ ಶ್ರಮದ ಬೆನ್ನಿಗೆ ಯಶಸ್ಸನ್ನು ಕಂಡ ವ್ಯಕ್ತಿ. ದಿನರಾತ್ರಿ ದುಡಿದು ಮೂರು ಲಾರಿಗಳ ಮಾಲೀಕನಾಗುವ ಮಟ್ಟಕ್ಕೆ ಬೆಳೆದಿದ್ದ ಆತ, ಜಲ್ಲಿ ಮತ್ತು ಎಂಸ್ಯಾಂಡ್ ಸಾಗಣೆ ಮೂಲಕ ಉತ್ತಮ ಆದಾಯ ಗಳಿಸುತ್ತಿದ್ದ. ಗ್ರಾಮದಲ್ಲಿ ಮೃದುಸ್ವಭಾವಿ, ಪರಿಶ್ರಮಿ ಹಾಗೂ ಸಹಾಯ ಸಹಕಾರ ಮನೋಭಾವ ಹೊಂದಿದ ವ್ಯಕ್ತಿಯಾಗಿ ಹೆಸರು ಮಾಡಿದ್ದ ಉಮೇಶ್, ತನ್ನ ಕುಟುಂಬದ ಭವಿಷ್ಯಕ್ಕಾಗಿ ಶ್ರಮಿಸುತ್ತಿದ್ದನು.





ಆದರೆ, ಜೀವನದಲ್ಲಿ ಹಣದ ಜೊತೆಗೆ ಬಂದ ಸ್ನೇಹಿತರ ವಲಯವೇ ಅವನ ಬದುಕಿನ ದಿಕ್ಕನ್ನು ಬದಲಿಸಿತು. ಚಿಕ್ಕಬಳ್ಳಾಪುರ ತಾಲೂಕಿನ ಕಣಿವೆ ನಾರಾಯಣಪುರ ಹಾಗೂ ಹೊಸೂರು ಭಾಗದ ಕೆಲ ಸ್ನೇಹಿತರ ಸಹವಾಸದಿಂದ ಉಮೇಶ್ ಜೂಜಾಟದ ದುರ್ವ್ಯಾಸನಕ್ಕೆ ಒಳಗಾದನು. ಆರಂಭದಲ್ಲಿ ಸಮಯ ಕಳೆಯುವ ಉದ್ದೇಶದಿಂದ ಆರಂಭಿಸಿದ ಜೂಜಾಟ, ನಂತರ ಅವನ ಜೀವನದ ಅಂಗವಾಗಿಬಿಟ್ಟಿತು. ದಿನೇ ದಿನೇ ಜೂಜಿನಲ್ಲಿ ಹಣ ಹೂಡಿ ಸೋಲುತ್ತಾ ಬಂದ ಉಮೇಶ್, ಗಳಿಸಿದ ಸಂಪೂರ್ಣ ಹಣವನ್ನೇ ಕಳೆದುಕೊಂಡನು. ಆದಾಯಕ್ಕಿಂತ ಹೆಚ್ಚು ಖರ್ಚು ಹಾಗೂ ಸೋಲುಗಳು ಹೆಚ್ಚಾಗುತ್ತಿದ್ದಂತೆ, ಆತ ಸಾಲದ ಬಲೆಗೆ ಸಿಲುಕಿದನು. ಸ್ನೇಹಿತರ ಪ್ರೇರಣೆಯಿಂದ ಬಡ್ಡಿ ಹಾಗೂ ಚಕ್ರಬಡ್ಡಿಯಲ್ಲಿ ಸಾಲಗಳನ್ನು ತೆಗೆದುಕೊಳ್ಳುತ್ತಾ ಲಕ್ಷಾಂತರ ರೂಪಾಯಿ ಹೊರೆ ಹೊತ್ತನು. ಈ ನಡುವೆ ತನ್ನ ಪತ್ನಿಯ ಚಿನ್ನಾಭರಣವನ್ನೂ ಜೂಜಿನಲ್ಲಿ ಕಳೆದುಕೊಂಡಿದ್ದಾನೆ ಎನ್ನಲಾಗಿದೆ. ಪರಿಸ್ಥಿತಿ ಹದಗೆಟ್ಟಂತೆ ಸಾಲಗಾರರ ಒತ್ತಡ ದಿನೇ ದಿನೇ ಹೆಚ್ಚುತ್ತಾ ಬಂದಿದ್ದು, ಮಾನಸಿಕ ಒತ್ತಡ ಉಮೇಶ್‌ನ ಮೇಲೆ ಭಾರವಾಗಿ ಕುಳಿತುಕೊಂಡಿತ್ತು.

**ಚಿಕ್ಕಬಳ್ಳಾಪುರ**
✍ ಎನ್. ಬ್ರಹ್ಮಚಾರಿ

ಸಾಲ ತೀರಿಸಲು ಕೈಯಲ್ಲಿದ್ದ ಆಸ್ತಿಗಳನ್ನು ಮಾರಾಟ ಮಾಡುವ ಮಟ್ಟಕ್ಕೆ ಬಂದ ಉಮೇಶ್, ತನ್ನ ಲಾರಿಯೊಂದನ್ನು ಸುಮಾರು 15 ಲಕ್ಷ ರೂಪಾಯಿಗೆ ಮಾರಾಟ ಮಾಡಿದರೂ, ಆ ಹಣವನ್ನೂ ಜೂಜಿನಲ್ಲಿ ಕಳೆದುಕೊಂಡಿದ್ದಾನೆ ಎಂದು ತಿಳಿದುಬಂದಿದೆ. ಇದರಿಂದ ಸಾಲಗಾರರ ಕಾಟ ಮತ್ತಷ್ಟು ತೀವ್ರಗೊಂಡಿದ್ದು, ದಿನನಿತ್ಯದ ಕಿರುಕುಳ ಮತ್ತು ಮಾನಸಿಕ ಹಿಂಸೆ ಅವನ ಮನಸ್ಥಿತಿಯನ್ನು ಕುಗ್ಗಿಸಿತು. ಮೃದುಸ್ವಭಾವದ ವ್ಯಕ್ತಿಯಾಗಿದ್ದ ಉಮೇಶ್ ತನ್ನ ನೋವನ್ನು ಯಾರೊಂದಿಗೂ ಹಂಚಿಕೊಳ್ಳದೆ ಒಳಗೊಳಗೆ ಕೊಂಡುಕೊಂಡು ಹೋಗುತ್ತಿದ್ದನು. ಆದರೆ, ಕೊನೆಯ ದಿನಗಳಲ್ಲಿ ತನ್ನ ಮಗಳ ಮುಂದೆ ಮನಕಲಕುವ ಮಾತುಗಳನ್ನು ಹೇಳಿಕೊಂಡಿದ್ದಾನೆ ಎನ್ನಲಾಗಿದೆ. ತನ್ನ ಹೆಸರಿನಲ್ಲಿ 20 ಲಕ್ಷ ರೂಪಾಯಿ ವಿಮೆ ಇರುವುದಾಗಿ ತಿಳಿಸಿ, ತನ್ನ ಸಾವಿನ ನಂತರ ಸಾಲ ತೀರಿಸಿ ಉಳಿದ ಹಣದಲ್ಲಿ ಕುಟುಂಬವು ಸುಖವಾಗಿ ಬದುಕುವಂತೆ ಹೇಳಿದ್ದಾನೆ. ಜೊತೆಗೆ ತನ್ನ ಸಾವಿಗೆ ಕಾರಣರಾದ ಸ್ನೇಹಿತರ ವಿರುದ್ಧ ದೂರು ನೀಡುವಂತೆ ಸೂಚಿಸಿದ್ದರೂ, ಆ ಮಾತುಗಳನ್ನು ಕುಟುಂಬಸ್ಥರು ಅಷ್ಟಾಗಿ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ.

ಘಟನೆಯ ದಿನವೂ ಸಹ ಉಮೇಶ್ ಸಾಮಾನ್ಯವಾಗಿ ವರ್ತಿಸಿದ್ದನು. ತನ್ನ ಪತ್ನಿಯೊಂದಿಗೆ ಚಿಕ್ಕಬಳ್ಳಾಪುರಕ್ಕೆ ತೆರಳಿ ಮನೆಗೆ ಅಗತ್ಯವಾದ ಸಾಮಾನುಗಳನ್ನು ಖರೀದಿಸಿ, ಯಾವುದೇ ಅನುಮಾನ ಹುಟ್ಟದಂತೆ ಮನೆಗೆ ಮರಳಿದ್ದನು. ನಂತರ ಸ್ವಲ್ಪ ಹೊತ್ತಿನಲ್ಲಿ ಬಂದು ಬರುತ್ತೇನೆ ಎಂದು ಹೇಳಿ ಮನೆಯಿಂದ ಹೊರಟ ಆತ, ಮತ್ತೆ ಜೀವಂತವಾಗಿ ಮರಳಿ ಬರಲಿಲ್ಲ. ಗ್ರಾಮದ ಸಮೀಪದ ಬೃಹತ್ ಆಲದ ಮರದಲ್ಲಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಅವನ ಮೃತದೇಹ ಪತ್ತೆಯಾಗಿದ್ದು, ಈ ಘಟನೆ ಕುಟುಂಬಸ್ಥರು ಹಾಗೂ ಗ್ರಾಮಸ್ಥರನ್ನು ಬೆಚ್ಚಿಬೀಳುವಂತೆ ಮಾಡಿದೆ. ಶ್ರಮಪಟ್ಟು ಜೀವನ ಕಟ್ಟಿಕೊಂಡ ವ್ಯಕ್ತಿ ಇಂತಹ ದುರಂತ ಅಂತ್ಯ ಕಂಡಿರುವುದು ಗ್ರಾಮದಲ್ಲಿ ದುಃಖದ ವಾತಾವರಣವನ್ನು ಸೃಷ್ಟಿಸಿದೆ.





ಈ ಕುರಿತು ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಎಎಸ್ಐ ರಂಗಸ್ವಾಮಿ ಹಾಗೂ ಕಾನ್ಸ್ಟೇಬಲ್ ಗಣಪತಿ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಪ್ರಕರಣದ ತನಿಖೆ ಮುಂದುವರಿಸಿದ್ದಾರೆ. ಉಮೇಶ್ ಸಾವಿಗೆ ಕಾರಣವಾದ ಪರಿಸ್ಥಿತಿಗಳು, ಸ್ನೇಹಿತರ ಪಾತ್ರ, ಹಾಗೂ ಸಾಲದ ಒತ್ತಡದ ಕುರಿತು ಪೊಲೀಸರು ವಿವಿಧ ಕೋಣಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ಮೃತರು ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದು, ಕುಟುಂಬವು ಆರ್ಥಿಕ ಹಾಗೂ ಮಾನಸಿಕ ಸಂಕಷ್ಟಕ್ಕೆ ಸಿಲುಕಿದೆ.

ಇದೊಂದಲ್ಲದೆ, ಗ್ರಾಮಸ್ಥರು ಹಾಗೂ ಸಂಬಂಧಿಕರು ಈ ಘಟನೆಗೆ ತೀವ್ರ ವಿಷಾದ ವ್ಯಕ್ತಪಡಿಸಿದ್ದು, ಉಮೇಶ್‌ನ್ನು ತಪ್ಪು ದಾರಿಗೆಳೆದ ಸ್ನೇಹಿತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಇಂತಹ ದುರ್ಘಟನೆಗಳು ಮರುಕಳಿಸದಂತೆ ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂಬ ಮಾತುಗಳು ಕೇಳಿಬರುತ್ತಿವೆ.





ಒಟ್ಟಾರೆ, ಉಮೇಶ್ ಜೀವನವು ಸಮಾಜಕ್ಕೆ ಒಂದು ಗಾಢ ಸಂದೇಶವನ್ನು ನೀಡುತ್ತದೆ. ಶ್ರಮದಿಂದ ಗಳಿಸಿದ ಸಂಪತ್ತನ್ನು ಉಳಿಸಿಕೊಳ್ಳುವುದು ಎಷ್ಟು ಮುಖ್ಯವೋ, ತಪ್ಪು ಸಹವಾಸದಿಂದ ದೂರವಿರುವುದು ಅದಕ್ಕಿಂತಲೂ ಮುಖ್ಯ ಎಂಬುದನ್ನು ಈ ಘಟನೆ ಸಾರಿ ಹೇಳುತ್ತದೆ. ದುಷ್ಪ್ರೇರಿತ ಸ್ನೇಹಿತರ ಪ್ರಭಾವ, ಜೂಜಾಟದಂತಹ ದುರ್ವ್ಯಾಸನಗಳು ಮತ್ತು ನಿಯಂತ್ರಣವಿಲ್ಲದ ಖರ್ಚು ಎಲ್ಲವು ಸೇರಿ ವ್ಯಕ್ತಿಯ ಜೀವನವನ್ನು ಸಂಪೂರ್ಣವಾಗಿ ಹಾಳು ಮಾಡಬಹುದು. ಜೀವನದಲ್ಲಿ ತೃಪ್ತಿ, ಸಂಯಮ ಮತ್ತು ಜವಾಬ್ದಾರಿತನ ಅಗತ್ಯವಾಗಿದ್ದು, ಇಲ್ಲದಿದ್ದರೆ ಎಷ್ಟೇ ಯಶಸ್ಸು ಗಳಿಸಿದರೂ ಕ್ಷಣಾರ್ಧದಲ್ಲಿ ಕಳೆದುಕೊಳ್ಳಬಹುದು ಎಂಬುದು ಉಮೇಶ್ ದುರಂತ ಅಂತ್ಯದ ಮೂಲಕ ಮತ್ತೊಮ್ಮೆ ಸ್ಪಷ್ಟವಾಗಿದೆ. ☯

# ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ

9 ☞
ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದ್ದು, ಒಬ್ಬರಿಗೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಜೊತೆಗೆ ಲಕ್ಷಾಂತರ ರೂಪಾಯಿ ದಂಡ ವಿಧಿಸಲಾಗಿದ್ದು, ಈ ದಂಡದ ಒಂದು ಭಾಗವನ್ನು ಮೃತರ ಕುಟುಂಬಕ್ಕೆ ಪರಿಹಾರವಾಗಿ ನೀಡಲು ಆದೇಶಿಸಲಾಗಿದೆ.

ನ್ಯಾಯಾಲಯವು ವಿಶೇಷವಾಗಿ ಯೋಗೇಶ್ ಗೌಡ ಅವರ ಮಕ್ಕಳಿಗೆ 16 ಲಕ್ಷ ರೂಪಾಯಿ ಪರಿಹಾರ ನೀಡುವಂತೆ ಸೂಚಿಸಿದೆ. ಇದು ಕೇವಲ ಶಿಕ್ಷೆಯಲ್ಲ, ನ್ಯಾಯಾಂಗವು ಪೀಡಿತ ಕುಟುಂಬದ ಪರವೂ ನಿಂತಿದೆ ಎಂಬುದನ್ನು ತೋರಿಸುತ್ತದೆ. ಈ ಪರಿಹಾರವು ಕುಟುಂಬದ ಆರ್ಥಿಕ ನೆರವಿಗೆ ಸಹಾಯವಾಗಬಹುದು ಎಂಬ ನಿರೀಕ್ಷೆ ಇದೆ. ಪ್ರಕರಣದಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ ಸುಳ್ಳು ಸಾಕ್ಷ್ಯ. ಕೆಲ ಪೊಲೀಸ್ ಅಧಿಕಾರಿಗಳು ಮತ್ತು ಸ್ವತಂತ್ರ ಸಾಕ್ಷಿದಾರರು ನ್ಯಾಯಾಲಯದಲ್ಲಿ ತಪ್ಪು ಮಾಹಿತಿ ನೀಡಿದ ಆರೋಪ ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯವು ಅವರ ವಿರುದ್ಧ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದೆ. ಇದು ನ್ಯಾಯಾಂಗವು ಕೇವಲ ಅಪರಾಧಿಗಳಿಗೆ ಶಿಕ್ಷೆ ನೀಡುವುದಲ್ಲ, ನ್ಯಾಯ ಪ್ರಕ್ರಿಯೆಯ ಶುದ್ಧತೆಯನ್ನು ಕಾಪಾಡಲು ಬದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ.

ಈ ತೀರ್ಪಿನ ನಂತರ ಅಪರಾಧಿಗಳಿಗೆ ಮೇಲ್ಮನವಿ ಸಲ್ಲಿಸುವ ಅವಕಾಶವಿದೆ. ಅವರು ಹೈಕೋರ್ಟ್‌ನಲ್ಲಿ ಶಿಕ್ಷೆಯನ್ನು ಪ್ರಶ್ನಿಸಬಹುದು. ಶಿಕ್ಷೆ ಅಮಾನತು, ಜಾಮೀನು ಮುಂತಾದ ವಿಚಾರಗಳು ಹೈಕೋರ್ಟ್ ವಿವೇಚನೆಗೆ ಒಳಪಟ್ಟಿವೆ. ಹೀಗಾಗಿ ಕಾನೂನು ಹೋರಾಟ ಇನ್ನೂ ಮುಗಿದಿಲ್ಲ ಎಂಬುದನ್ನು ಗಮನಿಸಬೇಕು.

ಜೀವಾವಧಿ ಶಿಕ್ಷೆಯ ಅರ್ಥ ಮತ್ತು ಅದರ ಅನುಷ್ಠಾನವೂ ಇಲ್ಲಿ ಚರ್ಚೆಗೆ ಬರುತ್ತದೆ. ಕಾನೂನು ಪ್ರಕಾರ ಜೀವಾವಧಿ ಶಿಕ್ಷೆ ಎಂದರೆ ಜೀವಿತಾವಧಿಯವರೆಗೆ ಜೈಲು ಶಿಕ್ಷೆ ಅನುಭವಿಸುವುದು. ಆದರೆ ಕೆಲವು ಸಂದರ್ಭಗಳಲ್ಲಿ 14 ವರ್ಷಗಳ ನಂತರ ಸನ್ನಡತೆ ಆಧಾರದ ಮೇಲೆ ಬಿಡುಗಡೆ ಸಾಧ್ಯತೆ ಇರುತ್ತದೆ. ಇದು ಸರ್ಕಾರದ ನಿರ್ಧಾರಕ್ಕೆ ಒಳಪಟ್ಟಿದೆ. ಒಟ್ಟಾರೆ, ಯೋಗೇಶ್ ಗೌಡ ಕೊಲೆ ಪ್ರಕರಣವು ನಮ್ಮ ಸಮಾಜಕ್ಕೆ ಹಲವು ಪಾಠಗಳನ್ನು ನೀಡುತ್ತದೆ. ರಾಜಕೀಯ ಪ್ರಭಾವ, ಅಪರಾಧ ಮತ್ತು ನ್ಯಾಯಾಂಗದ ನಡುವಿನ ಸಂಬಂಧವನ್ನು ಇದು ಸ್ಪಷ್ಟಪಡಿಸಿದೆ. ದಶಕದ ನಂತರ ಬಂದ ಈ ತೀರ್ಪು 'ನ್ಯಾಯ ತಡವಾದರೂ ತಪ್ಪದು' ಎಂಬ ನಂಬಿಕೆಯನ್ನು ಮತ್ತೊಮ್ಮೆ ದೃಢಪಡಿಸಿದೆ. ಇದೇ ವೇಳೆ, ಅಪರಾಧದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಅಗತ್ಯವನ್ನೂ ಒತ್ತಿ ಹೇಳಿದೆ. ಈ ಪ್ರಕರಣವು ಮುಂದಿನ ದಿನಗಳಲ್ಲಿ ಕಾನೂನು ಅಧ್ಯಯನಕ್ಕೂ, ರಾಜಕೀಯ ಚರ್ಚೆಗಳಿಗೂ ಪ್ರಮುಖ ಉದಾಹರಣೆಯಾಗಲಿದೆ. ನ್ಯಾಯಾಲಯದ ಈ ತೀರ್ಪು ರಾಜ್ಯದ ನ್ಯಾಯಾಂಗ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿ ಉಳಿಯಲಿದೆ. ☯

### ಚಿಕ್ಕೋಡಿ ಪಿಎಸ್ಐ ಬಸಗೌಡ ನೇರ್ಲಿ ಮತ್ತು ತಂಡದ ಮಿಂಚಿನ ಕಾರ್ಯಾಚರಣೆ

# ವಿವಿಧ ಕಂಪನಿಗಳ 13 ಮೋಟಾರ್ ಬೈಕ್‌ಗಳನ್ನು ಕಳ್ಳತನ ಮಾಡಿದ್ದ ಖತರ್‌ನಾಕ್ ಕಳ್ಳರಿಬ್ಬರ ಬಂಧನ

**ದಿಢೀರನೇ ಶ್ರೀಮಂತರಾಗಬೇಕೆಂಬ ಕನಸನ್ನು ಕಂಡಿದ್ದ ಐನಾತಿಗಳಿಬ್ಬರು ತಮ್ಮ ಐಷಾರಾಮಿ ಜೀವನಕ್ಕೆ ಹಣ ಹೊಂದಿಸಲು ಜನನಿಬಿಡ ಸ್ಥಳಗಳಲ್ಲಿ ಹ್ಯಾಂಡಲ್ ಲಾಕ್ ಮಾಡದೇ ನಿಲ್ಲಿಸಿ ಹೋಗಿದ್ದ ಮೋಟಾರ್ ಬೈಕ್‌ಗಳನ್ನು ಗುರಿಯಾಗಿರಿಸಿಕೊಂಡು ಅತ್ಯಂತ ಚಾಣಾಕ್ಷತನದಿಂದ ಕ್ಷಣ ಮಾತ್ರದಲ್ಲಿ ಕದ್ದುಕೊಂಡು ಪರಾರಿ ಆಗುತ್ತಿದ್ದರು. ಮೋಟಾರ್‌ಬೈಕ್ ಕಳ್ಳತನದ ಬೆನ್ನುಬಿದ್ದು ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ದಕ್ಷ ಮತ್ತು ಧಾಡಸಿ ಪಿಎಸ್ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳು ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದರು. ಎಸ್ಪಿ ಕೆ. ರಾಮರಾಜನ್, ಹೆಚ್ಚುವರಿ ಎಸ್ಪಿ ಆರ್.ಬಿ. ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಡೈನಾಮಿಕ್ ಸಿಪಿಐ ವಿಶ್ವನಾಥ ಚೌಗುಲಾ ನಿರ್ದೇಶನದಲ್ಲಿ ಖಚಿತ ಮಾಹಿತಿ ಆಧರಿಸಿ ಖತರ್‌ನಾಕ್ ಕಳ್ಳರಿಬ್ಬರನ್ನು ವಶಕ್ಕೆ ತೆಗೆದುಕೊಂಡು ಅವರ ತಾಬಾದಲ್ಲಿದ್ದ 13 ವಿವಿಧ ಕಂಪನಿಗಳ ಮೋಟಾರ್ ಬೈಕ್‌ಗಳನ್ನು ಜಪ್ತಿ ಮಾಡಿಕೊಂಡಿದ್ದು ಇವುಗಳ ಮೌಲ್ಯ 7.42 ಲಕ್ಷ ರೂ.ಗಳಾಗಿದ್ದು, ಇದೀಗ ಕಳ್ಳರಿಬ್ಬರನ್ನು ಜೈಲಿಗಟ್ಟಿರುವ ಪ್ರಕರಣ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**



ಬೈಕ್ ಕಳ್ಳರಾದ ಅಸ್ಲಂ ಅಬ್ಬಾಸ್ ಮುಲ್ತಾನಿ, ಅಬೂಬಕರ್ ಬಾದಶಹಾ ಮುಲ್ತಾನಿ

**ಬೆಳಗಾವಿ**
✍ ಮನ್ನಾಪೂರ

ಎಲ್ಲರಂತೆ ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ಐನಾತಿ ಸಂಬಂಧಿಕರಿಬ್ಬರು ತಮ್ಮ ದುಷ್ಟ ಬುದ್ಧಿ ಉಪಯೋಗಿಸಿ ತಕ್ಷಣ ಶ್ರೀಮಂತರಾಗಲು ಮತ್ತು ಮೋಜು, ಮಜಾ ಚೈನಿ ಜೀವನ ನಡೆಸಲು ಕಂಡ ಕಂಡವರ ಮೋಟಾರ್ ಬೈಕ್‌ಗಳನ್ನು ಸದ್ದಿಲ್ಲದೇ ಎಗರಿಸಿಕೊಂಡು ಪರಾರಿ ಆಗುತ್ತಿದ್ದರು. ಹೀಗೆ ಕದ್ದ ಮೋಟಾರ್ ಬೈಕ್‌ಗಳನ್ನು ಮಾರಾಟ ಮಾಡಿ ಹಣ ಗಳಿಸಲು ದುಷ್ಟ ಯೋಜನೆ ಹಾಕಿಕೊಂಡು ಅವಕಾಶಕ್ಕಾಗಿ ಕಾಯುತ್ತಿರುವಾಗಲೇ ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ಚತುರ ಮತ್ತು ಧಾಡಸಿತನದ ಕಾರ್ಯಾಚರಣೆಗೆ ಹೆಸರಾದ ಪಿಎಸ್ಐ ಬಸಗೌಡ ನೇರ್ಲಿ ಮತ್ತವರ ತಂಡದವರ ಕೈಗೆ ಸಿಕ್ಕು ಜೈಲು ಸೇರಿ ಕಂಬಿಯ ಹಿಂದೆ ತಂಗಳು ಮುರಿಯುತ್ತಿದ್ದಾರೆ.


ಎಸ್ಪಿ ಕೆ. ರಾಮರಾಜನ್


ಹೆಚ್ಚುವರಿ ಎಸ್ಪಿ ಆರ್.ಬಿ. ಬಸರಗಿ


ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ

**ಇದ್ದಕ್ಕಿದ್ದಂತೆ ಮೋಟಾರ್ ಬೈಕ್ ಮಾಯ...**

ಇತ್ತೀಚಿಗೆ ಚಿಕ್ಕೋಡಿ ಪಟ್ಟಣ ಬೆಳೆದು ನಿಂತಿದೆ. ತಾಲ್ಲೂಕಿನ ಹಾಗೂ ಸುತ್ತಲಿನ ನೆರೆಯ ತಾಲ್ಲೂಕಿನ ಹಳ್ಳಿಗಳ ಜನರ ಜೀವನಾಡಿಯಾಗಿರುವ ಚಿಕ್ಕೋಡಿ ಪಟ್ಟಣದಲ್ಲಿ ಮೇಲಾಧಿಕಾರಿಗಳ ನಿರ್ದೇಶನದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಕಾಪಾಡಿಕೊಂಡು ಯಾವುದೇ ಅಹಿತಕರ ಘಟನೆ ನಡೆಯದಂತೆ ಪಿಎಸ್ಐ ಬಸಗೌಡ ನೇರ್ಲಿ ಮತ್ತು ಸಿಪಿಐ ವಿಶ್ವನಾಥ ಚೌಗುಲಾ ಹಾಗೂ ಸಿಬ್ಬಂದಿಗಳು ಹಗಲಿರುಳು ಶ್ರಮ ಪಡುತ್ತಿದ್ದಾರೆ.

ಇಂತಹುದರಲ್ಲಿ ದಿನಾಂಕ 28-11-2025ರಂದು ಚಿಕ್ಕೋಡಿ ತಾಲ್ಲೂಕಿನ ನನದಿವಾಡಿ ಗ್ರಾಮದ ಬಾಳಗೊಂಡ ಮಲ್ಲಪ್ಪ ಖೋತ ಇವರು ಚಿಕ್ಕೋಡಿ ಪಟ್ಟಣದ ಡಾ. ಭಾತೆ ಆಸ್ಪತ್ರೆಗೆ ತೋರಿಸಲು ಬಂದು ಆಸ್ಪತ್ರೆಯ ಮುಂದೆ ರಸ್ತೆಯ ಬದಿಗೆ ತಮ್ಮ ಮೋಟಾರ್ ಸೈಕಲ್ ಸ್ಪೆಂಡ್ಲರ್ ಪ್ಲಸ್ ಕೆಎ-23 ಇಟಿ-7848 ನೇದ್ದನ್ನು ಮಧ್ಯಾಹ್ನ 1-15 ಗಂಟೆಗೆ ನಿಲ್ಲಿಸಿದ್ದರು. ಅವರು ವಾಪಸ್ 1-30 ಗಂಟೆಗೆ ಬರುವಷ್ಟರಲ್ಲಿ ಮೋಟಾರ್ ಬೈಕ್ ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದರು. ಸುಮಾರು 55 ಸಾವಿರ ಮೌಲ್ಯದ ಮೋಟಾರ್ ಬೈಕ್ ಕಳೆದುಕೊಂಡು ಕಂಗಾಲಾಗಿದ್ದ ಬಾಳಗೊಂಡ ಅವರು ಎಲ್ಲ ಕಡೆಗೆ ತಮ್ಮ ಮೋಟಾರ್ ಬೈಕ್ ಹುಡುಕಿದ್ದರು. ಎಲ್ಲೂ ಸಿಗದಾದಾಗ ದಿ. 13-12-2025ರಂದು ಚಿಕ್ಕೋಡಿ ಪೊಲೀಸ್ ಠಾಣೆಗೆ ಹಾಜರಾಗಿ ಕರ್ತವ್ಯದ ಮೇಲಿದ್ದ ಪಿಎಸ್ಐ ಬಸಗೌಡ ನೇರ್ಲಿ ಅವರನ್ನು ಕಂಡು ತನ್ನ ಮೋಟಾರ್ ಸೈಕಲ್ ಕಳುವಾದ ಕುರಿತು ವಿವರಿಸಿದನು.


ತಕ್ಷಣ ಜಾಗ್ರತರಾದ ಪಿಎಸ್ಐ ಬಸಗೌಡ ನೇರ್ಲಿ ಅವರು ಚಿಕ್ಕೋಡಿ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಸಿಪಿಐ ವಿಶ್ವನಾಥ ಚೌಗುಲಾ ಅವರೊಂದಿಗೆ ವಿಷಯ ಸಮಾಲೋಚಿಸಿ ಅವರ ನಿರ್ದೇಶನದಂತೆ ಪ್ರಕರಣವನ್ನು ದಾಖಲಿಸಿಕೊಂಡರು.

**ಸವಾಲಾಗಿ ಸ್ವೀಕರಿಸಿದರು...**

ಪಿಎಸ್ಐ ಬಸಗೌಡ ನೇರ್ಲಿ ಈ ಹಿಂದೆ ಭಾರತೀಯ ಸೈನ್ಯದಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಅನೇಕ ಜಠಿಲ ಕಾರ್ಯಾಚರಣೆಗಳಲ್ಲಿ ಭಾಗಿಯಾದ ಅನುಭವವಿದೆ. ಪಿಎಸ್ಐ ಆದ ನಂತರ ಕೂಡಾ ಅನೇಕ ಜಠಿಲ ಹಾಗೂ ನಿಗೂಢ ಪ್ರಕರಣ ಭೇದಿಸಿ ಹಿರಿಯ ಅಧಿಕಾರಿಗಳಿಂದ ಮೆಚ್ಚುಗೆ ಪಡೆದಿರುವ ಬಸಗೌಡ ನೇರ್ಲಿ ಇಲ್ಲೂ ಮೋಟಾರ್ ಬೈಕ್ ಕಳ್ಳತನವನ್ನು ಸವಾಲಾಗಿ ಸ್ವೀಕರಿಸಿದರು. ಎಸ್ಪಿ ಕೆ. ರಾಮರಾಜನ್, ಹೆಚ್ಚುವರಿ ಎಸ್ಪಿ ಆರ್.ಬಿ. ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಸಿಪಿಐ ವಿಶ್ವನಾಥ ಚೌಗುಲಾ ಇವರ ನಿರ್ದೇಶನದಲ್ಲಿ ಅಪರಾಧ ಪರಿಶೋಧನೆಯಲ್ಲಿ ಪರಿಣಿತರಿರುವ ಸಿಬ್ಬಂದಿಗಳನ್ನು ಸೇರಿಸಿಕೊಂಡು ಒಂದು ವಿಶೇಷ ತನಿಖಾ ತಂಡವನ್ನು ರಚಿಸಲು ಬಸಗೌಡ ನೇರ್ಲಿ ಮುಂದಾದರು. ಈ ನಿಟ್ಟಿನಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ನಿರ್ದೇಶನಗಳನ್ನು ಪಡೆದುಕೊಂಡರು.

**ವಿಶೇಷ ತನಿಖಾ ತಂಡ ರಚನೆ...**

ಸಿಪಿಐ ಚೌಗುಲಾ ಅವರು ಪಿಎಸ್ಐ ಬಸಗೌಡ ನೇರ್ಲಿ ನೇತೃತ್ವದಲ್ಲಿ ಧಾಡಸಿ ಮತ್ತು ಚತುರ ಸಿಬ್ಬಂದಿಗಳಾದ ಎಸ್.ಆರ್. ಬಾಗಾಯಿ, ಗಜಾನನ ಎಸ್. ಕಾಂಬಳೆ, ಸಿದ್ದು ಗಲಗಲಿ, ರಾಮು ಕುಳ್ಳೋಳಿ, ವಿಜಯಕುಮಾರ ಪಾಟೀಲ ಮತ್ತು ಬೆಳಗಾವಿಯ ಎಸ್.ಪಿ. ಕಚೇರಿಯ ತಾಂತ್ರಿಕ ವಿಭಾಗದ ವಿನೋದ ಠಕ್ಕನ್ನವರ ಇವರನ್ನು ಒಳಗೊಂಡಂತೆ ಒಂದು ವಿಶೇಷ ತಂಡವನ್ನು ರಚಿಸಿ ಸೂಕ್ತ ನಿರ್ದೇಶನಗಳನ್ನು ನೀಡಿ 'ಗೋ ಅಹೆಡ್' ಎಂದು ಹುರಿದುಂಬಿಸಿದ್ದರು. ಮೋಟಾರ್ ಬೈಕ್ ಕಳ್ಳರ ಹೆಡೆಮುರಿಕಟ್ಟಲು ತನಿಖಾ ತಂಡ ನೇರವಾಗಿ ರಂಗಕ್ಕಿಳಿಯಿತು.


ಸಿಪಿಐ ವಿಶ್ವನಾಥ ಚೌಗಲಾ


ಪಿಎಸ್ಐ ಬಸಗೌಡ ನೇರ್ಲಿ

ಅಂದುಕೊಂಡ ಹಾಗೇ ವಿಶೇಷ ತನಿಖಾ ತಂಡ ಕೆಲವೇ ದಿನಗಳಲ್ಲಿ ಮೋಟಾರ್ ಬೈಕ್ ಕಳ್ಳರ ಸಂಪೂರ್ಣ ಕುಂಡಲಿಯನ್ನು ಅಂಗೈಯಲ್ಲಿರಿಸಿಕೊಂಡಿದ್ದರು. ಚಿಕ್ಕೋಡಿ ಪೊಲೀಸ್ ಠಾಣೆಯ ವ್ಯಾಪ್ತಿಯ ಪ್ರತಿಯೊಂದು ಹಳ್ಳಿ ಹಳ್ಳಿಗಳಲ್ಲಿ ಪಿಎಸ್ಐ ಬಸಗೌಡ ನೇರ್ಲಿ ಅವರ ನೆಟ್‌ವರ್ಕ್ ಪವರ್ ಫುಲ್ ಆಗಿದೆ. ಪ್ರತಿ ಊರಿನಲ್ಲಿ ಒಂದಿಬ್ಬರು ವಿಶ್ವಾಸಾರ್ಹ ಇನ್ ಫಾರ್ಮರ್‌ಗಳು ಇದ್ದುಕೊಂಡು ಅಗತ್ಯ ಮಾಹಿತಿ ಪೂರೈಸುತ್ತಾರೆ. ಇದು ಪಿಎಸ್ಐ ಬಸಗೌಡರ ಸ್ಪೆಶಾಲಿಟಿ. ಅದಾಗಲೇ ಡಾ. ಭಾತೆ ಆಸ್ಪತ್ರೆಯ ಮುಂದೆ ಕಳುವಾಗಿದ್ದ ಬೈಕ್‌ನ ಕಳ್ಳರ ಚಹರೆಯನ್ನು ವಿಶೇಷ ತನಿಖಾ ತಂಡ ವಿಶೇಷವಾಗಿ ಗಮನಿಸಿತ್ತು. ಖತರ್‌ನಾಕ್ ಬೈಕ್ ಕಳ್ಳರನ್ನು ರೆಡ್ ಹ್ಯಾಂಡ್ ಆಗಿ ಹಿಡಿಯಲು ಶತಾಯ-ಗತಾಯ ಪ್ರಯತ್ನ ನಡೆಸಿದ್ದರು.

**ಸಿಕ್ಕಿಬಿದ್ದ ಖತರ್‌ನಾಕ್ ಕಳ್ಳರು...**

ಇತ್ತೀಚಿಗೆ ತಮಗಿರುವ ಖಚಿತ ಮಾಹಿತಿಯನ್ನು ಪಿಎಸ್ಐ ಬಸಗೌಡರು ವಿಶೇಷ ತನಿಖಾ ತಂಡಕ್ಕೆ ತಿಳಿಸಿದರು. ಅದರಂತೆ ಖದೀಮರು ಬರುವ ದಾರಿಯಲ್ಲಿ ಸರ್ಪಗಾವಲು ಹಾಕಿ ಕಾಯತೊಡಗಿದ್ದರು. ರಾತ್ರಿ ಸುಮಾರು 7.30ರ ಸಮಯ. ಆಯಕಟ್ಟಿನ ಸ್ಥಳದಲ್ಲಿ 30ರ ಆಸುಪಾಸಿನ ಯುವಕರಿಬ್ಬರು ಮೋಟಾರ್ ಬೈಕ್‌ಗಳ ಮೇಲೆ ಬರುತ್ತಿದ್ದರು. ಅವರನ್ನು ನಿಲ್ಲಿಸಿ ವಿಚಾರಣೆ ಮಾಡಲಾಗಿ ಅವರು ಸಮರ್ಪಕ ಉತ್ತರ ನೀಡಲಿಲ್ಲ. ವಿಶೇಷ ತನಿಖಾ ತಂಡದ ಸಂದೇಹ ಬಲವಾಗಿ ಬೈಕ್‌ಗಳ ದಾಖಲಾತಿಗಳನ್ನು ಕೇಳಿದಾಗ ಅವರಿಬ್ಬರ ಮುಖ ಬಿಳುಚಿಕೊಂಡು ಸಣ್ಣಗೆ ನಡುಗತೊಡಗಿದ್ದರು. ನೇರವಾಗಿ ಅವರನ್ನು ಠಾಣೆಗೆ ಕರೆತಂದಾಗ ಒಂದಕ್ಷರ ಬಿಡದೇ ತಾವು ಕಳ್ಳತನ ಮಾಡಿದ್ದ 13 ಬೈಕ್‌ಗಳ ಸಂಪೂರ್ಣ ಹರಿಕಥೆ ಹೇಳಿದ್ದರು.

**ಸಿಕ್ಕುಬಿದ್ದ ಕಳ್ಳರು 'ಸಂಬಂಧಿಕರು'...**

ಸಿಪಿಐ ಚೌಗುಲಾ, ಪಿಎಸ್ಐ ಬಸಗೌಡ ನೇರ್ಲಿ ಕಳ್ಳರಿಬ್ಬರ ಪೂರ್ವಾಪರ ವಿಚಾರಣೆ ಮಾಡಲಾಗಿ ಇದರಲ್ಲಿ ಎ1 ಅಸ್ಲಂ ಅಬ್ಬಾಸ ಮುಲ್ತಾನಿ (32 ವ) ಸಾ। ಕೌಜಲಗಿ ತಾ। ಮೂಡಲಗಿ, ಈತನಿಗೆ ಹೆಂಡತಿ, ಎರಡು ಮಕ್ಕಳಿದ್ದು ಈತ ಚಿಕ್ಕೋಡಿ ತಾಲ್ಲೂಕಿನ ನಾಗರ ಮುನ್ನೋಳಿಯಲ್ಲಿ ಶಬ್ಬೀರ ಗೌಂಡಿ ಹೊಲದ ಹತ್ತಿರ ಬೇರೊಬ್ಬರ ಹೊಲದಲ್ಲಿ ದುಡಿಯಲು ಬಂದು ಇಲ್ಲೇ ಉಳಿದುಕೊಂಡಿದ್ದನು.

☞ 14


ಕುಖ್ಯಾತ ಮೋಟಾರ್ ಬೈಕ್ ಕಳ್ಳರಿಂದ ವಶಪಡಿಸಿಕೊಂಡ 13 ಬೈಕ್‌ಗಳೊಂದಿಗೆ ಚಿಕ್ಕೋಡಿ ಪೊಲೀಸ್ ಠಾಣೆ ಸಿಬ್ಬಂದಿಗಳು


ಎಸ್ಪಿ ಕೆ. ರಾಮರಾಜನ್, ಡಿವೈಎಸ್ಪಿ ಗೌಡರ್, ಸಿಪಿಐ ಚೌಗುಲಾ, ಪಿಎಸ್ಐ ನೇರ್ಲಿ ಮತ್ತು ಸಿಬ್ಬಂದಿಗಳು

# ಸೌಜನ್ಯ ಫೈಲ್ಸ್



28

ನಿರೂಪಣೆ :

**ಮೋಹನ್ ಬೋಳಂಗಡಿ**

# ಡಾಕ್ಟರ್ ರೂಪಾಲಿ ಸಾಕ್ಷ್ಯ ಪರಿಗಣನೆಗೆ ಬರಲೇ ಇಲ್ಲ!!

ಸೌಜನ್ಯ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿದ್ದದ್ದು ಸಿಬಿಐನ ಫಾರೆನ್ಸಿಕ್ ವಿಶ್ಲೇಷಕಿ ಡಾ. ರೂಪಾಲಿ. ದೆಹಲಿಯ ಸಿಬಿಐ ಕೇಂದ್ರ ಕಚೇರಿಯಲ್ಲಿ ಫಾರೆನ್ಸಿಕ್ ವಿಶ್ಲೇಷಕಿ ಆಗಿದ್ದ ಡಾ. ರೂಪಾಲಿ ಅವರು ಮಂಗಳೂರು ಸಬ್‌ಜೈಲಿನಲ್ಲಿ ವಿಚಾರಣಾಧೀನ ಖೈದಿಯಾಗಿದ್ದ ಸೌಜನ್ಯ ಪ್ರಕರಣದ ಆರೋಪಿ ಸಂತೋಷ್‌ರಾವ್‌ನನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದ್ದರು. ಅವರು 2015 ಮಾರ್ಚ್ 31ರಂದು ನ್ಯಾಯಾಲಯದ ಅನುಮತಿ ಪಡೆದು ಮಂಗಳೂರು ಸಬ್‌ಜೈಲಿನಲ್ಲಿ ಸಂತೋಷ್‌ರಾವ್‌ನನ್ನು ವಿಚಾರಣೆಗೆ ಗುರಿಪಡಿಸಿದ್ದರು. ಈ ಸಂದರ್ಭದಲ್ಲಿ ತನ್ನದೇ ಆದ ರೀತಿಯಲ್ಲಿ ಸಂತೋಷ್‌ರಾವ್‌ನನ್ನು ವಿಚಾರಣೆ ನಡೆಸಿದ್ದರು.

ಸಂತೋಷ್‌ರಾವ್‌ನಲ್ಲಿ ಅವರು ಕೇಳಿದ ಪ್ರಶ್ನೆಗಳಿಗೆ ಆತ ಸರಿಯಾದ ರೀತಿಯಲ್ಲಿಯೇ ಉತ್ತರ ನೀಡಿದ್ದ. ಆತನ ಹಿನ್ನೆಲೆಯನ್ನು ಕೇಳಿದಾಗ ಸಮರ್ಪಕವಾಗಿ ಉತ್ತರಿಸಿದ್ದ. ಕೌಟುಂಬಿಕ ಹಿನ್ನೆಲೆಯನ್ನು ಕೆದಕಿದ್ದರು. ಎಲ್ಲಿಯೂ ಸಂಶಯಕ್ಕೆ ಆಸ್ಪದ ಇಲ್ಲದಂತೆ ಉತ್ತರಿಸಿದ್ದ. ಸೌಜನ್ಯ ಹತ್ಯೆಯಾದ ಸ್ಥಳದ ಬಗ್ಗೆ ವಿಚಾರಿಸಿದ್ದರು. ಅಲ್ಲಿ ಇರಬಹುದಾಗಿದ್ದ ಸಿಸಿಟಿವಿ ಬಗ್ಗೆಯೂ ಪ್ರಶ್ನೆ ಕೇಳಿದ್ದರು. ಅದಕ್ಕೆ ಆತ ಉತ್ತರಿಸಿದ ರೀತಿಯೇ ಆತನೇ ಆ ಕೃತ್ಯ ಎಸಗಿರಬಹುದು ಎನ್ನುವಂತಹ ಸಂಶಯ ಬಂದಿತ್ತು ಮತ್ತು ದೃಢಪಟ್ಟಿತ್ತು. ಕೃತ್ಯ ನಡೆದ ಸ್ಥಳ ತಿರುವಿನಿಂದ ಕೂಡಿದ್ದು, ದೂರದಿಂದ ಯಾರೂ ಗಮನಿಸಲು ಸಾಧ್ಯವಿಲ್ಲ ಎಂದು ಉತ್ತರಿಸಿದ್ದ. ಸೌಜನ್ಯ ಮೃತದೇಹ ಪತ್ತೆಯಾದ ಸ್ಥಳ ರಸ್ತೆಯಿಂದ ಸುಮಾರು 30 ಅಡಿಗಳಷ್ಟು



ದೂರ ಇತ್ತು. ಮತ್ತು ಗಿಡಗಂಟಿಗಳಿಂದ ಕೂಡಿದ ಸ್ಥಳವಾಗಿದ್ದರಿಂದ ರಸ್ತೆಯಲ್ಲಿ ಓಡಾಡುವವರ ಗಮನಕ್ಕೆ ಬರಲು ಸಾಧ್ಯವಿರಲಿಲ್ಲ ಎಂಬ ಉತ್ತರ ಸಂತೋಷ್ ರಾವ್‌ನಿಂದ ಬಂದಿತ್ತು.

ಸೌಜನ್ಯಳನ್ನು ರಸ್ತೆ ಬದಿಯಿಂದ ಎತ್ತಿಕೊಂಡು ಹೋಗಿ ನೀರು ಹರಿಯುವ ತೋಡನ್ನು ದಾಟಿ ಮೇಲಿನ ಭಾಗದಲ್ಲಿ ಅಂಗಾತ ಮಲಗಿಸಿ ಆಕೆಯ ಐಡೆಂಟಿಟಿ ಕಾರ್ಡ್‌ನ ಟ್ಯಾಗ್‌ನಿಂದ ಬಿಗಿದು ಹತ್ಯೆ ಮಾಡಲಾಗಿತ್ತು. ಈ ಅಂಶವನ್ನು ಸಂತೋಷ್‌ರಾವ್‌ನಲ್ಲಿ ಪ್ರಶ್ನಿಸಿದ ಸಂದರ್ಭದಲ್ಲಿ ಆತ ವಿಚಲಿತನಾಗಿದ್ದ ಮತ್ತು ಸಮರ್ಪಕ ಉತ್ತರ ನೀಡಿರಲಿಲ್ಲ. ಆದರೆ ನೀರು ಹರಿಯುತ್ತಿರುವ ತೋಡಿನಲ್ಲಿ ಮೊಣಗಂಟಿನ ತನಕ ನೀರು ಇತ್ತು ಎಂಬುದನ್ನು ಒಪ್ಪಿಕೊಂಡಿದ್ದ. ಈ ವಿಚಾರದಲ್ಲಿ ವೈಜ್ಞಾನಿಕ ವಿಶ್ಲೇಷಣೆ ನಡೆಸಿದ್ದ ಡಾ. ರೂಪಾಲಿ ಅವರು ಅತ್ಯಾಚಾರ ಮಾಡಿದ ಕೃತ್ಯವನ್ನು ಒಪ್ಪಿಕೊಳ್ಳದ ಸಂತೋಷ್‌ರಾವ್ ತೋಡಿನಲ್ಲಿದ್ದ ನೀರಿನ ಹರಿವನ್ನು ಒಪ್ಪಿಕೊಂಡಿದ್ದ. ಆದ್ದರಿಂದ ಆ ಕೃತ್ಯವನ್ನು ಅವನಲ್ಲದೇ ಬೇರೆ ಯಾರೂ ಮಾಡಲು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದರು. ಸುಮಾರು 2 ಗಂಟೆಗಳ ಕಾಲ ಸಂತೋಷ್‌ರಾವ್‌ನೊಂದಿಗೆ ಆತ್ಮೀಯತೆಯಿಂದ ಮಾತನಾಡಿದ್ದ ಡಾ. ರೂಪಾಲಿಯವರು ತನ್ನ ವರದಿಯನ್ನು ಸಿಬಿಐ ಅಧಿಕಾರಿಗಳಿಗೆ ನೀಡಿದ್ದರು. ಈ ವರದಿಯನ್ನು ಉಲ್ಲೇಖಿಸಿಯೇ ಸಿಬಿಐ ಅಧಿಕಾರಿಗಳು ಸಂತೋಷ್‌ರಾವ್ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಬೆಂಗಳೂರಿನ ಸಿಬಿಐ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ದಾಖಲಿಸಿದ ಡಾ. ರೂಪಾಲಿಯವರು ತಾನು ಸಿಬಿಐ ತನಿಖಾಧಿಕಾರಿಗಳಿಗೆ ಕೊಟ್ಟಿದ್ದಂತಹ ಹೇಳಿಕೆಗೆ ಪೂರಕವಾಗಿಯೇ ಪ್ರಾಸಿಕ್ಯೂಷನ್ ಪರ ವಕೀಲರ ಪ್ರಶ್ನೆಗಳಿಗೆ ಉತ್ತರಿಸಿದ್ದರು. ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿದ್ದ ಡಾ. ರೂಪಾಲಿಯವರು ಸೌಜನ್ಯ ಪ್ರಕರಣದಲ್ಲಿ ಸಂತೋಷ್ ರಾವ್‌ನನ್ನು ಹೊರತು ಪಡಿಸಿ ಇತರ ಆರೋಪಿಗಳು ಇರಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.



ಸಂತೋಷ್ ರಾವ್

ಈ ಪ್ರಕರಣದ ವಿಚಾರಣೆ ನಡೆಸಿದ್ದ ಸಿಬಿಐ ನ್ಯಾಯಾಲಯವು ಅಭಿಯೋಜನೆಗೆ ಪೂರಕವಾಗುವಂತಹ ಹಲವಾರು ಅಂಶಗಳನ್ನು ಕೈ ಬಿಟ್ಟು ಆರೋಪಿ ಪರ ವಕೀಲರು ಎತ್ತಿದ್ದಂತಹ ಕೆಲವೊಂದು ಸಂಶಯಗಳನ್ನು ಬೆಟ್ಟು ಮಾಡಿ ಅಂತಿಮ ತೀರ್ಪನ್ನು ನೀಡಿರುವುದು ಪ್ರಕರಣದ ವಿಚಾರಣಾ ವರದಿಯನ್ನು ಅವಲೋಕಿಸಿದ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ.

ಸೌಜನ್ಯ ಪ್ರಕರಣವನ್ನು ಹಾದಿ ತಪ್ಪಿಸಲು ಆರಂಭದಿಂದಲೇ ಪ್ರಯತ್ನ ನಡೆದಿತ್ತು. ಕೇವಲ ಒಬ್ಬನಿಂದಲೇ ಈ ಕೃತ್ಯ ನಡೆದಿದೆ ಎಂದು ಬೆಳ್ತಂಗಡಿ ಪೊಲೀಸರು ನಡೆಸಿದಂತಹ ಆರಂಭಿಕ ತನಿಖೆಯಲ್ಲಿ ಕಂಡುಕೊಂಡಿದ್ದರು. ಸಂತೋಷ್‌ರಾವ್ ಕೂಡಾ ಪೊಲೀಸ್ ವಿಚಾರಣೆಯಲ್ಲಿ ಅದನ್ನು ಒಪ್ಪಿಕೊಂಡಿದ್ದ. ಆತನನ್ನು ದೈಹಿಕವಾಗಿ ಪರೀಕ್ಷೆಗೆ ಒಳಪಡಿಸಿದ್ದಂತಹ ಕೆ.ಎಸ್.ಹೆಗ್ಡೆ ಆಸ್ಪತ್ರೆಯ ಫಾರೆನ್ಸಿಕ್ ಸ್ಪೆಷಲಿಸ್ಟ್ ಡಾ. ಮಹಾಬಲೇಶ್ ಶೆಟ್ಟಿಯವರು ಆತನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪರೀಕ್ಷೆಗೆ ಒಳಪಡಿಸಿದ್ದರು. ಆ ಸಂದರ್ಭದಲ್ಲಿ ಆತ ಮಾಡಿದ ಕೃತ್ಯವನ್ನು ಒಪ್ಪಿಕೊಂಡಿದ್ದ ಮಾತ್ರವಲ್ಲದೇ ಯಾವ ರೀತಿಯಲ್ಲಿ ಕೃತ್ಯ ನಡೆಸಿದೆ ಮತ್ತು ಸೌಜನ್ಯಳಿಂದ ಯಾವ ರೀತಿಯಲ್ಲಿ ಪ್ರತಿರೋಧ ವ್ಯಕ್ತವಾಗಿತ್ತು. ದೈಹಿಕ ಸಂಪರ್ಕ ಸಾಧ್ಯವಾಗದ ಹಿನ್ನೆಲೆಯಲ್ಲಿ ಆಕೆಯ ಗುಪ್ತಾಂಗಕ್ಕೆ ಅಲ್ಲಿನ ಮಣ್ಣನ್ನು ತೆಗೆದು ತುಂಬಿಸಿದ್ದೆ ಎನ್ನುವಂತಹ ಅಂಶಗಳನ್ನು ಸಹ ಒಪ್ಪಿಕೊಂಡಿದ್ದ. ಆದರೆ ವೈದ್ಯರ ಎದುರು ಒಪ್ಪಿಕೊಂಡಂತಹ ಅಂಶಗಳನ್ನು ನ್ಯಾಯಾಲಯ ಒಪ್ಪಲು ಸಾಧ್ಯವಿಲ್ಲದ ಕಾರಣಕ್ಕಾಗಿ ಆ ಸಾಕ್ಷ್ಯ ಪರಿಗಣನೆಗೆ ಬರಲಿಲ್ಲ. ಅಲ್ಲದೇ ಡಾ. ಮಹಾಬಲೇಶ್ ಶೆಟ್ಟಿಯವರನ್ನು ಪ್ರಾಸಿಕ್ಯೂಷನ್ ಪರ ವಕೀಲರು ಸಮಗ್ರವಾಗಿ ವಿಚಾರಣೆಗೆ ಗುರಿಪಡಿಸಿರಲಿಲ್ಲ. ಸಾಕ್ಷಿದಾರರು ಸ್ವಯಂಪ್ರೇರಿತವಾಗಿ ಹೇಳಿಕೆ ಕೊಡಲು ಸಾಧ್ಯವಿದ್ದರೂ ಸಹ ಪ್ರಾಸಿಕ್ಯೂಷನ್ ಪರ ವಕೀಲರು ಅದಕ್ಕೆ ಅವಕಾಶ ನೀಡದೆ ಇದ್ದದ್ದು ಮತ್ತು ಅದನ್ನು ನ್ಯಾಯಾಧೀಶರು ಗಮನಿಸದೆ ಇರುವುದು ಈ ಪ್ರಕರಣದಲ್ಲಿ ಆ ಸಾಕ್ಷಿ ಪ್ರಮುಖವಾಗಲೇ ಇಲ್ಲ.



ಕುಸುಮಾವತಿ

ಸೌಜನ್ಯ ಪ್ರಕರಣದ ತೀರ್ಪಿನಲ್ಲಿ ಬಹುಮುಖ್ಯವಾಗಿ ನ್ಯಾಯಾಧೀಶರು ವ್ಯಕ್ತಪಡಿಸಿದ ಅಂಶ ಎಂದರೆ ಆರೋಪಿ ಸಂತೋಷ್‌ರಾವ್ ನಿಗದಿತ ದಿನಾಂಕದಂದು ಅಂದರೆ 9-10-2012ರಂದು ಸಂಜೆ ವೇಳೆಗೆ ಮಣ್ಣಸಂಕದ ಬಳಿ ಇದ್ದ ಎನ್ನುವುದನ್ನು ಸಂಶಯಾತೀತವಾಗಿ ಸಾಬೀತು ಪಡಿಸಲು ಪ್ರಾಸಿಕ್ಯೂಷನ್ ಸಾಧ್ಯವಾಗಿಲ್ಲ. ಅದು ಸತ್ಯವೂ ಹೌದು. ಅದಕ್ಕೆ ಕಾರಣವೂ ಇದೆ.

ಸೌಜನ್ಯ ಅತ್ಯಾಚಾರ ಮತ್ತು ಕೊಲೆ ನಡೆದುದನ್ನು ನೋಡಿದಂತಹ ಪ್ರತ್ಯಕ್ಷ ಸಾಕ್ಷಿಗಳಿಲ್ಲ. ಸೌಜನ್ಯ ನಾಪತ್ತೆಯಾಗುವುದಕ್ಕಿಂತ ಮೊದಲು ಅಂದರೆ ಆಕೆ ನೇತ್ರಾವತಿ ಸ್ನಾನಘಟ್ಟದ ಬಳಿ ಬಸ್ಸಿನಿಂದ ಇಳಿದು ನಡೆದುಕೊಂಡು ಬರುವಾಗ ಪ್ರಕೃತಿ ಚಿಕಿತ್ಸಾ ಕೇಂದ್ರದ ಕಾವಲುಗಾರ ನೋಡಿದ್ದಾರೆ. ತದನಂತರ ಆಕೆಯನ್ನು ನೋಡಿದವರು ಶ್ರೀಕ್ಷೇತ್ರ ಧರ್ಮಸ್ಥಳದ ಅನ್ನ ಛತ್ರದಲ್ಲಿ ಉದ್ಯೋಗಿಯಾಗಿದ್ದ ಹರೀಶ್ ಮಡಿವಾಳ. ತನ್ನ ಮಗುವಿಗೆ ಅನಾರೋಗ್ಯದ ಮಾಹಿತಿ ತಿಳಿದು ಹರೀಶ್ ಮಡಿವಾಳ ಬೈಕಿನಲ್ಲಿ ಉಜಿರೆಯತ್ತ ಬರುತ್ತಿದ್ದಾಗ ಮಣ್ಣಸಂಕದ ಬಳಿ ಸಂತೋಷ್‌ರಾವ್ ಮತ್ತು ಸೌಜನ್ಯ ಸುಮಾರು 2 ಅಡಿಗಳಷ್ಟು ದೂರ ನಿಂತುಕೊಂಡು ಮಾತನಾಡುತ್ತಿದ್ದರು. ಬೈಕ್ ಬರುವುದನ್ನು ನೋಡಿದ್ದ ಸಂತೋಷ್‌ರಾವ್ ಮರದ ಬದಿಗೆ ಸರಿದಿದ್ದ. ಈ ಸಂದರ್ಭದಲ್ಲಿ ಹರೀಶ್ ಮಡಿವಾಳ ಬೈಕ್ ನಿಲ್ಲಿಸಿ ಪರಿಚಯವಿದ್ದ ಸೌಜನ್ಯಳೊಂದಿಗೆ ಮಾತನಾಡಿದ್ದ. ಈ ಸಂದರ್ಭದಲ್ಲಿ ಸೌಜನ್ಯ ಸಂತೋಷ್ ರಾವ್‌ನನ್ನು ತೋರಿಸಿ ಅವರು ವಿಳಾಸ ವಿಚಾರಿಸಿದ್ದರು ಎಂದು ಹೇಳಿದ್ದಳು. ಹರೀಶ್ ಮಡಿವಾಳ ಸಂತೋಷ್ ರಾವ್‌ನನ್ನು ಸರಿಯಾಗಿಯೇ ಗಮನಿಸಿದ್ದರು. ಆದರೆ ಈ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಬಹುಮುಖ್ಯ ಸಾಕ್ಷಿಯಾಗಬೇಕಾಗಿದ್ದ ಹರೀಶ್ ಮಡಿವಾಳ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದ್ದರಿಂದ ಅವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಸಾಧ್ಯವಾಗಿರಲಿಲ್ಲ. ಆದರೆ ಸಂತೋಷ್ ರಾವ್ ಮಣ್ಣಸಂಕದ ಬಳಿ ಇದ್ದ ಎನ್ನುವುದಕ್ಕೆ ಇನ್ನೊಬ್ಬ ಸಾಕ್ಷಿಯೂ ಇದ್ದರು. ಅವರು ರಿಕ್ಷಾದಲ್ಲಿ ಹೋಗುತ್ತಿದ್ದಾಗ ಸಂತೋಷ್‌ರಾವ್ ರಸ್ತೆ ಬದಿಯ ಮರದ ಬುಡದಲ್ಲಿ ನಿಂತುಕೊಂಡಿದ್ದ. ಆ ಸಂದರ್ಭದಲ್ಲಿ ಸೌಜನ್ಯ ದೂರದಿಂದ ಬರುತ್ತಿದ್ದಳು. ಅವರು ಈ ಪ್ರಕರಣದಲ್ಲಿ ಸಾಕ್ಷಿಯಾಗಿದ್ದರು. ಅವರನ್ನು ಪೊಲೀಸರು ಮತ್ತು ಸಿಓಡಿ ಅಧಿಕಾರಿಗಳು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದ್ದರು. ಆದರೆ ಅವರನ್ನು ನ್ಯಾಯಾಲಯದಲ್ಲಿ ವಿಚಾರಣೆ ಆರಂಭವಾದ ಸಂದರ್ಭದಲ್ಲಿ ಸಾಕ್ಷಿದಾರರ ಪಟ್ಟಿಯಿಂದ ಕೈ ಬಿಡಲಾಗಿತ್ತು. ಅವರಿಗೆ ನ್ಯಾಯಾಲಯದಿಂದ ಸಾಕ್ಷಿ ಹೇಳಲು ಸಮನ್ಸ್ ಬಂದಿರಲಿಲ್ಲ. ಈ ಕಾರಣದಿಂದ ಸಂತೋಷ್‌ರಾವ್ ಘಟನಾ ದಿನದಂದು ಆ ಸ್ಥಳದಲ್ಲಿ ಇದ್ದ ಎನ್ನುವಂತಹ ಸಾಕ್ಷ್ಯ ದಾಖಲಾಗಲಿಲ್ಲ. ಇದನ್ನು ತೀರ್ಪಿನಲ್ಲಿ ಪ್ರಸ್ತಾಪಿಸಿದ್ದ ನ್ಯಾಯಾಧೀಶರು ಸಂತೋಷ್‌ರಾವ್ ಮಣ್ಣಸಂಕದಲ್ಲಿ ಇದ್ದ ಎನ್ನುವಂಹ ಅಂಶವನ್ನು ಸಾಬೀತು ಪಡಿಸಲು ಪ್ರಾಸಿಕ್ಯೂಷನ್‌ಗೆ ಸಾಧ್ಯವಾಗಲಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದರು.

ಸಾಕ್ಷಿ ವಿಚಾರಣೆಯ ಸಂದರ್ಭದಲ್ಲಿ ಹಲವಾರು ವೈರುಧ್ಯಗಳು ಬಂದಿತ್ತು. ಸಾಕ್ಷಿದಾರರು ತಾವು ತನಿಖೆಯ ಸಂದರ್ಭದಲ್ಲಿ ನೀಡಿದ್ದ ಹೇಳಿಕೆಯನ್ನು ನ್ಯಾಯಾಲಯದಲ್ಲಿ ವಿಚಾರಣೆಯ ಸಂದರ್ಭದಲ್ಲಿ ಪುಷ್ಠಿಕರಿಸಲಿಲ್ಲ. ಬದಲಾಗಿ ಪ್ರಾಸಿಕ್ಯೂಷನ್ ವಕೀಲರೇ ಆರೋಪ ಪಟ್ಟಿಯಲ್ಲಿ ಇಲ್ಲದಂತಹ ಅಂಶಗಳನ್ನು ಎತ್ತಿ ಸಾಕ್ಷಿದಾರರ ಮೂಲಕ ನ್ಯಾಯಾಲಯಕ್ಕೆ ಗೊಂದಲ ಸೃಷ್ಟಿಸುವ ಕೆಲಸವನ್ನು ಮಾಡಿದ್ದರಿಂದ ನ್ಯಾಯಾಲಯವು ಆರೋಪಿ ಸಂತೋಷ್ ರಾವ್‌ನನ್ನು ದೋಷಮುಕ್ತಗೊಳಿಸಿತ್ತು.

ವಿಚಾರಣಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸಿಬಿಐ ಹೈಕೋರ್ಟ್‌ನ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು. ಆ ಸಂದರ್ಭದಲ್ಲಿ ಸಿಬಿಐನ ಪ್ರಾಸಿಕ್ಯೂಟರ್ ಪ್ರಸನ್ನಕುಮಾರ್ ಅವರು ವೈದ್ಯಕೀಯ ಸಾಕ್ಷ್ಯಗಳ ಆಧಾರದ ಮೇಲೆ ವಾದ ಮಂಡಿಸಿದ್ದರು. ಆದರೆ ಹೈಕೋರ್ಟ್‌ನ ವಿಭಾಗೀಯ ಪೀಠ ಕೆಳಹಂತದ ವಿಚಾರಣಾ ನ್ಯಾಯಾಲಯದ ತೀರ್ಪನ್ನೇ ಎತ್ತಿ ಹಿಡಿದಿತ್ತು. ಇದೀಗ ಸೌಜನ್ಯ ತಾಯಿ ಕುಸುಮಾವತಿ ಯವರು ತನ್ನ ಮಗಳ ಕೊಲೆ ಪ್ರಕರಣದ ಮರು ತನಿಖೆ ನಡೆಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನ ಕದ ತಟ್ಟಿದ್ದಾರೆ. ಪರಿಣಾಮ ಕಾದು ನೋಡಬೇಕಿದೆ...

**ಮುಗಿಯಿತು....**



# ಸೋತಲ್ಲೇ ಗೆಲ್ಲಲು ದಳಪತಿಗಳ ಶಪಥ!



**ಹಳೇ ಮೈಸೂರು ರಾಜಕೀಯದ ಹೃದಯಭಾಗದಲ್ಲಿ ಒಮ್ಮೆ ಅಪ್ರತಿಹತ ಶಕ್ತಿಯಾಗಿ ಮೆರೆದಿದ್ದ ಜೆಡಿಎಸ್ ಇಂದು ತನ್ನ ಅಸ್ತಿತ್ವವನ್ನು ಮರುಸ್ಥಾಪಿಸಿಕೊಳ್ಳುವ ತಿರುವುಮುಖದಲ್ಲಿ ನಿಂತಿದೆ. ನಿರಂತರ ಸೋಲುಗಳು, ಮತಬ್ಯಾಂಕ್ ಕುಗ್ಗುವಿಕೆ ಮತ್ತು ನಾಯಕತ್ವದ ಸವಾಲುಗಳ ನಡುವೆ, ದಳಪತಿಗಳು ಈಗ ಆತ್ಮಪರಿಶೀಲನೆಗೆ ಮುಂದಾಗಿ 'ಸೋತಲ್ಲೇ ಗೆಲ್ಲಬೇಕು' ಎಂಬ ಸಂಕಲ್ಪದೊಂದಿಗೆ ಹೊಸ ಹೋರಾಟ ಆರಂಭಿಸಿದ್ದಾರೆ. ಗ್ರಾಮೀಣ ನೆಲೆಯಿಂದಲೇ ಪುನರ್‌ಸಂಘಟನೆಗೆ ಕೈಹಾಕಿರುವ ಈ ಪ್ರಯತ್ನ, ಮುಂದಿನ ದಿನಗಳಲ್ಲಿ ರಾಜ್ಯ ರಾಜಕೀಯದ ಸಮೀಕರಣಗಳನ್ನು ಬದಲಾಯಿಸುವ ಸಾಧ್ಯತೆಯ ಸಂಕೇತವಾಗಿ ಕಾಣುತ್ತಿದೆ.**

✍ಬಿ.ಎಂ. ಲವಕುಮಾರ್

ಹಳೇ ಮೈಸೂರು ಭಾಗದಲ್ಲಿ ತನ್ನದೆ ಆದ ಪ್ರಾಬಲ್ಯ ಹೊಂದಿದ್ದ ಜೆಡಿಎಸ್ ಕಳೆದೊಂದು ದಶಕದಲ್ಲಿ ಹಲವು ಕಾರಣಗಳಿಂದಾಗಿ ಮಂಕಾಗಿದೆ. ಜೆಡಿಎಸ್ ಸ್ಥಾನಗಳನ್ನು ಕಾಂಗ್ರೆಸ್ ಅಕ್ರಮಿಸಿಕೊಂಡಿದೆ. ಇದಕ್ಕೆ ಕಾರಣಗಳು ಅನೇಕ ಇವೆಯಾದರೂ ಎಡವಿದ್ದೆಲ್ಲಿ ಎಂಬುದನ್ನು ಮನನ ಮಾಡಿಕೊಂಡಿರುವ ದಳಪತಿಗಳು ಇತ್ತೀಚೆಗಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಿಂದಲೇ ಪಕ್ಷವನ್ನು ಸಂಘಟಿಸಿ ಸೋತಲ್ಲೇ ಗೆಲ್ಲುವ ಶಪಥ ಮಾಡಿದ್ದಾರೆ.

ಕಾಂಗ್ರೆಸ್ಸಿಗರು ಜೆಡಿಎಸ್ ಮೇಲೆ ಹಲವು ರೀತಿಯ ಟೀಕೆ ಮತ್ತು ಅಪಪ್ರಚಾರಗಳನ್ನು ಮಾಡುತ್ತಾ ಬಂದರೂ ಅದೆಲ್ಲವನ್ನು ಬದಿಗೆ ತಳ್ಳಿ ಮತ್ತೆ ಪಕ್ಷವನ್ನು ಮೇಲೆತ್ತುವ ಕಾರ್ಯಕ್ಕೆ ಚಾಲನೆ ಕೊಡಲಾಗಿದೆ. ಲೋಕಸಭಾ ಚುನಾವಣೆ ಬಳಿಕ ಎನ್‌ಡಿಎ ಒಕ್ಕೂಟದೊಂದಿಗೆ ಸಾಗುತ್ತಿರುವ ಜೆಡಿಎಸ್ ಪಕ್ಷವನ್ನು ಬಿಜೆಪಿಯೊಂದಿಗೆ ವಿಲೀನ ಮಾಡಿಕೊಳ್ಳುತ್ತಾರೆ ಎಂಬ ಸುಳ್ಳು ವದಂತಿಯನ್ನು ಅವರ ವಿರೋಧಿ ಗಳು ಹಬ್ಬಿಸುತ್ತಾ ಬಂದಿದ್ದರೂ ಅದಕ್ಕೆ ಸೊಪ್ಪು ಹಾಕದೆ ಬಿಜೆಪಿಯೊಂದಿಗೆ ಸಮನ್ವಯ ಸಾಧಿಸಿಕೊಂಡೇ ಪಕ್ಷವನ್ನು ಸಂಘಟಿಸುವ ಕಾರ್ಯಕ್ಕೆ ಚಾಲನೆ ನೀಡಿರುವುದು ಜೆಡಿಎಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಲ್ಲಿ ಹುರುಪು ತಂದಿದೆ.




2018ರ ಚುನಾವಣೆಯಲ್ಲಿ ಬಿಜೆಪಿ ಪಕ್ಷವು ಜೆಡಿಎಸ್ ಮೇಲೆ ಮೆಧು ಧೋರಣೆ ತಾಳಿತ್ತು. ಇದಕ್ಕೆ ಕಾರಣವೂ ಇತ್ತು ಬಹುಮತ ಬಾರದೆ ಹೋದರೆ ಜೆಡಿಎಸ್ ಜೊತೆಗೆ ಸೇರಿ ಸರ್ಕಾರ ರಚಿಸುವ ಆಲೋಚನೆಯಲ್ಲಿ ಕಮಲ ನಾಯಕರು ಇದ್ದರು. ಅವತ್ತು ಅಂದುಕೊಂಡಂತೆ ಯಾವುದೇ ಪಕ್ಷಕ್ಕೆ ಬಹುಮತ ಬರಲಿಲ್ಲ. ಬಿಜೆಪಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಬಹುಮತ ಬಂದಿರಲಿಲ್ಲ, ಹೀಗಾಗಿ ಜೆಡಿಎಸ್ ತಮ್ಮ ಕೈಹಿಡಿತ್ತಾರೆಂದು ನಂಬಿದ್ದರು. ಆದರೆ ಕಾಂಗ್ರೆಸ್ ನಾಯಕರು ಬಿಜೆಪಿಗೆ ಅಧಿ ಕಾರ ಕೊಡಬಾರದು ಎಂಬ ಕಾರಣಕ್ಕಾಗಿ ಜೆಡಿಎಸ್ ಜತೆಗೆ ಸೇರಿ ಸರ್ಕಾರ ರಚಿಸಿದರು. ಆದರೆ ಅದು ಬರ್ಕತ್ ಆಗಲಿಲ್ಲ.



2023ರ ಚುನಾವಣೆ ಹೊತ್ತಿಗೆ ಬಿಜೆಪಿ ತನ್ನ ವರಸೆ ಬದಲಿಸಿತ್ತು. ಅದು ಕಾಂಗ್ರೆಸ್ ಮತ್ತು ಜೆಡಿಎಸ್ ಎರಡನ್ನು ಟಾರ್ಗೆಟ್ ಮಾಡಿತ್ತು. ಇದರ ಪರಿಣಾಮ ಜೆಡಿಎಸ್ ಕ್ಷೇತ್ರಗಳಲ್ಲಿ ಹೆಚ್ಚಿನ ಮತಗಳನ್ನು ಬಿಜೆಪಿ ಸೆಳೆದುಕೊಂಡಿದ್ದರಿಂದ ಕಾಂಗ್ರೆಸ್ ಗೆಲುವು ಸುಲಭವಾಗಿತ್ತು. ಬ್ರಾಹ್ಮಣ ಮತ್ತು ಆರ್ ಎಸ್ ಎಸ್ ವಿರುದ್ಧ ಹೇಳಿಕೆಗಳಿಂದಾಗಿ ಬಹಳಷ್ಟು ಕ್ಷೇತ್ರಗಳಲ್ಲಿ ಜೆಡಿಎಸ್ ನಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳುವ ಮಟ್ಟಕ್ಕೆ ಹೋದರು. ಒಕ್ಕಲಿಗ ಮತಗಳು ಒಡೆದು ಹೋದರೆ, ಒಂದಷ್ಟು ಮುಸ್ಲಿಂ ಮತಗಳು ಕಾಂಗ್ರೆಸ್ ಪಾಲಾಯಿತು. ಜೆಡಿಎಸ್ ನ್ನು ಬಿಜೆಪಿ ಟಾರ್ಗೆಟ್ ಮಾಡಿದ ಕಾರಣದಿಂದಾಗಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಎದುರಿಸುವುದು ಜೆಡಿಎಸ್ ಸುಲಭವಾಗಿರಲಿಲ್ಲ.

2023 ಚುನಾವಣೆ ತನಕವೂ ನಾವೇ ಕಿಂಗ್ ಮೇಕರ್ ಎಂಬ ಆತ್ಮವಿಶ್ವಾಸ ದಳಪತಿಗಳಿಗೆ ಇತ್ತಾದರೂ ಫಲಿತಾಂಶದ ಬಳಿಕ ಕಾಂಗ್ರೆಸ್ ಮತ್ತು ಬಿಜೆಪಿ ಹೊಡೆತ ನೀಡಿರುವುದು ಗೊತ್ತಾಗಿತ್ತು. ಅದಾದ ನಂತರ ಬಹಳಷ್ಟು ನಾಯಕರು ಪಕ್ಷವನ್ನು ಬಿಟ್ಟು ಹೋಗಿದ್ದಾರೆ. ಚುನಾವಣೆಯಲ್ಲಿ ಸೋತ ಬಹುತೇಕ ನಾಯಕರು ಮೌನಕ್ಕೆ ಶರಣಾಗಿದ್ದಾರೆ. ದೇವೇಗೌಡ ಮತ್ತು ಕುಮಾರಸ್ವಾಮಿ ಅವರಿಗೆ ಮೂರನೇ ವ್ಯಕ್ತಿಯ ಕೈಗೆ ಪಕ್ಷದ ಚುಕ್ಕಾಣಿ ನೀಡುವ ಮನಸ್ಸಿಲ್ಲ ಎನ್ನುವುದಕ್ಕಿಂತಲೂ ಹೆಚ್ಚಾಗಿ ಆ ಹೊಣೆಗಾರಿಕೆಯನ್ನು ನಿಭಾಯಿಸುವಂತಹ ಹಿರಿಯ ನಾಯಕರು ಕಾಣಿಸುತ್ತಿಲ್ಲ.

ಹಳೇ ಮೈಸೂರು ಭಾಗವನ್ನು ಹೊರತು ಪಡಿಸಿದರೆ ರಾಜ್ಯದಾದ್ಯಂತ ನಾಯಕರ ಕೊರತೆಯನ್ನು ಜೆಡಿಎಸ್ ಎದುರಿಸುತ್ತಿದೆ. ಈಗಾಗಲೇ ಅಪ್ಪಮಕ್ಕಳ ಪಕ್ಷ ಎಂದು ವಿರೋಧಿಗಳು ಹಣೆ ಪಟ್ಟಿ ಕಟ್ಟಿಯಾಗಿದೆ. ಕಳೆದೊಂದು ದಶಕದಲ್ಲಿ ದೇವೇಗೌಡರ ಕುಟುಂಬದಲ್ಲಿ ಮಗಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹೀಗೆ ಎಲ್ಲರೂ ಜೆಡಿಎಸ್ ಪಕ್ಷದಡಿ ಅಧಿಕಾರ ಅನುಭವಿಸಿದ್ದಾರೆ. ಅದರಾಚೆಗೆ ಒಂದಷ್ಟು ಪ್ರಾಬಲ್ಯ ಹೊಂದಿದ ನಾಯಕರು ಪಕ್ಷದಿಂದ ಹೊರಬಂದು ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಹಂಚಿಹೋಗಿದ್ದಾರೆ. ಇದೆಲ್ಲದರ ಕಾರಣದಿಂದಾಗಿ ಇಳಿ ವಯಸ್ಸಿನಲ್ಲಿ ದೇವೇಗೌಡರೇ ಫೀಲ್ಡ್‌ಗೆ ಇಳಿಯುವಂತಾಗಿದೆ.

ಹೆಚ್.ಡಿ. ರೇವಣ್ಣ ಮತ್ತು ಅವರ ಕುಟುಂಬದ ಪರಿಸ್ಥಿತಿ ಚಿಂತಾಜನಕವಾಗಿದ್ದು, ಪಕ್ಷಸಂಘಟನೆ ಮಾಡುವ ಸ್ಥಿತಿಯಲ್ಲಿ ಅವರಿಲ್ಲ. ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಮಂತ್ರಿಯಾಗಿರುವುದರಿಂದ ತಮ್ಮ ಕರ್ತವ್ಯದ ಜೊತೆಗೆ ಪಕ್ಷಸಂಘಟನೆ ಮಾಡುವುದು ಅವರಿಂದಾಗುತ್ತಿಲ್ಲ. ಹೀಗಾಗಿಯೇ ಅವರ ಪುತ್ರ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಪಕ್ಷ ಸಂಘಟನೆಗಿಳಿದಿದ್ದಾರೆ. ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದ್ದಾರೆ. ಇದು ಸುಲಭದ ಕೆಲಸವಲ್ಲ. ಆದರೂ ಅಳಿದುಳಿದ ಒಂದಷ್ಟು ನಾಯಕರನ್ನು ಕಟ್ಟಿಕೊಂಡು ಮುನ್ನಡೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಿಂದಲೇ ಪಕ್ಷವನ್ನು ಸಂಘಟಿಸಿ ಕಾರ್ಯಕರ್ತರ ಪಡೆಯನ್ನು ಬೆಳೆಸುತ್ತಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಅವರದ್ದೇ ಆದ ಮತದಾರರಿದ್ದಾರೆ. ಹಾಗೆಯೇ ಕಾರ್ಯಕರ್ತರ ಪಡೆಯೂ ಇದೆ. ಇವರಲ್ಲಿ ಹುಮ್ಮಸ್ಸು ತುಂಬುವ ಕೆಲಸ ಈಗಿನಿಂದಲೇ ಆಗಬೇಕಾಗಿದೆ. ಎನ್‌ಡಿಎ ಜತೆಗೆ ಮೈತ್ರಿ ಮಾಡಿಕೊಂಡರೂ ತಮ್ಮ ಶಕ್ತಿಯನ್ನು ಪ್ರದರ್ಶಿಸದೆ ಹೋದರೆ ಬಿಜೆಪಿ ಮುಂದೆ ಗೌಣವಾಗುವ ಸಾಧ್ಯತೆ ಹೆಚ್ಚಿದೆ. ಇದರ ಜತೆಗೆ ಸ್ಥಳೀಯ ಸಂಸ್ಥೆ ಚುನಾವಣೆಗಳು ಬಂದರೆ ಅಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಸ್ಪರ್ಧೆ ಮಾಡಬೇಕಾ ಎಂಬ ಜಿಜ್ಞಾಸೆಯೂ ಇದೆ. ತಳಮಟ್ಟದಲ್ಲಿ ಕೆಲವು ಕಡೆಗಳಲ್ಲಿ ಜೆಡಿಎಸ್ ಗೆ ಬಿಜೆಪಿಯೇ ಪ್ರಬಲ ವಿರೋಧಿ. ಹೀಗಿರುವಾಗ ಅದೆಲ್ಲವನ್ನು ಸರಿಪಡಿಸಿಕೊಂಡು ಒಮ್ಮತದಿಂದ ಮುನ್ನಡೆಯುವುದು ಅನಿವಾರ್ಯವಾಗಿದೆ.





ಮುಖ್ಯವಾಗಿ ಮೈತ್ರಿಯಾಗಬೇಕಾಗಿರುವುದು ಕಾರ್ಯಕರ್ತರು ಅವರು ಒಟ್ಟಾಗಿ ಮುನ್ನಡೆದರೆ ಮುಂದಿನ 2028ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟ ಅಧಿಕಾರ ಹಿಡಿಯಬಹುದು ಎಂಬ ಲೆಕ್ಕಾಚಾರಗಳು ಶುರುವಾಗಿವೆ. ಇದು ಸಾಧ್ಯವಾಗಬೇಕಾದರೆ ಬಿಜೆಪಿ ಜತೆಗೆ ಜೆಡಿಎಸ್ ಕೂಡ ಗಟ್ಟಿಯಾಗಬೇಕಾಗಿದೆ. ಹೀಗಾಗಿಯೇ ನಿಖಿಲ್ ಕುಮಾರಸ್ವಾಮಿ ಜನರೊಂದಿಗೆ ಜನತಾದಳ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ.

ಆ ಮೂಲಕ ಎನ್‌ಡಿಎ ಜತೆಗೆ ಕೈಜೋಡಿಸಿದ್ದರಿಂದ ಜೆಡಿಎಸ್ ನ ಅಸ್ತಿತ್ವವೇ ಮುಗಿದು ಹೋಯಿತು ಎಂದು ಟೀಕೆಗಳನ್ನು ಮಾಡುತ್ತಿದ್ದವರಿಗೆ ಉತ್ತರ ಕೊಡುವ ಕೆಲಸವನ್ನು ಮಾಡುತ್ತಿದ್ದಾರೆ. ಈಗಾಗಲೇ ಸಭೆ, ಸಮಾವೇಶಗಳನ್ನು ಮಾಡುತ್ತಾ ಬಂದಿರುವ ಪಕ್ಷಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಇದೀಗ ಹಳೆ ಮೈಸೂರಿನಲ್ಲಿ ಮತ್ತೆ ಎದ್ದು ನಿಲ್ಲಲು ಶತಪ್ರಯತ್ನ ನಡೆಸುತ್ತಿದೆ. ಇದರ ಒಂದು ಭಾಗವಾಗಿ ಜನರೊಂದಿಗೆ ಜನತಾದಳ ಕಾರ್ಯಕ್ರಮವು ನಡೆಯುತ್ತಿದ್ದು,. ಕೆ.ಆರ್. ನಗರ, ಪಿರಿಯಾಪಟ್ಟಣ ಹುಣಸೂರು ಸೇರಿದಂತೆ ಗ್ರಾಮೀಣ ಭಾಗದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿದೆ. ಮೈಸೂರಿನಲ್ಲಿಯೂ ನಡೆಯುತ್ತಿದೆ.

ಜೆಡಿಎಸ್ ಕೇವಲ ಗ್ರಾಮೀಣ ಭಾಗಕ್ಕೆ ಸೀಮಿತ, ನಗರ ಪ್ರದೇಶದಲ್ಲಿ ಅದಕ್ಕೆ ಶಕ್ತಿ ಇಲ್ಲ ಎನ್ನುವವರಿಗೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮಾವೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರನ್ನು ಸೇರಿಸಿ ಉತ್ತರ ಕೊಡುವ ಪ್ರಯತ್ನ ಮಾಡಿದ್ದಾರೆ. ಹಾಗೆಯೇ ಮೈಸೂರು ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳಲ್ಲಿ ಸಹಸ್ರಾರು ಕಾರ್ಯಕರ್ತರು ಭಾಗವಹಿಸುತ್ತಿದ್ದಾರೆ. ಹೀಗಾಗಿ ಸ್ವಲ್ಪ ಮಟ್ಟಿಗೆ ಧೈರ್ಯ ದಳಪತಿಗಳಲ್ಲಿ ಮೂಡಿದೆ. ಆದರೆ ಪಕ್ಷದಲ್ಲಿ ಮುನಿಸು ತೋರುತ್ತಿರುವ ನಾಯಕರು ಇಲ್ಲದಿಲ್ಲ.

ಜೆಡಿಎಸ್ ತೊರೆದು ಕಾಂಗ್ರೆಸ್ ಕಡೆಗೆ ಅರ್ಥಾತ್ ಡಿ.ಕೆ.ಶಿವಕುಮಾರ್ ಕಡೆಗೆ ಮುಖ ಮಾಡಿದ ಒಕ್ಕಲಿಗರು ಒಂದು ವೇಳೆ ಡಿಕೆಶಿಗೆ ಮುಖ್ಯಮಂತ್ರಿ ಪಟ್ಟ ನೀಡದೆ ಹೋದರೆ ಕಾಂಗ್ರೆಸ್ ವಿರುದ್ಧ ತಿರುಗಿ ಬೀಳುವ ಸಾಧ್ಯತೆಯಿದ್ದು, ಅವರು ಮತ್ತೆ ಜೆಡಿಎಸ್ ಕಡೆಗೆ ಮುಖ ಮಾಡಿ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿ ಎಂದು ಬಯಸುವುದಂತು ನಿಜ. ಇದೆಲ್ಲವೂ ಮುಂದಿನ ದಿನಗಳಲ್ಲಿ ಜೆಡಿಎಸ್‌ಗೆ ಪ್ಲಸ್ ಪಾಯಿಂಟ್ ಆಗಲಿದೆ. ಹೀಗಾಗಿಯೇ ಜೆಡಿಎಸ್ ಸದ್ಯಕ್ಕೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರನ್ನು ಟಾರ್ಗೆಟ್ ಮಾಡಿ ಮಾತನಾಡುತ್ತಿದೆ.

ಜತೆಗೆ ನಿಮ್ಮ ಅಧಿಕಾರವಧಿಯಲ್ಲಿಯೇ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ನಗರ ಪಾಲಿಕೆ, ಗ್ರಾಮ ಪಂಚಾಯಿತಿ ಚುನಾವಣೆ ಮಾಡಿ ನೋಡೋಣ ಎಂದು ಸವಾಲ್ ಹಾಕುತ್ತಿದೆ. ಜೆಡಿಎಸ್ ಬಿಜೆಪಿ ಒಂದಾಗಿವೆ, ನಮಗೆ ಅಧಿಕಾರ ಸಿಗುವುದಿಲ್ಲ ಎಂಬ ಭಯದಿಂದ ಚುನಾವಣೆ ನಡೆಸುತ್ತಿಲ್ಲವೇ? ನಾವು ಬೇರೆ

☞14



# ಬಾಲ ಗರ್ಭಿಣಿ ಪ್ರಕರಣಗಳಿಗೆ ಕಡ್ಡಾಯ ವರದಿ

## ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರದ ಕಟ್ಟುನಿಟ್ಟಿನ ಪೋಕ್ಸೋ ಮಾರ್ಗಸೂಚಿ

**ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಯಲು ಮತ್ತು ಪೀಡಿತರಿಗೆ ತಕ್ಷಣ ನ್ಯಾಯ ದೊರಕುವಂತೆ ಮಾಡಲು ಕರ್ನಾಟಕ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಪೋಕ್ಸೋ ಕಾಯಿದೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗುವ ಬಾಲ ಗರ್ಭಿಣಿ ಪ್ರಕರಣಗಳ ಕುರಿತು ಕಡ್ಡಾಯ ವರದಿ ಸಲ್ಲಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೊಸ ಮಾರ್ಗಸೂಚಿ ಹೊರಡಿಸಿದೆ. ಈ ಕ್ರಮದಿಂದ ಇಂತಹ ಪ್ರಕರಣಗಳು ಮುಚ್ಚಿಹೋಗದೆ ಕಾನೂನು ವ್ಯಾಪ್ತಿಗೆ ಬರುವಂತೆ ಮಾಡಿ, ಮಕ್ಕಳ ಸುರಕ್ಷತೆ ಹಾಗೂ ಹಕ್ಕುಗಳ ರಕ್ಷಣೆಯನ್ನು ಬಲಪಡಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ.**

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತಡೆಯುವ ಹಾಗೂ ಪೀಡಿತರಿಗೆ ತಕ್ಷಣ ನ್ಯಾಯ ಒದಗಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೊರಡಿಸಿರುವ ಹೊಸ ಮಾರ್ಗಸೂಚಿಯ ಪ್ರಕಾರ, ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗುವ ಬಾಲ ಗರ್ಭಿಣಿ ಪ್ರಕರಣಗಳ ಕುರಿತು ಕಡ್ಡಾಯವಾಗಿ ಮಾಹಿತಿ ನೀಡುವುದು ಅನಿವಾರ್ಯವಾಗಿದ್ದು, ಈ ನಿಯಮವನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಪೋಕ್ಸೋ ಕಾಯಿದೆ (Protection of Children from Sexual Offences Act, 2012) ಅಡಿಯಲ್ಲಿ ಈ ಆದೇಶ ಜಾರಿಯಾಗಿದ್ದು, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರಲ್ಲಿ ಗರ್ಭಧಾರಣೆ ಕಂಡುಬಂದರೆ ಅದನ್ನು ಕೇವಲ ವೈದ್ಯಕೀಯ ಪ್ರಕರಣವೆಂದು ಪರಿಗಣಿಸದೇ, ಸಾಧ್ಯವಿರುವ ಅಪರಾಧದ ಭಾಗವಾಗಿ ಪರಿಗಣಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಈ ಮೂಲಕ, ಇಂತಹ ಪ್ರಕರಣಗಳು ಮೌನವಾಗಿ ಉಳಿಯದೇ, ಕಾನೂನು ವ್ಯಾಪ್ತಿಗೆ ಬರುತ್ತವೆ ಎಂಬುದು ಸರ್ಕಾರದ ಉದ್ದೇಶವಾಗಿದೆ.

ಮಾರ್ಗಸೂಚಿಯ ಪ್ರಕಾರ, ಯಾವುದೇ ಖಾಸಗಿ ಆಸ್ಪತ್ರೆಯಲ್ಲಿ 18 ವರ್ಷದೊಳಗಿನ ಬಾಲಕಿಯೊಬ್ಬಳು ಗರ್ಭಿಣಿಯಾಗಿ ದಾಖಲಾಗಿದೆಯೆಂಬುದು ದೃಢಪಟ್ಟ ತಕ್ಷಣವೇ ಚಿಕಿತ್ಸೆ ನೀಡುವ ವೈದ್ಯರು Special Juvenile Police Unit (SJPU) ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಇದಷ್ಟೇ ಅಲ್ಲದೆ, ಚೈಲ್ಡ್ ಹೆಲ್ಪ್‌ಲೈನ್ (1098) ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೂ ಪ್ರಕರಣದ ವಿವರಗಳನ್ನು ಕಳುಹಿಸುವುದು ಕಡ್ಡಾಯವಾಗಿದೆ. ಈ ವ್ಯವಸ್ಥೆಯು ಪೀಡಿತ ಬಾಲಕಿಗೆ ಅಗತ್ಯವಾದ ಕಾನೂನು, ಮಾನಸಿಕ ಹಾಗೂ ಸಾಮಾಜಿಕ ಸಹಾಯವನ್ನು ತ್ವರಿತವಾಗಿ ಒದಗಿಸಲು ನೆರವಾಗುತ್ತದೆ. ಸರ್ಕಾರದ ಈ ಕ್ರಮದಿಂದ, ಹಲವು ಬಾರಿ ಸಮಾಜದ ಭಯದಿಂದ ಅಥವಾ ಗೌಪ್ಯತೆಯ ನೆಪದಲ್ಲಿ ಮುಚ್ಚಿಹಾಕಲ್ಪಡುವ ಪ್ರಕರಣಗಳು ಈಗ ಬಹಿರಂಗವಾಗಿ ಬೆಳಕಿಗೆ ಬರಲಿವೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಪೋಕ್ಸೋ ಕಾಯಿದೆಯ ಸೆಕ್ಷನ್ 19(1) ಪ್ರಕಾರ, ಇಂತಹ ಪ್ರಕರಣಗಳ ಬಗ್ಗೆ ತಿಳಿದಿದ್ದರೂ ವರದಿ ಮಾಡದಿರುವುದು ಕಾನೂನು ಉಲ್ಲಂಘನೆ ಆಗುತ್ತದೆ. ಇದರಿಂದಾಗಿ ವೈದ್ಯರು, ಆಸ್ಪತ್ರೆ ಸಿಬ್ಬಂದಿ ಅಥವಾ ಸಂಸ್ಥೆಯ ಮುಖ್ಯಸ್ಥರು ಯಾರೇ ಆಗಿರಲಿ, ಮಾಹಿತಿ ಮುಚ್ಚಿಟ್ಟರೆ ಅವರು ಕಾನೂನು ಬಲೆಗೆ ಸಿಲುಕುವ ಸಾಧ್ಯತೆ ಇದೆ. ಇನ್ನೂ ಗಂಭೀರವಾಗಿ, ಸೆಕ್ಷನ್ 21(2) ಪ್ರಕಾರ ವರದಿ ಮಾಡದ ಸಂಸ್ಥೆಯ ಮುಖ್ಯಸ್ಥರಿಗೆ ಒಂದು ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಪ್ರಾವಧಾನವೂ ಇದೆ. ಈ ಮೂಲಕ ಸರ್ಕಾರ ಸ್ಪಷ್ಟ ಸಂದೇಶ ನೀಡಿದ್ದು, ಬಾಲಕರ ಮೇಲಿನ ಅಪರಾಧಗಳ ಬಗ್ಗೆ ಯಾವುದೇ ರೀತಿಯ ನಿರ್ಲಕ್ಷ್ಯವನ್ನು ಸಹಿಸಿಕೊಳ್ಳುವುದಿಲ್ಲ ಎಂಬುದು ಗೊತ್ತಾಗುತ್ತದೆ.

ಇದರ ಜೊತೆಗೆ, ಮಾರ್ಗಸೂಚಿಯಲ್ಲಿ ರೋಗಿಯ ಗೌಪ್ಯತೆ ಕಾಪಾಡುವ ವಿಚಾರಕ್ಕೂ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಪ್ರಕರಣದ ಮಾಹಿತಿ ನೀಡುವಾಗ ಪೀಡಿತೆಯ ವ್ಯಕ್ತಿಗತ ವಿವರಗಳನ್ನು ಬಹಿರಂಗಪಡಿಸಬಾರದು ಎಂದು ಸೂಚಿಸಲಾಗಿದೆ. ತನಿಖಾ ಸಂಸ್ಥೆಗಳೊಂದಿಗೆ ಸಹಕಾರ ನೀಡುವಾಗಲೂ ವೈದ್ಯರು ಹಾಗೂ ಆಸ್ಪತ್ರೆಗಳು ನೈತಿಕ ಮತ್ತು ಕಾನೂನುಬದ್ಧ ಮಾನದಂಡಗಳನ್ನು ಅನುಸರಿಸಬೇಕು. ಇದು ಪೀಡಿತ ಬಾಲಕಿಯ ಮಾನಸಿಕ ಸ್ಥಿತಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಲು




ಅಗತ್ಯ ಕ್ರಮವಾಗಿದೆ. ಸಮಾಜದಲ್ಲಿ ಇನ್ನೂ ಇಂತಹ ವಿಷಯಗಳಿಗೆ ಸಂಬಂಧಿಸಿದ ನಾಚಿಕೆ ಮತ್ತು ಭಯದ ವಾತಾವರಣ ಇರುವುದರಿಂದ, ಗೌಪ್ಯತೆ ಕಾಪಾಡುವುದು ಅತ್ಯಂತ ಮುಖ್ಯ ಅಂಶವಾಗಿದೆ.

ಸರ್ಕಾರ ಮತ್ತೊಂದು ಪ್ರಮುಖ ಅಂಶವಾಗಿ ಆಸ್ಪತ್ರೆಗಳ ಸಿಬ್ಬಂದಿಗೆ ಪೋಕ್ಸೋ ಕಾಯಿದೆಯ ಬಗ್ಗೆ ತರಬೇತಿ ನೀಡುವುದನ್ನು ಕಡ್ಡಾಯಗೊಳಿಸಿದೆ. ವೈದ್ಯರು, ನರ್ಸ್‌ಗಳು ಹಾಗೂ ಇತರ ಆರೋಗ್ಯ ಸಿಬ್ಬಂದಿ ಈ ಕಾಯಿದೆಯ ನಿಯಮಗಳು, ವರದಿ ಮಾಡುವ ವಿಧಾನ, ಪೀಡಿತರೊಂದಿಗೆ ವರ್ತಿಸುವ ಸೂಕ್ತ ಕ್ರಮಗಳು ಇತ್ಯಾದಿಗಳ ಬಗ್ಗೆ ಸಮಗ್ರ ಅರಿವು ಹೊಂದಿರಬೇಕು. ಈ ತರಬೇತಿಗಳು ಕೇವಲ ಕಾನೂನು ಪಾಲನೆಗಾಗಿ ಮಾತ್ರವಲ್ಲದೆ, ಪೀಡಿತರಿಗೆ ಸೂಕ್ತ ಸಹಾನುಭೂತಿ ಮತ್ತು ಮಾನವೀಯತೆ ತೋರಿಸುವುದಕ್ಕೂ ಸಹಕಾರಿ ಆಗಲಿದೆ. ಅನೇಕ ಸಂದರ್ಭಗಳಲ್ಲಿ ಅರಿವಿನ ಕೊರತೆಯಿಂದಾಗಿ ಪ್ರಕರಣಗಳು ಸರಿಯಾಗಿ ದಾಖಲಾಗದೇ ಹೋಗುತ್ತವೆ. ಈ ಹಿನ್ನೆಲೆ, ತರಬೇತಿ ಕಾರ್ಯಕ್ರಮಗಳು ಮಹತ್ವದ್ದಾಗಿವೆ.

ಈ ಮಾರ್ಗಸೂಚಿ ತಕ್ಷಣದಿಂದಲೇ ಜಾರಿಗೆ ಬಂದಿದ್ದು, ಎಲ್ಲಾ ಖಾಸಗಿ ಆಸ್ಪತ್ರೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಸರ್ಕಾರದ ಈ ನಿರ್ಧಾರವು ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಒಂದು ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ. ವಿಶೇಷವಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿಯೂ ಅನೇಕ ಪ್ರಕರಣಗಳು ಇನ್ನೂ ಬೆಳಕಿಗೆ ಬಾರದಿರುವ ಸಾಧ್ಯತೆ ಇರುವುದರಿಂದ, ಈ ಕ್ರಮವು ಅಂತಹ ಪ್ರಕರಣಗಳನ್ನು ಹೊರತೆಗೆದು ನ್ಯಾಯದ ಚೌಕಟ್ಟಿನೊಳಗೆ ತರಲು ಸಹಕಾರಿಯಾಗಲಿದೆ. ಇದರಿಂದ ಪೀಡಿತ ಬಾಲಕಿಯರಿಗೆ ನ್ಯಾಯ ದೊರಕುವುದರ ಜೊತೆಗೆ, ಅಪರಾಧಿಗಳಿಗೆ ತಕ್ಷಣ ಶಿಕ್ಷೆ ವಿಧಿಸುವುದು ಸುಲಭವಾಗುತ್ತದೆ.

ಒಟ್ಟಾರೆ, ಪೋಕ್ಸೋ ಕಾಯಿದೆಯಡಿ ಖಾಸಗಿ ಆಸ್ಪತ್ರೆಗಳಿಗೆ ವಿಧಿಸಲಾದ ಈ ಕಡ್ಡಾಯ ವರದಿ ವ್ಯವಸ್ಥೆ, ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಲೈಂಗಿಕ ಅಪರಾಧಗಳ ವಿರುದ್ಧದ ಹೋರಾಟದಲ್ಲಿ ಬಲವಾದ ಹೆಜ್ಜೆಯಾಗಿದೆ. ವೈದ್ಯಕೀಯ ಕ್ಷೇತ್ರವು ಕೇವಲ ಚಿಕಿತ್ಸೆ ನೀಡುವ ಸ್ಥಳವಲ್ಲದೆ, ಸಮಾಜದ ಸುರಕ್ಷತೆಯನ್ನು ಕಾಪಾಡುವ ಪ್ರಮುಖ ಅಂಗವಾಗಿಯೂ ಕಾರ್ಯನಿರ್ವಹಿಸಬೇಕು ಎಂಬ ಸಂದೇಶವನ್ನು ಈ ಮಾರ್ಗಸೂಚಿ ನೀಡುತ್ತದೆ. ಸರ್ಕಾರದ ಈ ಕ್ರಮದಿಂದ ಭವಿಷ್ಯದಲ್ಲಿ ಬಾಲಕರ ಮೇಲಿನ ದೌರ್ಜನ್ಯ ಪ್ರಕರಣಗಳು ಕಡಿಮೆಯಾಗುವ ನಿರೀಕ್ಷೆಯಿದ್ದು, ನ್ಯಾಯ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ದಾರಿ ತೆರೆದಿದೆ.

## ನಕಲಿ ಐಎಎಸ್ ಅಧಿಕಾರಿಯ ವೇಷದಲ್ಲಿ ಕೋಟ್ಯಾಂತರ ವಂಚನೆ:

7 ☞

ನಂಬಿಸಿ, ದೊಡ್ಡ ಮೊತ್ತದ ಹಣವನ್ನು ಪಡೆದು ನಂತರ ಸಂಪರ್ಕ ಕಡಿತಗೊಳಿಸುವುದು ಈತನ ಸಾಮಾನ್ಯ ತಂತ್ರವಾಗಿತ್ತು. ಪ್ರಭಾವಿ ಅಧಿಕಾರಿಗಳ ಹೆಸರುಗಳನ್ನು ಬಳಸಿಕೊಂಡು ತನ್ನ ಮಾತುಗಳಿಗೆ ಬಲ ನೀಡುತ್ತಿದ್ದ ಈತ, ತನ್ನ ಸುಳ್ಳುಗಳನ್ನು ನಿಜವಾಗಿ ಕಾಣುವಂತೆ ಮಾಡುತ್ತಿದ್ದ.

ಆದರೆ ಎಷ್ಟೇ ಚತುರತೆಯಿಂದ ವಂಚನೆ ನಡೆಸಿದರೂ, ಒಂದು ತಪ್ಪು ಎಲ್ಲವನ್ನೂ ಬಹಿರಂಗಗೊಳಿಸುತ್ತದೆ ಎಂಬ ಮಾತಿನಂತೆ, ಮಿಥುನ್ ಕೂಡ ತನ್ನ ಪ್ರಭಾವ ತೋರಿಸಲು ಹೋಗಿ ಪೊಲೀಸರ ಕಣ್ಣಿಗೆ ಬಿದ್ದಿದ್ದಾನೆ. ಬೆಂಗಳೂರಿನ ಒಬ್ಬ ಡಿಸಿಪಿಯ ಹೆಸರನ್ನು ಬಳಸಿಕೊಂಡು ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಯತ್ನಿಸಿದಾಗ ಅಮೃತಹಳ್ಳಿ ಪೊಲೀಸರಿಗೆ ಅನುಮಾನ ಉಂಟಾಗಿದೆ. ಆ ನಂತರ ಈತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆತ ನಿಜವಾಗಿ ಯಾವುದೇ ಐಎಎಸ್ ಅಧಿ ಕಾರಿ ಅಲ್ಲ ಎಂಬುದು ಬಹಿರಂಗವಾಗಿದೆ. ತನ್ನನ್ನು ಲಕ್ಷಾಂತರ ಅಭ್ಯರ್ಥಿಗಳ ನಡುವೆ ಆಯ್ಕೆಯಾದ ಅಧಿ ಕಾರಿಯೆಂದು ಸುಳ್ಳು ಹೇಳಿಕೊಂಡು ಹಲವರನ್ನು ಮೋಸಗೊಳಿಸಿದ್ದಾನೆ ಎಂಬ ಸಂಗತಿಯೂ ಬೆಳಕಿಗೆ ಬಂದಿದೆ. ಈ ಪ್ರಕರಣವು ಕೇವಲ ಒಬ್ಬ ವ್ಯಕ್ತಿಯ ವಂಚನೆಗೆ ಸೀಮಿತವಾಗದೇ, ಸಮಾಜದಲ್ಲಿ ಅಧಿ ಕಾರದ ಹೆಸರಿನಲ್ಲಿ ನಡೆಯುತ್ತಿರುವ ಮೋಸದ ತಂತ್ರಗಳನ್ನು ಬಯಲಿಗೆಳೆಯುತ್ತದೆ.

## ...ಖತರ್‌ನಾಕ್ ಕಳ್ಳರಿಬ್ಬರ ಬಂಧನ

11 ☞

ಎ2 ಅಬೂಬಕರ ಬಾದಶಹಾ ಮುಲ್ಲಾನಿ (27 ವ) ಈತನು ಕೌಜಲಗಿ ಲಕ್ಷ್ಮಿನಗರದ ನಿವಾಸಿ. ಈತನಿಗೆ ಹೆಂಡತಿ, ಮಕ್ಕಳಿದ್ದು, ಈತ ಬೈಕ್ ರಿಪೇರಿ ಮೇಸ್ತ್ರಿಯಾಗಿದ್ದು, ಎ1 ಅಸ್ಲಂನಿಗೆ ಸಹೋದರ ಸಂಬಂಧಿಯಾಗಿದ್ದನು. ಇಬ್ಬರು ಸೇರಿ ಪ್ಲಾನ್ ಮಾಡಿಕೊಂಡು ಕಳ್ಳತನ ಮಾಡಿದ್ದರು. ಹೀಗೆ ಕಳ್ಳತನ ಮಾಡಿದ್ದ 13 ವಿವಿಧ ಕಂಪನಿಯ ಬೈಕ್‌ಗಳನ್ನು ಮಾರಾಟ ಮಾಡುವುದಕ್ಕಾಗಿ ಸಂಗ್ರಹ ಮಾಡಿದ್ದರು. 7.42 ಲಕ್ಷ ರೂ.ಗಳ ಮೌಲ್ಯದ ಬೈಕ್‌ಗಳನ್ನು ಚಿಕ್ಕೋಡಿ ಪೊಲೀಸರು ಜಪ್ತಿ ಮಾಡಿದ್ದಾರೆ. ಇದರಲ್ಲಿ ಚಿಕ್ಕೋಡಿ ಪಟ್ಟಣದಲ್ಲಿ 6 ಮೋಟಾರ್ ಬೈಕ್ ಹಾಗೂ ಮಾಳಮಾರುತಿ, ಕುಲಗೋಡ, ಯಮಕನಮರಡಿ, ಘಟಪ್ರಭಾ, ಮುರಗೋಡ ಮತ್ತು ಮಹಾರಾಷ್ಟ್ರದ ಸಾತಾರಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 7 ಮೋಟಾರ್ ಬೈಕ್ ಸೇರಿಕೊಂಡಿವೆ. ಇವನ್ನು ಸಿಕ್ಕ ಮೋಟಾರ್ ಬೈಕ್ ವಾರಸುದಾರರನ್ನು ಪತ್ತೆಹಚ್ಚಿ ಅವರಿಗೆ ಬೈಕ್‌ಗಳನ್ನು ದೊರಕಿಸುವ ವ್ಯವಸ್ಥೆ ಮಾಡಲಾಗುವುದೆಂದು ಪಿಎಸ್‌ಐ ಬಸಗೌಡ ನೇರ್ಲಿ ತಿಳಿಸಿದ್ದಾರೆ.

**ಶ್ಲಾಘನೆ...**

ಚಿಕ್ಕೋಡಿ ಪಿಎಸ್‌ಐ ಬಸಗೌಡ ನೇರ್ಲಿ ಅವರು ದಕ್ಷತೆಯಿಂದ ತಮ್ಮ ಸಿಬ್ಬಂದಿಗಳೊಡನೆ ಕಾರ್ಯಾಚರಣೆ ಮಾಡಿ ಇಬ್ಬರು ಖದೀಮ ಕಳ್ಳರನ್ನು ಬಂಧಿಸಿ ಅವರಿಂದ 7.42 ಲಕ್ಷ ರೂ.ಗಳ 13 ಬೈಕ್‌ಗಳನ್ನು ಜಪ್ತಿ ಮಾಡಿಕೊಂಡ ಕ್ರಮವನ್ನು ಎಸ್ಪಿ ಕೆ. ರಾಮರಾಜನ್, ಹೆಚ್ಚುವರಿ ಎಸ್ಪಿ ಆರ್.ಬಿ. ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಸಿಪಿಐ ವಿಶ್ವನಾಥ ಚೌಗುಲಾ ಶ್ಲಾಘಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

13 ☞

ಬೇರೆ ಇದ್ದಾಗಲೇ ನಿಮಗೆ ಅಧಿ ಕಾರ ಕೊಟ್ಟಿಲ್ಲ. ಇನ್ನು ಒಂದಾಗಿರುವಾಗ ಸಿಗುತ್ತದಯೇ ಎಂದು ದಳಪತಿಗಳು ಮಾತಿನ ಬಾಣವನ್ನು ಸಿದ್ದರಾಮಯ್ಯ ಕಡೆಗೆ ಎಸೆಯುತ್ತಿದ್ದಾರೆ.

ಸಮಾಜವಾದಿ ಎಂದು ಹೇಳಿಕೊಳ್ಳುವ ನೀವು, ನಿಮ್ಮ ಮಗನೇ ಅಧಿಕಾರದಲ್ಲಿದ್ದರೆ ಹೇಗೆ? ಪಕ್ಷಕ್ಕಾಗಿ ದುಡಿದಿರುವ ಇತರರಿಗೂ ಅಧಿಕಾರ ಕೊಡಿ. ಯಾವುದೇ ಪಕ್ಷದ ಕಾರ್ಯಕರ್ತನಾಗಿರಲಿ ಅವರು ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ನಗರ ಪಾಲಿಕೆ ಸದಸ್ಯನಾಗಲು ಚುನಾವಣೆ ನಡೆಸಬೇಕು. ನಮಗೆ ಅಧಿ ಕಾರಿ ಸಿಗುವುದಿಲ್ಲ ಎಂಬ ಭಯದಿಂದ ಚುನಾವಣೆ ಮಾಡದೇ ಇದ್ದರೆ ಅದು ಪ್ರಜಾಪ್ರಭುತ್ವದ ಕಗ್ಗೊಲೆ. ಚುನಾವಣೆಯಲ್ಲಿ ಸೋಲು ಗೆಲುವು ಸಾಮಾನ್ಯ ಎಂಬ ಬದ್ಧತೆ ಇದ್ದರೆ ಕೂಡಲೇ ಚುನಾವಣೆ ಮಾಡಿ ಎಂದು ಕುಟುಕುತ್ತಿದ್ದಾರೆ.

ಜೆಡಿಎಸ್ ಎಸೆಯುತ್ತಿರುವ ಮಾತುಗಳು ಸಿದ್ದರಾಮಯ್ಯ ಅವರಿಗೆ ಟಾಂಗ್ ಕೊಡುವಂತಿವೆ. ಬಿಜೆಪಿ ಮತ್ತು ಜೆಡಿಎಸ್‌ಗೆ ಸ್ಥಳೀಯ ಸಂಸ್ಥೆ ಚುನಾವಣೆಗಳು ಬಹುಮುಖ್ಯವಾಗಿವೆ. ಇಲ್ಲಿ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿ ಮೈತ್ರಿ ಬೆಂಬಲಿತ ಅಭ್ಯರ್ಥಿಗಳು ಗೆಲ್ಲುವಂತಾದರೆ ಮುಂದಿನ ವಿಧಾನಸಭಾ ಚುನಾವಣೆಗೆ ಅನುಕೂಲಕರವಾಗಲಿವೆ ಎನ್ನುವುದು ಆಲೋಚನೆಯಾಗಿದೆ. ಅದು ಏನೇ ಇರಲಿ ಜೆಡಿಎಸ್ ಹತಕ್ಕೆ ಬಿದ್ದಿದೆ. ಹೇಗಾದರೂ ಮಾಡಿ ಸೋತಲ್ಲೇ ಗೆಲ್ಲಬೇಕೆಂಬ ತೀರ್ಮಾನಕ್ಕೆ ಬಂದಿದೆ. ಹೋರಾಟ ಶುರು ಮಾಡಿದೆ ಮುಂದೇನು ಎಂಬುದನ್ನು ಕಾದು ನೋಡೋಣ.

# ನೋಡಲು ತನ್ನಂತಿಲ್ಲ ಎಂದು ಮಗನನ್ನೇ ಕೊಂದ ಪಾಪಿ ತಂದೆ!

ವಿಜಯಪುರದಲ್ಲಿ, ತನ್ನ ಮಗ ತನ್ನಂತೆ ಕಾಣುವುದಿಲ್ಲ ಎಂಬ ಜನರ ಮಾತಿನಿಂದ ಅನುಮಾನಗೊಂಡ ತಂದೆ, 6 ವರ್ಷದ ಮಗನನ್ನು ಮಹಾರಾಷ್ಟ್ರದ ಕೃಷ್ಣಾ ನದಿಗೆ ತಳ್ಳಿ ಕೊಲೆ ಮಾಡಿದ್ದಾನೆ. ಶಾಲೆಯಲ್ಲಿ ಸೇರಿಸುವುದಾಗಿ ನಂಬಿಸಿ ಕರೆದೊಯ್ದು ಈ ಕೃತ್ಯ ಎಸಗಿದ್ದು, ಪತ್ನಿಯ ದೂರಿನ ಮೇರೆಗೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ವಿಜಯಪುರದಲ್ಲಿ ನಡೆದ ಈ ದಾರುಣ ಘಟನೆ ಮಾನವೀಯ ಮೌಲ್ಯಗಳನ್ನು ನಡುಗಿಸುವಂತಿದ್ದು, ಒಂದು ಕುಟುಂಬದ ದುಃಖವನ್ನು ಮಾತ್ರವಲ್ಲದೆ, ಸಮಾಜದ ಅಸಹನೆಯ ಮುಖವನ್ನೂ ಅನಾವರಣಗೊಳಿಸಿದೆ. 'ಮಗ ನೋಡಲು ತನ್ನಂತಿಲ್ಲ' ಎಂಬ ತಮಾಷೆಯ ಮಾತುಗಳು ಎಷ್ಟು ಭೀಕರ ಪರಿಣಾಮ ಬೀರಬಹುದು ಎಂಬುದಕ್ಕೆ ಈ ಘಟನೆ ಜೀವಂತ ಉದಾಹರಣೆಯಾಗಿದೆ. ಕೇವಲ ಕೆಲವರ ವ್ಯಂಗ್ಯ ಮತ್ತು ಅನುಮಾನಗಳಿಂದ ಪ್ರೇರಿತನಾದ ತಂದೆಯೊಬ್ಬ ತನ್ನದೇ ಆರು ವರ್ಷದ ಮಗನನ್ನು ಕ್ರೂರವಾಗಿ ಹತ್ಯೆ ಮಾಡಿರುವುದು, ಮನಸ್ಸಿನ ಅಸ್ಥಿರತೆ ಮತ್ತು ಅಜ್ಞಾನ ಎಷ್ಟು ಅಪಾಯಕಾರಿಯೆಂಬುದನ್ನು ತೋರಿಸುತ್ತದೆ.



ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಅರಕೇರಿ ಮತ್ತು ಭಾಗ್ಯಶ್ರೀ ದಂಪತಿಗಳು ಸಾಮಾನ್ಯ ಕುಟುಂಬ ಜೀವನ ನಡೆಸುತ್ತಿದ್ದರು. ಇವರಿಗೆ ಸಿದ್ಧಾರ್ಥ ಎಂಬ ಆರು ವರ್ಷದ ಮಗನಿದ್ದ. ಆದರೆ ಈ ಕುಟುಂಬದ ಸುಖಶಾಂತಿ, ಹೊರಗಿನವರ ಮಾತಿನಿಂದಲೇ ಚೂರಾಗಿ ಹೋಗಿದೆ. ಮಗನ ಹೋಲಿಕೆ ಕುರಿತು ಗ್ರಾಮದಲ್ಲಿ ಕೆಲವರು ಔಮಗ ನಿನ್ನಂತಿಲ್ಲಔ ಎಂದು ಹಾಸ್ಯವಾಗಿ ಹೇಳಿದ ಮಾತು ಮಲ್ಲಿಕಾರ್ಜುನನ ಮನಸ್ಸಿನಲ್ಲಿ ಆಳವಾಗಿ ಬೇರೂರಿತು. ಮೊದಲಿಗೆ ಇದನ್ನು ತಮಾಷೆಯಾಗಿ ತೆಗೆದುಕೊಂಡಿದ್ದರೂ, ಕಾಲಕ್ರಮೇಣ ಅದು ಅನುಮಾನವಾಗಿ, ನಂತರ ಕೋಪವಾಗಿ ಮತ್ತು ಕೊನೆಗೆ ಕ್ರೂರ ನಿರ್ಧಾರವಾಗಿ ರೂಪಾಂತರಗೊಂಡಿತು.

ಈ ಮನೋಭಾವದಿಂದ ಕಂಗಾಲಾದ ಮಲ್ಲಿಕಾರ್ಜುನ, ಮಗನ ಮೇಲೆಯೇ ದ್ವೇಷ ಬೆಳೆಸಿಕೊಂಡಿದ್ದಾನೆ. ಕೊನೆಗೆ, ಈ ಅನುಮಾನವನ್ನು ನಿವಾರಿಸಿಕೊಳ್ಳುವ ಹೆಸರಿನಲ್ಲಿ ಮಗನನ್ನೇ ಕೊಲ್ಲುವ ನಿರ್ಧಾರಕ್ಕೆ ಬಂದಿದ್ದಾನೆ. ಮಾರ್ಚ್ 16ರಂದು ಮಗನನ್ನು ಶಾಲೆಗೆ ಸೇರಿಸುವುದಾಗಿ ಹೇಳಿ ಮನೆಯಿಂದ ಕರೆದುಕೊಂಡು ಹೋಗಿದ್ದಾನೆ. ಆದರೆ ನಿಜವಾಗಿ ಆತ ಮಗನನ್ನು ಮಹಾರಾಷ್ಟ್ರದ ಕರಾಡ್ ಜಿಲ್ಲೆಯ ವಡೋಲಿ ಪ್ರದೇಶಕ್ಕೆ ಕರೆದೊಯ್ದಿದ್ದಾನೆ. ಅಲ್ಲಿ ಹರಿಯುತ್ತಿರುವ ಕೃಷ್ಣಾ ನದಿಯ ತೀರದಲ್ಲಿ, ನಿರ್ದಯವಾಗಿ ತನ್ನ ಮಗ ಸಿದ್ಧಾರ್ಥನನ್ನು ನದಿಗೆ ತಳ್ಳುವ ಮೂಲಕ ಹತ್ಯೆಗೈದಿದ್ದಾನೆ. ಈ ಕೃತ್ಯವು ಕೇವಲ ಕ್ರೂರತೆಯಲ್ಲ, ತಂದೆತನದ ಮೌಲ್ಯಗಳನ್ನೇ ಪ್ರಶ್ನಿಸುವಂತಾಗಿದೆ.

ಕೊಲೆಗೈದ ಬಳಿಕ ಮಲ್ಲಿಕಾರ್ಜುನ ಮನೆಗೆ ಮರಳಿ, ಪತ್ನಿಗೆ 'ಮಗನನ್ನು ಶಾಲೆಗೆ ಸೇರಿಸಿ ಹಾಸ್ಟೆಲ್‌ನಲ್ಲಿ ಬಿಟ್ಟಿದ್ದೇನೆ' ಎಂದು ಸುಳ್ಳು ಹೇಳಿದ್ದಾನೆ. ಪತ್ನಿ ಭಾಗ್ಯಶ್ರೀ ಕೂಡ ಮೊದಲಿಗೆ ಇದನ್ನು ನಂಬಿದ್ದಾಳೆ. ಆದರೆ ದಿನಗಳು ಕಳೆಯುತ್ತಿದ್ದಂತೆ ಮಗನ ಬಗ್ಗೆ ಆತಂಕ ಹೆಚ್ಚಾಗತೊಡಗಿದೆ. ವಿಶೇಷವಾಗಿ ಏಪ್ರಿಲ್ 1ರಂದು ಮಗ ಸಿದ್ಧಾರ್ಥನ ಹುಟ್ಟುಹಬ್ಬ ಇರುವ ಹಿನ್ನೆಲೆಯಲ್ಲಿ, ಮಗನನ್ನು ಮನೆಗೆ ಕರೆತರಲು ತಾಯಿ ಒತ್ತಾಯಿಸಿದ್ದಾಳೆ. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನನ ವರ್ತನೆ ಅನುಮಾನಾಸ್ಪದವಾಗಿದ್ದು, ಬಳಿಕ ಆತ ಮನೆ ಬಿಟ್ಟು ಪರಾರಿಯಾಗಿದ್ದಾನೆ. ಇದರಿಂದ ಶಂಕೆಗೊಂಡ ಭಾಗ್ಯಶ್ರೀ ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರು ಸ್ವೀಕರಿಸಿದ ಪೊಲೀಸರು ತಕ್ಷಣ ತನಿಖೆ ಆರಂಭಿಸಿದ್ದಾರೆ. ಮಲ್ಲಿಕಾರ್ಜುನನನ್ನು ಪತ್ತೆಹಚ್ಚಿ ವಿಚಾರಣೆ ನಡೆಸಿದಾಗ, ಆತ ಕೊನೆಗೆ ತನ್ನ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ. ಮಗನನ್ನು ಮಹಾರಾಷ್ಟ್ರದಲ್ಲಿ ಕೃಷ್ಣಾ ನದಿಗೆ ತಳ್ಳಿ ಕೊಲೆಗೈದಿರುವುದಾಗಿ ಬಾಯಿಬಿಟ್ಟಿದ್ದಾನೆ. ಈ ಹೇಳಿಕೆ ಆಧರಿಸಿ ಪೊಲೀಸರು ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ. ಸದ್ಯ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈ ಘಟನೆ ಕೇವಲ ಒಂದು ಅಪರಾಧ ಪ್ರಕರಣವಲ್ಲ; ಇದು ಸಮಾಜದ ಚಿಂತನೆಗೆ ಪ್ರಶ್ನೆ ಮಾಡುವ ಘಟನೆಯಾಗಿದೆ. ಜನರು ತಮಾಷೆಗಾಗಿ ಹೇಳುವ ಮಾತುಗಳು ಕೆಲವರ ಮನಸ್ಸಿನ ಮೇಲೆ ಎಷ್ಟು ಆಳವಾದ ಪರಿಣಾಮ ಬೀರುತ್ತವೆ ಎಂಬುದನ್ನು ಇದು ತೋರಿಸುತ್ತದೆ. ಅಜ್ಞಾನ, ಅನುಮಾನ ಮತ್ತು ಅಹಂಕಾರಗಳು ಸೇರಿಕೊಂಡಾಗ ಮಾನವೀಯತೆಯನ್ನೇ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ತಂದೆಯೇ ಮಗನ ಜೀವ ತೆಗೆದುಕೊಳ್ಳುವ ಮಟ್ಟಕ್ಕೆ ಹೋಗುವುದು ಸಮಾಜದ ದುರಂತದ ಸೂಚಕವಾಗಿದೆ.

ಇದೇ ಸಂದರ್ಭದಲ್ಲಿ ಬೆಂಗಳೂರಿನ ವೈಟ್‌ಫೀಲ್ಡ್ ಪ್ರದೇಶದಲ್ಲಿಯೂ ಮತ್ತೊಂದು ದುಃಖಕರ ಘಟನೆ ನಡೆದಿದೆ. 14 ವರ್ಷದ ಮಗಳು ಕಾರುಣ್ಯಳನ್ನು ಉಸಿರುಗಟ್ಟಿಸಿ ಕೊಂದು ಬಳಿಕ ತಾಯಿ ಸುವರ್ಣಾ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಳಕಿಗೆ ಬಂದಿದೆ. ಇಮ್ಮಡಿಹಳ್ಳಿಯ ಮನೆಯೊಳಗೆ ಈ ಘಟನೆ ನಡೆದಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಪ್ರಕರಣದಲ್ಲಿ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲದಿದ್ದರೂ, ಕುಟುಂಬದೊಳಗಿನ ಒತ್ತಡ, ಮಾನಸಿಕ ಸಮಸ್ಯೆಗಳು ಅಥವಾ ವೈಯಕ್ತಿಕ ಸಂಕಷ್ಟಗಳು ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.



ಈ ಎರಡು ಘಟನೆಗಳೂ ಒಂದೇ ವಿಷಯವನ್ನು ಸ್ಪಷ್ಟಪಡಿಸುತ್ತವೆ ಮನಸ್ಸಿನ ಅಸ್ಥಿರತೆ, ಸಮಾಜದ ಒತ್ತಡ ಮತ್ತು ಅಸಹನೆಗಳು ಸೇರಿಕೊಂಡಾಗ ಅದು ಭೀಕರ ಅಂತ್ಯಕ್ಕೆ ದಾರಿ ಮಾಡಿಕೊಡುತ್ತವೆ. ಸಮಸ್ಯೆಗಳನ್ನು ಸಂವಾದ ಮತ್ತು ಸಹನೆಯ ಮೂಲಕ ಪರಿಹರಿಸುವ ಬದಲು, ಕ್ಷಣಿಕ ಆಕ್ರೋಶದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಜೀವಹಾನಿಗೆ ಕಾರಣವಾಗುತ್ತವೆ.

ಒಟ್ಟಿನಲ್ಲಿ, ವಿಜಯಪುರ ಮತ್ತು ಬೆಂಗಳೂರಿನಲ್ಲಿ ನಡೆದ ಈ ದುರ್ಘಟನೆಗಳು ಸಮಾಜಕ್ಕೆ ಎಚ್ಚರಿಕೆಯ ಗಂಟೆಯಂತಿವೆ. ಕುಟುಂಬದೊಳಗಿನ ಸಮಸ್ಯೆಗಳು, ಹೊರಗಿನವರ ಮಾತುಗಳು ಮತ್ತು ಮಾನಸಿಕ ಒತ್ತಡಗಳನ್ನು ಸರಿಯಾಗಿ ನಿರ್ವಹಿಸದಿದ್ದರೆ ಅದರ ಪರಿಣಾಮ ಎಷ್ಟು ಭೀಕರವಾಗಿರಬಹುದು ಎಂಬುದನ್ನು ಈ ಘಟನೆಗಳು ಮನಗಾಣಿಸುತ್ತವೆ. ಇಂತಹ ಘಟನೆಗಳು ಮರುಕಳಿಸದಂತೆ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ. ☯

# ರಸ್ತೆ ಅಪಘಾತದಲ್ಲಿ ಸಿಪಿಐ ರಘುನಾಥ್ ದುರ್ಮರಣ





ವಿಜಯನಗರ ಜಿಲ್ಲೆಯ ಪೊಲೀಸ್ ಇಲಾಖೆಗೆ ದೊಡ್ಡ ನಷ್ಟ ಉಂಟುಮಾಡಿದ ದುರ್ಘಟನೆ ಒಂದರಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ರಘುನಾಥ್ (43) ಅವರು ದಾರುಣವಾಗಿ ಮೃತಪಟ್ಟಿದ್ದಾರೆ. ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದ್ದು, ರಘುನಾಥ್ ಅವರು ಸ್ಥಳದಲ್ಲಿಯೇ ಪ್ರಾಣ ಕಳೆದುಕೊಂಡಿದ್ದಾರೆ.

ಮೂಲತಃ ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಸಮೀಪದ ನಂದಿಹಳ್ಳಿ ಗ್ರಾಮದ ನಿವಾಸಿಯಾಗಿದ್ದ ರಘುನಾಥ್ ಅವರು 2007ನೇ ಬ್ಯಾಚ್‌ನ ಅಧಿಕಾರಿ ಆಗಿದ್ದರು. ತಮ್ಮ ಸೇವಾ ಜೀವನದಲ್ಲಿ ಅವರು ಹಿರಿಯೂರು ಕ್ರೈಂ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿದ್ದು, ನಂತರ ಖಾನಹೊಸಳ್ಳಿ ಮತ್ತು ಚಿತ್ರದುರ್ಗ ಸಂಚಾರಿ ಠಾಣೆಗಳಲ್ಲಿ ಪಿಎಸ್‌ಐ ಆಗಿ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ಪದೋನ್ನತಿ ಹೊಂದಿ ವಿಜಯನಗರ ಜಿಲ್ಲೆಯ ಡಿಸಿಆರ್‌ಇ ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಮೃತರು ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಅವರ ಪತ್ನಿ ಚಿತ್ರದುರ್ಗ ತಾಲ್ಲೂಕಿನ ಹಾಯಕಲ್ ಗ್ರಾಮದವರು. ಕುಟುಂಬದೊಂದಿಗೆ ಕೆಲವು ದಿನ ಕಳೆಯಲು ಮೂರು ದಿನಗಳ ರಜೆ ಪಡೆದು ಪತ್ನಿಯ ಊರಿಗೆ ಬಂದಿದ್ದ ರಘುನಾಥ್ ಅವರು, ಏಪ್ರಿಲ್ 15, 2026ರಂದು ಮಧ್ಯಾಹ್ನ ಕೊಪ್ಪಳಕ್ಕೆ ತಮ್ಮ ಕಾರಿನಲ್ಲಿ ಹೊರಟಿದ್ದರು. ಜಗಳೂರು ತಾಲ್ಲೂಕಿನ ಮುಸ್ಟೂರು ಮಾರ್ಗವಾಗಿ ಸಾಗುತ್ತಿದ್ದ ವೇಳೆ ಕಡಬನಕಟ್ಟೆ ಗ್ರಾಮದ ಸಮೀಪ ಚಾಲಕನ ನಿಯಂತ್ರಣ ತಪ್ಪಿ, ರಸ್ತೆಬದಿಯ ಮರಕ್ಕೆ ಅಪ್ಪಳಿಸಿದೆ.

ಅಪಘಾತದ ತೀವ್ರತೆಯಿಂದ ಕಾರು ಸಂಪೂರ್ಣ ನುಜ್ಜುಗುಜ್ಜಾಗಿದ್ದು, ಸ್ಥಳೀಯರು ತಕ್ಷಣ ಧಾವಿಸಿ ರಘುನಾಥ್ ಅವರನ್ನು ಹೊರತೆಗೆದರೂ ಅವರು ಆಗಲೇ ಮೃತಪಟ್ಟಿರುವುದು ತಿಳಿದುಬಂದಿದೆ. ಸುದ್ದಿ ತಿಳಿದು ಘಟನಾ ಸ್ಥಳಕ್ಕೆ ಡಿವೈಎಸ್ಪಿ ರುದ್ರೇಶ್, ಉಜ್ಜನ ಕೊಪ್ಪ ಸಿಪಿಐ ಬಿ.ಎಂ. ಸಿದ್ರಾಮಯ್ಯ ಹಾಗೂ ಪಿಎಸ್‌ಐ ಗಾದಿ ಲಿಂಗಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮೃತದೇಹವನ್ನು ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಯಿತು. ಈ ಸಂಬಂಧ ಜಗಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಸಿಪಿಐ ರಘುನಾಥ್ ಅವರು ಸರಳತೆ ಮತ್ತು ಸಜ್ಜನಿಕೆಯ ಪ್ರತಿರೂಪರಾಗಿದ್ದರು. ತಮ್ಮ ಕರ್ತವ್ಯದಲ್ಲಿ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿದ್ದ ಅವರು ಸಹೋದ್ಯೋಗಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಅಪಾರ ಗೌರವ ಪಡೆದಿದ್ದರು. ಅವರ ಅಕಾಲಿಕ ಅಗಲಿಕೆ ಪೊಲೀಸ್ ಇಲಾಖೆಗೆ ಹಾಗೂ ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ. ಇವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದೇವರು ನೀಡಲಿ ಎಂದು 'ಪೊಲೀಸ್ ನ್ಯೂಸ್' ಪತ್ರಿಕೆ ಸಂತಾಪ ಸೂಚಿಸುತ್ತದೆ.

-ಹಿರಿಯೂರು ರಫೀಕ್



# ಕೆಡಿ ಸೆನ್ಸಾರ್ ವಿವಾದ: ಪ್ರೇಮ್ ಅಸಮಾಧಾನ

ಧ್ರುವ ಸರ್ಜಾ ಅಭಿನಯದ 'ಕೆಡಿ' ಚಿತ್ರಕ್ಕೆ ಅನಿರೀಕ್ಷಿತ ಸೆನ್ಸಾರ್ ಅಡಚಣೆ ಎದುರಾಗಿರುವುದಾಗಿ ನಿರ್ದೇಶಕ ಪ್ರೇಮ್ ಆರೋಪಿಸಿದ್ದಾರೆ. ವಿಜಯ್ ಅವರ 'ಜನ ನಾಯಗನ್' ಬಳಿಕ ಕೆವಿಎನ್ ಪ್ರೊಡಕ್ಷನ್ಸ್ ಮತ್ತೊಮ್ಮೆ ಸೆನ್ಸಾರ್ ಸಮಸ್ಯೆಯನ್ನು ಎದುರಿಸುತ್ತಿದೆ ಎಂದು ಹೇಳಲಾಗಿದೆ.

ಚಿತ್ರಕ್ಕೆ ಪ್ರಾದೇಶಿಕ ಸೆನ್ಸಾರ್ ಮಂಡಳಿ ಈಗಾಗಲೇ ವೀಕ್ಷಣೆ ನಡೆಸಿ, ರಕ್ತಪಾತದ ದೃಶ್ಯಗಳ ಹಿನ್ನೆಲೆ 'ಎ' ಪ್ರಮಾಣಪತ್ರ ನೀಡಲು ಸೂಚಿಸಿತ್ತು. ಜೊತೆಗೆ ಒಂದು ಹಾಡಿನ ಎರಡು ಸಾಲು ಬದಲಿಸಲು ಸಲಹೆ ನೀಡಿತ್ತು. ಆದರೆ ಕೇಂದ್ರ ಸೆನ್ಸಾರ್ ಮಂಡಳಿ ಈ ಪ್ರಕ್ರಿಯೆಯನ್ನು ಮುಂದುವರಿಸದೇ, ಚಿತ್ರವನ್ನು ನೇರವಾಗಿ ಪರಿಷ್ಕರಣಾ ಸಮಿತಿಗೆ ಕಳುಹಿಸಿರುವುದು ವಿವಾದಕ್ಕೆ ಕಾರಣವಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಪ್ರೇಮ್, ಯಾವುದೇ ಅಧಿಕೃತ ಮಾಹಿತಿ ನೀಡದೇ ಹೀಗೆ ರಿವೈಸಿಂಗ್ ಕಮಿಟಿಗೆ ಕಳುಹಿಸಿರುವುದು ಅಚ್ಚರಿ ತಂದಿದೆ ಎಂದು ಹೇಳಿದ್ದಾರೆ. ನಿರ್ಮಾಪಕರಿಗಾಗಲಿ, ಪ್ರಾದೇಶಿಕ ಮಂಡಳಿಗಾಗಲಿ ಸರಿಯಾದ ಮಾಹಿತಿ ನೀಡಿಲ್ಲವೆಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಿನಿಮಾಗಳಿಗೆ ಮುಂಬೈ ಕೇಂದ್ರದಿಂದ ಅನ್ಯಾಯವಾಗುತ್ತಿದೆ ಎಂಬ ಅನುಮಾನ ವ್ಯಕ್ತಪಡಿಸಿರುವ ಅವರು, ನಿಯಮಗಳನ್ನು ಮೀರಿ ಪ್ರಕ್ರಿಯೆ ನಡೆಸಲಾಗಿದೆ ಎಂದು ಆರೋಪಿಸಿದ್ದಾರೆ. ಪ್ರಾದೇಶಿಕ ಮಂಡಳಿ ಈಗಾಗಲೇ ಪರಿಶೀಲನೆ ನಡೆಸಿದ್ದರೂ ಅದನ್ನು ಕಡೆಗಣಿಸಿರುವುದು ಸರಿಯಲ್ಲ ಎಂದು ತಿಳಿಸಿದ್ದಾರೆ.



ಪರಿಶೀಲನೆಗೆ ತಾವು ವಿರೋಧಿಗಳಲ್ಲ, ಆದರೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇರಬೇಕು ಎಂದು ಪ್ರೇಮ್ ಹೇಳಿದ್ದಾರೆ. ಇಂತಹ ಕೊನೆಯ ಕ್ಷಣದ ಅಡಚಣೆಗಳು ಕನ್ನಡ ಸಿನಿಮಾಗಳಿಗೆ ಮರುಮರು ಎದುರಾಗುತ್ತಿವೆ. ಇದರಿಂದ ಬಿಡುಗಡೆಯ ವಿಳಂಬ, ಯೋಜನೆಗಳ ವ್ಯತ್ಯಯ ಹಾಗೂ ತಂಡದ ಮೇಲೆ ಒತ್ತಡ ಹೆಚ್ಚುತ್ತದೆ ಎಂದು ಅವರು ಹೇಳಿದ್ದಾರೆ.

# ಡೈಸಿ ಶಾ ಕಹಿ ಅನುಭವ ಬಹಿರಂಗ

ಬಾಲಿವುಡ್ ನಟಿ ಡೈಸಿ ಶಾ ತಮ್ಮ ವೃತ್ತಿಜೀವನದ ಆರಂಭದಲ್ಲಿ ಎದುರಿಸಿದ ಕಹಿ ಅನುಭವವನ್ನು ಹಂಚಿಕೊಂಡಿದ್ದಾರೆ. ಭದ್ರ, ಸೇರಿದಂತೆ ಕನ್ನಡ ಚಿತ್ರಗಳಲ್ಲಿ ನಟಿಸಿರುವ ಅವರು, ಒಂದು ಆಡಿಷನ್ ವೇಳೆ ನಡೆದ ಅಸಭ್ಯ ಘಟನೆ ಕುರಿತು ಮಾತನಾಡಿದ್ದಾರೆ. ಮುಂಬೈನಲ್ಲಿ ನಡೆದ ಆ ಆಡಿಷನ್‌ನಲ್ಲಿ ಹಲವಾರು ನಟಿಯರು ಭಾಗವಹಿಸಿದ್ದರು. ದಕ್ಷಿಣ ಭಾರತದ ನಿರ್ದೇಶಕರೊಬ್ಬರು ತಮ್ಮ ಚಿತ್ರದ ಪಾತ್ರಗಳಿಗೆ ಆಯ್ಕೆ ನಡೆಸುತ್ತಿದ್ದರು. ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಕರೆದು ಮಾತನಾಡಿಸುತ್ತಿದ್ದರು ಎಂದು ಅವರು ತಿಳಿಸಿದ್ದಾರೆ. ತಮ್ಮ ಸರದಿ ಬಂದಾಗ ನಿರ್ದೇಶಕರು ಅಸಭ್ಯವಾಗಿ ವರ್ತಿಸಿ ಕೈ ಹಿಡಿದಿದ್ದಾರೆ ಎಂದು ಹೇಳಿದ್ದಾರೆ. ಈ ವರ್ತನೆ ತಮಗೆ ಅಸಹ್ಯ ಉಂಟುಮಾಡಿದ್ದು, ಮಾನಸಿಕವಾಗಿ ಕಾಡಿದ ಅನುಭವವಾಗಿದೆ ಎಂದು ವಿವರಿಸಿದ್ದಾರೆ. ಈ ಘಟನೆ ಬಳಿಕ ತಕ್ಷಣವೇ ಅಲ್ಲಿಂದ ಹೊರಬಂದು, ಆ ಅವಕಾಶವನ್ನು ತಿರಸ್ಕರಿಸಿದ್ದಾಗಿ ಅವರು ಹೇಳಿದ್ದಾರೆ. ಅವಕಾಶಗಳಿಗಿಂತ ಸ್ವಾಭಿಮಾನ ಮುಖ್ಯ ಎಂಬ ನಿಲುವು ತಮ್ಮದಾಗಿದೆ ಎಂದು ತಿಳಿಸಿದ್ದಾರೆ.

ಚಿತ್ರರಂಗದಲ್ಲಿ ಇಂತಹ ಘಟನೆಗಳು ಇನ್ನೂ ನಡೆಯುತ್ತಿರುವುದು ಆತಂಕಕಾರಿ ಎಂದು ಹೇಳಿರುವ ಅವರು, ಯುವ ನಟಿಯರು ಎಚ್ಚರಿಕೆಯಿಂದಿರಬೇಕು ಹಾಗೂ ಅಸಭ್ಯ ವರ್ತನೆಗೆ ಮೌನವಾಗದೇ ಪ್ರತಿರೋಧಿಸಬೇಕು ಎಂದು ಸಲಹೆ ನೀಡಿದ್ದಾರೆ.

ಇದೇ ಸಂದರ್ಭದಲ್ಲಿ, ಚಿತ್ರರಂಗದಲ್ಲಿ ಇನ್ನೂ ಮುಂದುವರಿಯುತ್ತಿರುವ ಕಾಸ್ಟಿಂಗ್ ಕೌಚ್ ಸಮಸ್ಯೆಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕಾದ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದ್ದಾರೆ. ಪ್ರತಿಭೆಗೆ ಆದ್ಯತೆ ನೀಡುವ ಆರೋಗ್ಯಕರ ವಾತಾವರಣ ನಿರ್ಮಾಣವಾದಾಗ ಮಾತ್ರ ಇಂತಹ ಅಹಿತಕರ ಘಟನೆಗಳು ಕಡಿಮೆಯಾಗುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಅನುಭವವನ್ನು ಬಹಿರಂಗಪಡಿಸಿರುವುದು ಇತರರಿಗೆ ಸಹ ಧೈರ್ಯ ನೀಡಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಇಂತಹ ಘಟನೆಗಳನ್ನು ಬೆಳಕಿಗೆ ತರುವುದು ಸಮಾಜದಲ್ಲಿ ಜಾಗೃತಿ ಮೂಡಿಸಲು ಅತ್ಯಂತ ಮುಖ್ಯ ಎಂದು ಹೇಳಿದ್ದಾರೆ.



ಕೇರಳ ಸಾಹಿತ್ಯ ಉತ್ಸವದ ವೇದಿಕೆಯಲ್ಲಿ ನಟ ಪ್ರಕಾಶ್ ರಾಜ್ ನೀಡಿದ ಹೇಳಿಕೆ ಇದೀಗ ಭಾರೀ ವಿವಾದಕ್ಕೆ ಕಾರಣವಾಗಿದೆ. ರಾಮಾಯಣವನ್ನು ಉದಾಹರಣೆಯಾಗಿ ತೆಗೆದುಕೊಂಡು ಮಾತನಾಡಿದ ಅವರ ಮಾತುಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ವ್ಯಾಪಕ ಟೀಕೆಗೆ ಗುರಿಯಾಗಿದೆ. ತಮ್ಮ ಭಾಷಣದಲ್ಲಿ ರಾಮ ಮತ್ತು ಲಕ್ಷ್ಮಣರನ್ನು ಕುರಿತು ವ್ಯಂಗ್ಯವಾಗಿ ಮಾತನಾಡಿದ ಪ್ರಕಾಶ್ ರಾಜ್, ಅವರನ್ನು ಉತ್ತರ ಭಾರತದಿಂದ ಬಂದ ಕಾರ್ಮಿಕರಂತೆ ಚಿತ್ರಿಸಿ, ದಕ್ಷಿಣ ಭಾರತದ ತೋಟದಲ್ಲಿ ಹಣ್ಣು ಕದ್ದು ತಿಂದರು ಎಂಬ ಅರ್ಥದಲ್ಲಿ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಗಳನ್ನು ಹಲವರು ಅವಮಾನಕಾರಿಯೆಂದು ಪರಿಗಣಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



# ಪ್ರಕಾಶ್ ರಾಜ್ ಹೇಳಿಕೆ ವಿವಾದ

ಈ ವಿಡಿಯೋ ವೈರಲ್ ಆದ ಬಳಿಕ, ನೆಟ್ಟಿಗರು ಮತ್ತು ಕೆಲ ಧಾರ್ಮಿಕ ವಲಯಗಳು ಪ್ರಕಾಶ್ ರಾಜ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತಿದ್ದಾರೆ. ರಾಮಾಯಣದಂತಹ ಮಹತ್ವದ ಪೌರಾಣಿಕ ಕತೆಯನ್ನು ಹಾಸ್ಯ ಮಾಡುವ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ಕೆಲವರು ಅವರ ಹೇಳಿಕೆಗಳನ್ನು ರಾಜಕೀಯ ಟೀಕೆಯ ಭಾಗವೆಂದು ನೋಡಿದರೆ, ಇನ್ನು ಕೆಲವರು ಇದು ಅನಗತ್ಯ ವಿವಾದ ಸೃಷ್ಟಿಸುವ ಪ್ರಯತ್ನ ಎಂದು ಅಭಿಪ್ರಾಯಪಟ್ಟಿದ್ದಾರೆ. ಜೊತೆಗೆ, ಕಾರ್ಯಕ್ರಮದಲ್ಲಿ ಇದ್ದವರು ಅವರ ಮಾತುಗಳಿಗೆ ಪ್ರತಿಕ್ರಿಯೆ ನೀಡದಿರುವುದಕ್ಕೂ ಪ್ರಶ್ನೆಗಳು ಎದ್ದಿವೆ. ಒಟ್ಟಿನಲ್ಲಿ, ಪ್ರಕಾಶ್ ರಾಜ್ ತಮ್ಮ ಹೇಳಿಕೆಗಳಿಂದ ಮತ್ತೊಮ್ಮೆ ಸುದ್ದಿಯಲ್ಲಿದ್ದು, ಈ ವಿಚಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರ್ಚೆಗೆ ದಾರಿ ಮಾಡಿಕೊಟ್ಟಿದೆ.

# ಪ್ರಶಸ್ತಿ ವೇದಿಕೆಯಲ್ಲಿ ಹೊಂಬಾಳೆ ಹೆಸರು ಉಲ್ಲೇಖಿಸದ ರಿಷಬ್ ಶೆಟ್ಟಿ!




ಮುಂಬೈನಲ್ಲಿ ನಡೆದ ರಾಷ್ಟ್ರಮಟ್ಟದ ಐಎನ್ಸಿಎ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಕಾಂತಾರ ಚಾಪ್ಟರ್ 1' ಸಿನಿಮಾ ಭಾರೀ ಯಶಸ್ಸು ಸಾಧಿಸಿ ಅನೇಕ ಪ್ರಮುಖ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಈ ಚಿತ್ರಕ್ಕೆ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಲಭಿಸಿದ್ದು, ರಿಷಬ್ ಶೆಟ್ಟಿ ಅವರಿಗೆ ಅತ್ಯುತ್ತಮ ನಟ ಹಾಗೂ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗಳು ದೊರೆತಿವೆ. ಇದೇ ವೇಳೆ ಚಿತ್ರದ ನಾಯಕಿ ರುಕ್ಮಿಣಿ ವಸಂತ್ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಸಿಕ್ಕಿದೆ. ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ ರಿಷಬ್ ಶೆಟ್ಟಿ ಅವರು ಚಿತ್ರದ ಯಶಸ್ಸಿಗೆ ಕಾರಣವಾದ ತಂತ್ರಜ್ಞರು, ಕಲಾವಿದರು ಹಾಗೂ ಸಂಪೂರ್ಣ ತಂಡದವರಿಗೆ ಕೃತಜ್ಞತೆ ಸಲ್ಲಿಸಿದರೂ, ನಿರ್ಮಾಪಕ ಸಂಸ್ಥೆಯಾದ ಹೊಂಬಾಳೆ ಫಿಲಂಸ್ ಹೆಸರನ್ನು ಉಲ್ಲೇಖಿಸದಿರುವುದು ಗಮನಾರ್ಹವಾಗಿದೆ. ಈ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿದ್ದು, ಕೆಲವರು ಇದನ್ನು ಸಾಮಾನ್ಯ ಘಟನೆ ಎಂದು ಹೇಳುತ್ತಿದ್ದರೆ, ಇನ್ನು ಕೆಲವರು ಇದಕ್ಕೆ ವಿಶೇಷ ಕಾರಣವಿರಬಹುದೇ ಎಂಬ ಪ್ರಶ್ನೆ ಎತ್ತುತ್ತಿದ್ದಾರೆ.

ಇನ್ನೊಂದೆಡೆ, ಈ ವಿಷಯದ ಬಗ್ಗೆ ಚಿತ್ರತಂಡದಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಹೊರಬಂದಿಲ್ಲ. ಅಭಿಮಾನಿಗಳು ಹಾಗೂ ಸಿನಿಪ್ರಿಯರು ಈ ಘಟನೆಗೆ ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದು, ಮುಂದಿನ ದಿನಗಳಲ್ಲಿ ರಿಷಬ್ ಶೆಟ್ಟಿ ಅಥವಾ ನಿರ್ಮಾಪಕರಿಂದ ಸ್ಪಷ್ಟನೆ ಬರಬಹುದೇ ಎಂಬ ನಿರೀಕ್ಷೆಯೂ ವ್ಯಕ್ತವಾಗುತ್ತಿದೆ. 'ಕಾಂತಾರ' ಸರಣಿಯ ಮುಂದಿನ ಭಾಗದ ಬಗ್ಗೆ ಈಗಾಗಲೇ ಹೆಚ್ಚಿನ ನಿರೀಕ್ಷೆ ಇದ್ದು, ಈ ಘಟನೆ ಆ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದೆ.

Vol. 41 No. 46 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
policenewsreporter@gmail.com http//policenews.news Police News police_news